UNIVERSAL LIBRARY

OU_200435

UNIVERSAL LIBRARY

# ಲಲಿತ ಸಾಹಿತ್ಯ ಮಾಲೆ, ಧಾರವಾಡ

**ವರುಷಕ್ಕೆ ಆರು ನೂರು ಪುಟದ ಸಾಹಿತ್ಯ**

**ಚಂದಾ: ರಜಿಸ್ಟರ ಅಂಚೆಯಿಂದ ೫ ರೂ.**

## ಮೊದಲನೆಯ ವರುಷ

| | | | | | |
|---|---|---|---|---|---|
| ೧. | ಚಿಗುರು (೨ನೆ ಆವೃತ್ತಿ) | ದಿ\|\| ಸೌ. ಗೌರಮ್ಮ | ೧ | ೪ | ೦ |
| ೨. | ಅಕ್ಕಾಜಿ | ಶರಚ್ಚಂದ್ರ | ತೀರಿವೆ | | |
| ೩. | ಕುಲದೀಪಕರು | ಸಿದ್ಧವನಹಳ್ಳಿ | ,, | | |
| ೪. | ಸಾಹಿತ್ಯರತ್ನ | ಅ. ನ. ಕೃಷ್ಣರಾಯ | ,, | | |

## ಎರಡನೆಯ ವರುಷ

| | | | | | |
|---|---|---|---|---|---|
| ೧. | ಮುದ್ದಿನಕಣಿ | ಚಿಕ್ಕೊವ್ಹ | ,, | | |
| ೨. | ಸುಮತಿ ಮತ್ತು ಅನುರಾಧಾ | ಶರಚ್ಚಂದ್ರ | ೧ | ೪ | ೦ |
| ೩. | ಡೊಂಕುಬಾಲ | ನಾ. ಕಸ್ತೂರಿ | ೧ | ೮ | ೦ |
| ೪. | ಕಸ್ತೂರಿ | ಶ್ರೀಮತಿ 'ವಾಣಿ' | ೧ | ೪ | ೦ |
| ೫. | ಶೈಲಾಜಿ | ಏಕಾಂಕಗಳ ಸಂಗ್ರಹ | ೧ | ೪ | ೦ |
| ೬. | ಇಂದಿನ ಕರ್ನಾಟಕ | ಸಂ: ವಿ. ಕೃ. ಗೋಕಾಕ | ೧ | ೮ | ೦ |

## ಮೂರನೆಯ ವರುಷ

| | | | | | |
|---|---|---|---|---|---|
| ೧. | ಹಕ್ಕಿಯ ನೋಟ | ದತ್ತಾತ್ರೇಯ | ೦ | ೧೨ | ೦ |
| ೨. | ಗೃಹಿಣಿ | ಡಿ. ಹನುಮಂತರಾವ್ | ೧ | ೮ | ೦ |
| ೩. | ಕವಿವರ ಬೇಂದ್ರೆ | ವಿವಿಧ ಲೇಖಕರು | ೧ | ೮ | ೦ |
| ೪-೫ | ನಿರ್ಮಲಾ | ದಿ\|\| ಪ್ರೇಮಚಂದ್ | ೩ | ೪ | ೦ |
| ೬. | ಮಾದಯ್ಯ ಮತ್ತು ವೇಣು ಇವರ ಕೊನೆಯ ದಿನಗಳು | ಭಾರತಿಸುತ | ೧ | ೮ | ೦ |

**ಮಾರಾಟಗಾರರು:**

**ಮನೋಹರ ಗ್ರಂಥ ಭಾಂಡಾರ, ಧಾರವಾಡ**

**ಕನ್ನಡ ಪುಸ್ತಕಾಲಯ, ಬೆಳಗಾವಿ**

ಲ. ಸಾ. ಮಾಲೆಯ ೩ನೆಯ ವರುಷದ ೬ನೆಯ ಕುಡಿ

ಮಾವಯ್ಯ ಮತ್ತು ವೇಣು

ಇವರ

# ಕೊನೆಯ ದಿನಗಳು

ಲೇಖಕ :

**'ಭಾರತೀಸುತ' ಕೊಡಗು**

ಲಲಿತ ಸಾಹಿತ್ಯ ಮಾಲೆ

ಧಾರವಾಡ

ಅಕ್ಟೋಬರ
**೧೯೪೬**

ಬೆಲೆ
**೧-೮-೦**

ಸಂಪಾದಕರು :

**ಗೋವಿಂದ ವೆಂಕಟೇಶ ಚುಳಕಿ**

ಮಾರಾಟಗಾರರು :

**ಮನೋಹರ ಗ್ರಂಥ ಭಾಂಡಾರ, ಧಾರವಾಡ**

**ಕನ್ನಡ ಪುಸ್ತಕಾಲಯ, ಬೆಳಗಾವಿ**

ಲ. ಸಾ. ಮಾಲೆಯ ೪ನೆಯ ವರುಷದ
ಮೊದಲನೆಯ ಕುಡಿಯು

**ಬೇಗನೆ**
**ಪ್ರಕಟವಾಗುವದು**

ಪ್ರಕಾಶಕರು
ದ. ಬಾ. ಕುಲಕರ್ಣಿ
ಮ. ಗ್ರ. ಭಾಂಡಾರ
ಧಾರವಾಡ

ಮುದ್ರಕರು
ಎಸ್. ಎಸ್. ಬೆಂಗೇರಿ
ವಿಜಯ ಮುದ್ರಾಲಯ
ಧಾರವಾಡ

# ಸಂಪಾದಕರ ಅರಿಕೆ

ಈ ‘ಮಾದಯ್ಯ ಮತ್ತು ವೇಣು ಇವರ ಕೊನೆಯ ದಿನಗಳು’ ಎಂಬ ಪುಸ್ತಕವೇ ನಮ್ಮ ಲ. ಸಾ. ಮಾಲೆಯ ಈ ವರುಷದ ೬ನೆಯ ಕುಡಿಯು. ಈ ವರುಷದಲ್ಲಿ ಸಲ್ಲಿಸಬೇಕಿದ್ದ ಆರೂ ಪುಸ್ತಕಗಳನ್ನು ಸಲ್ಲಿಸಿದ್ದಾಯಿತು. ಈ ಎರಡು ನೀಳ್ಗತೆಗಳನ್ನು ಬರೆದುಕೊಟ್ಟು, ನಮ್ಮ ಮಾಲೆಯಲ್ಲಿ ಪ್ರಕಟಿಸಲು ಅನುಮತಿಯನ್ನಿತ್ತ ಶ್ರೀ. ಭಾರತೀಸುತ ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ನಮ್ಮ ಲ. ಸಾ. ಮಾಲೆಯು ಜೂನ ೧೯೪೨ ರಲ್ಲಿ ಆರಂಭವಾಗಿ, ಅಕ್ಟೋಬರ ೧೯೪೬ರಲ್ಲಿ ತನ್ನ ಮೂರು ವರುಷಗಳನ್ನು ದಾಟಿತೆಂದು ಹೇಳಲು ಹರುಷವೆನಿಸುತ್ತದೆ. ಅಂದರೆ ಮಾಲೆಗೆ ನಾಲ್ಕು ವರುಷ ತುಂಬಿದರೂ ಪ್ರಕಾಶನ ದೃಷ್ಟಿಯಿಂದ ನೋಡಿದಲ್ಲಿ ಮೂರೇ ವರುಷಗಳಾಗಿವೆ. ಈ ಅವಧಿಯಲ್ಲಿ ನಮ್ಮ ಪ್ರಕಟನೆಗಳು ವೇಳೆಗೆ ಸರಿಯಾಗಿ ಹೊರಡದಿರಲು ಅನೇಕ ತೊಂದರೆಗಳಿದ್ದವು. ಯುದ್ಧಾಸಕ್ತ ಜಗತ್ತು; ಕಾಗದದ ಅಭಾವ; ಮುದ್ರಣದ ಅನಾನುಕೂಲತೆ ಮೊದಲಾದ ಆಪತ್ತುಗಳಿಗೀಡಾಗಿ ನಮ್ಮ ಈ ಮಾಲೆಯು ಬದುಕಿದುದೇ ಮಹಾ ಪ್ರಯಾಸವಾಯಿತೆಂದು ಹೇಳದಿರಲಾರೆವು. ಸಮಗ್ರ ಕರ್ನಾಟಕದಲ್ಲಿ ನಮಗೆ ದೊರೆತ ೧೫೦ ಜನ ಚಂದಾದಾರರು ನಮ್ಮ ಮಾಲೆಯನ್ನು ಪೋಷಿಸುತ್ತ ಬಂದಿದ್ದಾರೆ! ಇಷ್ಟೇ ಚಂದಾದಾರರು ದೊರೆಕಿದ್ದರೂ ನಾವು ಧೈರ್ಯಗೆಡದೆ ಮಾಲೆಯನ್ನು ನಡೆಸುವದೆಂದು ಮುಂದುವರಿಯುತ್ತಿದ್ದೇವೆ.

ಈಗ ಯುದ್ಧವೂ ನಿಂತಿದೆ; ಶಾಂತಿ ಸ್ಥಾಪನೆಯಾಗುವ ಚಿನ್ಹಗಳೂ ತಲೆದೋರುತ್ತಲಿವೆ; ಎಲ್ಲ ತರದ ಸಾಮುಗ್ರಿಗಳ ಅಭಾವವೂ ದೂರಾಗುತ್ತಲಿದೆ.

ಅಂದಮೇಲೆ ನಮ್ಮ ಪ್ರಕಾಶನ ಕಾರ್ಯಕ್ಕೆ ಅನುಕೂಲ ಕಾಲ ಒದಗಿ ಬರುತ್ತದೆಂದು ನಂಬಿ, ಇನ್ನು ಮುಂದೆ ನಮ್ಮ ಪ್ರಕಟನೆಗಳು ಸಕಾಲದಲ್ಲಿ ಹೊರಡಬಹುದೆಂದು ಆಶಿಸಿದ್ದೇವೆ.

ಈ ಪುಸ್ತಕದ ಮುದ್ರಣ ಕಾರ್ಯದಲ್ಲಿ ಆಸ್ಥೆವಹಿಸಿ, ನಮ್ಮ ಮೇಲಿನ ಮಮತೆಯಿಂದ ನಮ್ಮ ತೊಂದರೆಗಳನ್ನು ಗಮನಿಸಿ, ನೆರವನ್ನು ನೀಡಿ, ಬಲು ಬೇಗನೆ ಈ ಪುಸ್ತಕವನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಂಥ ವಿಜಯ ಮುದ್ರಣಾಲಯದ ಒಡೆಯರಾದ ಶ್ರೀ. ನಾ. ಅ. ಹೊಸಕೇರಿ ಅವರಿಗೆ ನಾವು ಎಂದಿಗೂ ಕೃತಜ್ಞರಾಗಿದ್ದೇವೆ.

'ಮೂರು ದಾಟಿದರೆ ನೂರು ಕಾಣುವದು' ಎಂಬುದನ್ನು ನಂಬಿ, ನಮ್ಮ ಮಾಲೆಯ ಕಾರ್ಯವು ಭರದಿಂದ ಸಾಗಿಸುವಂತೆ ಪರಮಾತ್ಮನು ನಮಗೆ ಶಕ್ತಿಯನ್ನು ಕೊಡುವನೆಂದೂ, ಸಾಹಿತ್ಯಪ್ರೇಮಿಗಳಾದ ಕನ್ನಡಿಗರು ಔದಾರ್ಯದಿಂದ ನೆರವನ್ನು ನೀಡುವರೆಂದೂ ಹಾರೈಸಿದ್ದೇವೆ.

**ಗೋ. ವೆ. ಚುಳಕಿ**

---

## ಪರಿವಿಡಿ


| | | |
|---|---|---|
| ೧. | ಮಾದಯ್ಯನ ಕೊನೆಯ ದಿನಗಳು | ೧ |
| ೨. | ವೇಣುವಿನ ಕೊನೆಯ ದಿನಗಳು | ೫೦ |

# ಮಾದಯ್ಯನ ಕೊನೆಯ ದಿನಗಳು

## ೧

ಮಾದಯ್ಯನ ಊರು, ಕುಟುಂಬ, ನೆಂಟರಿಷ್ಟರು – ಈ ಹೊಲಬುಗಳನ್ನು ಆ ಊರಲ್ಲಿ ಯಾರೂ ಅರಿಯರು. ಅವನು ಆ ಊರಿಗೆ ಬಂದು ನೆಲಸಿ ನಾಲ್ಕಾರು ವರುಷಗಳಾಗಿದ್ದುವು. ಅವನೂ ಮಂಜಮ್ಮನೂ ಜತೆಗೂಡಿ ಚೆಲುವು ಸಂಸಾರವನ್ನು ಹೂಡಿದ್ದರು. ಅವರ ದಾಂಪತ್ಯವು ಬಿಡುಗಣ್ಣರ ಎದೆಗಳಲ್ಲಿ ಕಿಚ್ಚನ್ನು ಮೂಡಿಸತಕ್ಕುದು. ಊರವರು ಅವರ ಬಾಳುವೆಯನ್ನು ನೋಡಿ ಬೆರಳು ಕಚ್ಚಿಕೊಳ್ಳುತ್ತಿದ್ದರು; ಈ ಬಡ ದಂಪತಿಗಳಿಗೆ ದೈವವು ನಲವಿನ ಬುಗ್ಗೆಯನ್ನು ನೀಡಿದೆಯೆಂದು ಅವರು ಅಸೂಯಾ-ಕುಲರಾಗುತ್ತಿದ್ದರು.

ಹೋಟೆಲು ವೃತ್ತಿಯಿಂದ ಮಾದಯ್ಯ ತನ್ನ ಬಾಳುವೆಯನ್ನು ಸಾಗಿಸುತ್ತಿದ್ದ. ಮಾದಯ್ಯನ ಹೋಟೆಲು ಎಂದರೆ ಮೈಸೂರಿನ ಇಂದ್ರಭವನ ಆನಂದಭವನಗಳ ಮಾದರಿಯಲ್ಲ. ಅದೊಂದು ಪುಟ್ಟ ಹೋಟೆಲು. ಅಚ್ಚುಕಟ್ಟಾದ ಕೋಣೆಗಳು, – ಶುಚಿಯಾದ ಎರಡು ಮೂರು ಬಗೆಯ ತಿಂಡಿ ತಿನಸುಗಳು, – ಕಾಫಿ ಮತ್ತು ಚಹಾ, – ಇಷ್ಟು ನುಡಿಗಳಲ್ಲಿ ಮಾದಯ್ಯನ ಚಂದ್ರಭವನದ ವಿವರಣೆಯು ಕೊನೆಗೊಳ್ಳುವದು. ಊರ ಜನರೆಲ್ಲರೂ (ಹಾರುವರನ್ನು ಮಾತ್ರ ಬಿಟ್ಟು) ಮಾದಯ್ಯನ ನಿತ್ಯದ ಗಿರಾಕಿಗಳು. ಮಾದಯ್ಯನ ಕೈಯ ತಿನಸುಗಳು ಗಿರಾಕಿಗಳ ನಾಲಗೆಯ ಸವಿಯನ್ನು ತಣಿಸುತ್ತಿದ್ದರೆ, – ಮಾದಯ್ಯ ತುಟಿಗಳಿಂದ ಬೀಸುವ ನಗುಮಾತುಗಳ ತಂಬೆಲರು, ಗಿರಾಕಿಗಳ ಎದೆಮುಗುಳುಗಳನ್ನು ಅರಳಿಸುತಿದ್ದಿತು. ಆದದರಿಂದಲೇ ಬೆಳಗುಬೈಗುಗಳಲ್ಲಿ ಜನರ ನೆರವಿಯು ಮಾದಯ್ಯನ ಹೋಟೆಲಿನಲ್ಲಿ

ಸಂವಣಿಸುತಿದ್ದಿತು; ಚಹಾಗ್ಲಾಸು ತಟ್ಟೆಗಳ ಧ್ವನಿಯು ಗಾಳಿಯಲ್ಲಿ ಬೆರೆಯುತ್ತಿದ್ದಿತು. ಮಂದಿಯ ಎದೆಗಳಿಂದ ಪೊಮ್ಮಿದ ನಗುಮಾತುಗಳು ಬಾಂದಳವನ್ನು ಸೇರುತಿದ್ದವು.

ಮಾದಯ್ಯ ಮತ್ತು ಮಂಜಮ್ಮ ಇವರ ಪೂರ್ವ ಚರಿತ್ರೆಯನ್ನು ಬಲ್ಲವರು ಆ ಊರಲ್ಲಿಲ್ಲ. ಅವರ ಬಗ್ಗೆ ಹಲವು ಪರಿ ಆಡಿಕೊಳ್ಳುತ್ತಿದ್ದರು. "ಮಾದಯ್ಯ ಒಕ್ಕಲಿಗ; ಪುತ್ತೂರಿನಿಂದ ಹಾರುವರ ಹೆಣ್ಣನ್ನು ಹಾರಿಸಿಕೊಂಡು ಬಂದಿದಾನೆ" ಎಂದು ಕೆಲಬರು ಉಸುರಿದರೆ, ಇನ್ನು ಹಲವರು "ಆತ ಉಡುಪಿಯ ಬ್ರಾಹ್ಮಣ; ನಿಜವಾದ ಹೆಸರು ಮಾಧವನೆಂದು. ಆದುದರಿಂದಲೇ ಆತನ ಕೈಗಳು ಅಟ್ಟ ತಿನಸುಗಳು ಈಸು ಸವಿ. ಕುಂದಾಪುರದಿಂದ ನಾಡವರ ಹೆಣ್ಣುಮಗಳೊಬ್ಬಳನ್ನು ಅಟ್ಟಿಕೊಂಡು ಬಂದಿದಾನೆ" ಎಂದೆನುತ್ತಿದ್ದರು.

ಈ ದಂಪತಿಗಳ ಪೂರ್ವ ಚರಿತ್ರೆಯ ಹೊಲಬು ನನಗೂ ಇಲ್ಲ. ಆದುದರಿಂದ ಮಾದಯ್ಯ ಒಕ್ಕಲಿಗನೋ, ಅಲ್ಲ ಬ್ರಾಹ್ಮಣನೋ; ಮಂಜಮ್ಮ ಹಾರುವರ ಹೆಣ್ಣೋ, ಅಲ್ಲ ನಾಡವರ ಸಂತಾನವೋ ಎಂಬ ಚರ್ಚೆಗೆ ನಾನು ಇಳಿಯುವುದಿಲ್ಲ. ಆದರೆ ಅವರಿಬ್ಬರೂ ಮಾನವರು, ಹೃದಯ ಬುದ್ಧಿಗಳಿಹ ಮಾನವರು ಎಂಬದನ್ನು ಮಾತ್ರ ನಾನು ಬಲ್ಲೆ.

ಮಂಗಳೂರು ಕಡೆಯ ಒಂದೆರಡು ವಾರಪತ್ರಿಕೆಗಳು ಮಾದಯ್ಯನಿಗೆ ಬರುತಿದ್ದವು. ಅವು ಹೋಟೆಲಿನಲ್ಲಿ ನೆರೆಯುತಿದ್ದ ಜನರ ಮಿದುಳುಗಳಿಗೆ ಆಹಾರವನ್ನು ಒದವಿಸುತಿದ್ದವು. ಇತ್ತ ಚಹಾ ತಿಂಡಿಗಳನ್ನು ಸವಿಯುತ್ತಾ ಮಾದಯ್ಯನ ಗಿರಾಕಿಗಳು ವಾರದ ಸುದ್ದಿಗಳನ್ನು ಚರ್ಚಿಸುತಿದ್ದರು. ಆಗಾಗ ಮಾದಯ್ಯನ ಟೀಕೆ ವಿಮರ್ಶೆಗಳು ಅವರ ಮಾತುಕತೆಗಳಿಗೆ ಹೊಸ ಕಳೆಯನ್ನು ತೊಡಿಸುತಿದ್ದವು.

× × × ×

ಅಂದು ಗಿರಾಕಿಗಳು ನಾಲ್ಕು ಮಂದಿ ಕುಳಿತಿದ್ದರು ಹೊಟೆಲಿನಲ್ಲಿ. ಅವರ ಮುಂದೆ ಇಡ್ಲಿ ಸಾಂಬಾರಗಳ ತಟ್ಟೆಗಳಿದ್ದವು. ಅವರ ಕಣ್ಣುಗಳು ಚಹಾದ ಆಗಮನವನ್ನು ಇದಿರು ನೋಡುತಿದ್ದವು. ಆಗ ಮಾದಯ್ಯ ಚಹಾ ಕಪ್ಪುಗಳನ್ನು ತಂದಿರಿಸಿದ ಅವರ ಮುಂದೆ. ಅನಿತರಲ್ಲಿ ಪೋಸ್ಟುಮಾನ ಬಂದು

ಎರಡು ಪತ್ರಿಕೆಗಳನ್ನು ಮೇಜದ ಮೇಲೆ ಒಗೆದ. ಮಾದಯ್ಯನ ಕರಗಳು ಪತ್ರಿಕೆಯನ್ನು ತೆಗೆದುಕೊಂಡುವು. ಮೇಲಿನ ಹೊದಿಕೆಯನ್ನು ಬಿಚ್ಚಿದು ದಾಯಿತು. ಅವನ ಕಣ್ಣುಗಳು ಪತ್ರಿಕೆಯ ತಲೆಬರಹಗಳನ್ನು ನೋಡಿದುವು. ಪತ್ರಿಕೆಯನ್ನು ಓದುತಿದ್ದಂತೆಯೇ ಅವನ ಕಣ್ಣುಗಳು ಬೆಳಗಿದವು; ಧಮನಿ ಗಳಲ್ಲಿನ ನೆತ್ತರು ಬಿಸಿಯೇರಿತು. ಹೃದಯಾಂತರಾಳದಲ್ಲಿ ಮೂಡಿದ ಭಾವ ಗಳು ಮೊಗದಲ್ಲಿ ಬಂದು ನೆಲಸಿದುವು.

"ಸಮಾಚಾರವೇನು ?" ಇಡ್ಲಿ ಸಾಂಬಾರವನ್ನು ಗಂಟಲೊಳಕ್ಕೆ ಇಳಿ ಸುತಿದ್ದ ಚೆನ್ನಪ್ಪನ ಕೊರಳಿನಿಂದ ಪ್ರಶ್ನೆಯು ಹೊರಟಿತು.

ಆದರೆ ಚೆನ್ನಪ್ಪನ ನುಡಿಗಳು ಪತ್ರಿಕೆಯ ಸುದ್ದಿಗಳನ್ನು ಸವಿಯುವ ದರಲ್ಲಿ ಮುಳುಗಿದ್ದ ಮಾದಯ್ಯನ ಚಿತ್ತವನ್ನು ಸ್ಪರ್ಶಿಸಲಿಲ್ಲ. ಅವನ ಕಣ್ಣು ಗಳು ಪತ್ರಿಕೆಯ ಹಾಳೆಗಳಿಂದ ಕದಲದಾದವು.

"ಪತ್ರಿಕೆಯಲ್ಲಿ ಏನೋ ವಿಶೇಷ ಸುದ್ದಿಯಿರುವಂತೆ ತೋರುತ್ತದೆ. ಗಟ್ಟಿ ಯಾಗಿ ಓದಿ ಹೇಳಬಾರದೇ ಮಹಾರಾಯ !" ಮಾದಯ್ಯನ ಕೊರಳಿಂದ ಮಾರನ್ನು ನಿರೀಕ್ಷಿಸಿ ಬೇಸತ್ತ ಚೆನ್ನಪ್ಪ ಮರಳಿ ನುಡಿದ. ನುಡಿದ ಎಂಬವರ ಬದಲು ಗುಡುಗಿದ ಎಂಬುದು ಲೇಸು.

"ಹೋರಾಟವು ಆರಂಭವಾಯಿತು." ಪತ್ರಿಕೆಯಿಂದ ಕಣ್ಣುಗಳನ್ನು ಮೇಲಕ್ಕೆತ್ತದೆ ಮಾದಯ್ಯ ಉಸುರಿದ. "ಕದನದ ಕಾರ್ಮುಗಿಲು ನಾಡಿನಲ್ಲೆಲ್ಲಾ ಪಸರಿಸಲಿದೆ."

"ಏನಾಯಿತು ! ಏನಾಯಿತು !" ನಾಲ್ಕು ಕೊರಳುಗಳ ಉಲಿಗಳು ಏಕಕಾಲಕ್ಕೆ ಮೊಳಗಿದವು.

"ಸರಕಾರದ ಕಾಯಿದೆಗಳನ್ನು ಮುರಿಯಲು ಗಾಂಧೀಜಿ ಹೊರಟಿದ್ದಾರೆ. ಉಪ್ಪಿನ ಕಾಯಿದೆಯನ್ನು ಭಂಗ ಮಾಡಲೋಸುಗ ದಂಡಿ ಯಾತ್ರೆಯನ್ನು ಆರಂಭಿಸಿದಾರೆ."

ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸಲೋಸುಗ ಗಾಂಧೀಜಿಯವರು ತೊಡ ಗಿದ್ದ ದಂಡಿ ಯಾತ್ರೆಯ ಸುದ್ದಿಯನ್ನು ಮಾದಯ್ಯ ಓದಿಹೇಳಿದ. ಗಿರಾಕಿಗಳು ಸದ್ದಿಲ್ಲದೆ ಸುದ್ದಿಯನ್ನು ಕೇಳಿದರು.

ಓದು ಮುಗಿದಿತು. ಎಲ್ಲರ ಎದೆಗಳಿಂದಲೂ ಬಿಸಿಯುಸಿರುಗಳು ಹೊಮ್ಮಿದವು. ಎಳೆಬಳ್ಳಿಯ ಬುಡವನ್ನೇ ಹಿಡಿದು ಕುಲುಕುವಂತೆ, ಆವುದೋ ಒಂದು ಅವಿದಿತ ಚೇತನವು ಅವರ ಹೃದಯದಂತರಾಳವನ್ನು ಕಲಕಿತು. ಕೆಲವು ನಿಮಿಷಗಳ ತನಕ ಅವರು ಮಾತಾಡಲಿಲ್ಲ. ಅನಂತರ ಅವರು ಮುಂಬರಲಿಹ ಉಪ್ಪು ಸತ್ಯಾಗ್ರಹವನ್ನು ಕುರಿತು ಚರ್ಚಿಸತೊಡಗಿದರು. ಹಲವರು "ಗಾಂಧೀಜಿಗೆ ಹಿಡಿದ ಹೊಸ ಹುಚ್ಚು ಇದೆಂದು" ಉಸುರಿದರೆ, ಕೆಲರು "ಸರಕಾರದ ಮುಂಡಾ ಮೋಚಿದಂತೆಯೇ ಸರಿ. ಗಾಂಧೀಜಿಯೇ ಗೆಲುವರು" ಎಂದರು. ಅವರ ವಾದವಿವಾದಗಳಲ್ಲಿ ಬಹು ಕಡಿಮೆ ಮಾತಾಡಿದವನೆಂದರೆ ಮಾದಯ್ಯನೊಬ್ಬನು ಮಾತ್ರ.

× × × ×

ವಾರಗಳು ಗಾಡಿಯ ಚಕ್ರದಂತೆ ಉರುಳಿದವು. ಪತ್ರಿಕೆಗಳು ಹೊಸ ಹೊಸ ಸುದ್ದಿಗಳನ್ನು ತರುತಿದ್ದವು. ಸತ್ಯಾಗ್ರಹದ ಕಾರ್ಮುಗಿಲುಗಳು ಬಾನನ್ನು ಕವಿದುವು. ಸತ್ಯಾಗ್ರಹಿಗಳು ನಾಡಿನ ವಿವಿಧ ಭಾಗಗಳಲ್ಲಿ ಉಪ್ಪು ಮಾಡಿ ಸರಕಾರದ ಕಾಯಿದೆಗಳನ್ನು ಮುರಿಯುತಿದ್ದರು. ನಾಡಿನ ಉದ್ದ ಅಗಲಕ್ಕೂ ಸಭೆಗಳು, ಮೆರವಣಿಗೆಗಳು ಜರಗುತಿದ್ದವು. ದೇಶಸೇವಕರು ಸೆರೆಮನೆಗಳನ್ನು ಸೇರುತಿದ್ದರು. ಅಲ್ಲಲ್ಲಿ ಲಾತಿ ರಕ್ಷಸನು ಅಧಿಕಾರಿಗಳಿಗೆ ನೆರವಾಗುತಿದ್ದ. ಖಾದಿ ತೊಪ್ಪಿಗಳಿಗೆ ಗಿರಾಕಿಗಳು ಪೇಟೆಯಲ್ಲಿ ಹೆಚ್ಚುತಿದ್ದರು. ಖಾದಿ ಅರಿವೆಗಳು ಹೆಚ್ಚು ಪ್ರಮಾಣದಲ್ಲಿ ಬಿಕರಿಯಾಗತೊಡಗಿದುವು.

ಸುದ್ದಿಗಳನ್ನು ಅರಿಯಲೋಸುಗ ಮಾದಯ್ಯನ ಹೋಟೆಲಿನಲ್ಲಿ ಜನರು ಹೆಚ್ಚು ಸಂದಣಿಸುತಿದ್ದರು. ಮಾದಯ್ಯನ ವ್ಯಾಪಾರವೂ ಹೆಚ್ಚಿತು. ಜನರ ಹೃದಯಗಳಲ್ಲಿ ಹುರುಪು ಹುಮ್ಮಸಗಳು ತಲೆದೋರುತಿದ್ದವು. ನಾಡಿನ ಸುದ್ದಿಗಳನ್ನು ಅರಿಯಲು ಜನತೆಯೂ ಹೆಚ್ಚು ಉತ್ಸುಕತೆಯನ್ನು ತೋರಿಸುತಿದ್ದಿತು.

ಮಾದಯ್ಯನ ಮನದ ಶಾಂತಿಯು ಅಳಿಸಿತು. ಅವನ ಚಿತ್ತದ ಅಂತರಾಳದಲ್ಲಿ ಒಂದು ಜ್ವಾಲಾಮುಖಿಯು ಉರಿಯತೊಡಗಿತು. ಅವನ ಅಂತರಂಗದ ಕರೆಯು ಕಿವಿಗಳಲ್ಲಿ ಮಾರುಲಿಗೊಡುತಿದ್ದಿತು. ಗಿರಾಕಿಗಳಿಗೆ ಚಹಾ

ಮಾಡಿ ಕೊಡುತಿದ್ದಾನೆ; ಒಲೆಯ ಪಕ್ಕದಲ್ಲಿ ಕುಳಿತು ಎಣ್ಣೆಯಲ್ಲಿ ವಡೆಗಳನ್ನು ಬೇಯಿಸುತಿದ್ದಾನೆ; ದೇಶಸೇವಕರು ಕಡಲ ಕರೆಗೆ ಹೋಗಿ ಉಪ್ಪು ಮಾಡುತಿದ್ದ ಚಿತ್ರಗಳು ಅವನ ಚಿತ್ತದಲ್ಲಿ ಬಿಂಬಿಸುತಿದ್ದವು; ಪೋಲೀಸರ ಲಾತಿ ಪ್ರಯೋಗಗಳು ತೋರುತಿದ್ದವು; ದೇಶಸೇವಕರು ಸೆರೆಮನೆಗಳಿಗೆ ತೆರಳುವ ಚಿತ್ರಗಳು ಕಣ್ಣ ಮುಂದೆ ಸುಳಿಯುತಿದ್ದವು.

೨

''ನಿಮ್ಮ ಪ್ರಕೃತಿಯೇ ವ್ಯತ್ಯಾಸವಾಗಿದೆ. ಮೊಗದಲ್ಲಿನ ನಗೆಯಿಲ್ಲ. ಚಿತ್ತದಲ್ಲಿ ಹರುಷವಿಲ್ಲ. ಬಹಳ ಆಲೋಚನೆ ಹಿಡಿದಂತೆ ಕಾಣಿಸುತಿದೆ " ಮಲಗುವ ಕೋಣೆಯೊಳಕ್ಕೆ ಹೆಜ್ಜೆಗಳನ್ನು ಇರಿಸುತಿದ್ದ ಮಂಜಮ್ಮ ಪತಿಯನ್ನು ಪ್ರಶ್ನಿಸಿದಳು.

"ಇಲ್ಲ. ಏನೂ ಆಗಿಲ್ಲ. " ಎಂದು ಮಾರ್ನುಡಿದ ಮಾದಯ್ಯ.

'' ನೀವು ನುಡಿದುದು ಸುಳ್ಳು. ನಿಮ್ಮ ನೆರಳಿನಂತಿಹ ನನ್ನಿಂದ ಏನನ್ನೋ ಮರೆಸುತಿರುವಿರಿ ಕಳೆದ ಒಂದು ತಿಂಗಳ ಅವಧಿಯಲ್ಲಿ ನೀವು ಬಹಳ ಬದಲಾಯಿಸಿರುವಿರಿ." ವೀಳ್ಯದೆಲೆಗೆ ಸುಣ್ಣವನ್ನು ಹಚ್ಚುತಿದ್ದ ಮಂಜಮ್ಮ ಅಂದಳು '' ಹಣಕಾಸಿನ ತೊಂದರೆಯೆಂದರೆ, ಈಗ ವ್ಯಾಪಾರ ಚೆನ್ನಾಗಿ ಆಗುತಿದೆ. "

'' ಮಂಜು, ಹೇಳಿದರೆ ನಿನಗೆ ಅರಿವಾಗುವದಿಲ್ಲ. ನನ್ನ ಎದೆಯೊಳಗೆ ಒಂದು ಬೆಂಕಿಯು ಉರಿಯುತಲಿದೆ. ಒಳಗಿನ ಕಿಚ್ಚು ಹೊರಗಿನ ಕೊಂಡದಲ್ಲಿ ನೆಗೆಯಲು ನನ್ನನ್ನು ಪ್ರೇರಿಸುತಲಿದೆ. "

'' ಬೇರೊಬ್ಬ ಚೆನ್ನೆಯು ನಿಮ್ಮ ಕಣ್ಣುಗಳನ್ನು ಸೆಳೆದಳೇನೋ !" ಮುನಿಸಿನ ನೋಟವೊಂದನ್ನು ಪತಿಯ ಮೊಗದಮೇಲೆ ಚೆಲ್ಲುತ್ತಾ ಮಂಜಮ್ಮ ಇನಿಯನ ಬಾಯಿಯೊಳಗೆ ಅಡಿಕೆ ಹೋಳುಗಳನ್ನು ಹಾಕಿದಳು.

''ಅಹುದು. ಬೇರೊಬ್ಬ ಗಾಡಿಗಾರ್ತಿಯು ನನ್ನ ಕಣ್ಮನಗಳನ್ನು ಸೆಳೆದಿದಾಳೆ. ನಿಜವನ್ನು ನಿನ್ನಿಂದೇಕೆ ಮರೆಸಬೇಕು ! "

'' ಆರಾಕೆ ! " ಅರ್ಧ ಚಾಚಿದ ಕೈಯಲ್ಲಿ ಹಿಡಿದಿದ್ದ ವೀಳ್ಯದೆಲೆಯು

ಮಂಜಮ್ಮನ ಕೈಯಲ್ಲಿ ಹಾಗೆಯೇ ಉಳಿಯಿತು.

"ಸವತಿಯೊಬ್ಬಳಿದಾಳೆಂದು ಮನಸ್ಸಿನಲ್ಲಿ ಅಸೂಯೆ ಮೂಡಿತೇ ?" ಮಾದಯ್ಯನ ತುಟಿಗಳ ಮೇಲೆ ಕಿರುನಗೆಯೊಂದು ಮಿನುಗಿತು. ಆತನ ಕೈ ಬೆರಳು ಬಳಿಯಲ್ಲಿದ್ದ ಪತ್ರಿಕೆಯ ಕಡೆಗೆ ಹೊರಳಿತು. "ಆಕೆಯ ಸಂಗತಿ ಪತ್ರಿಕೆಯಲ್ಲಿದೆ."

"ಎಲ್ಲಿ ? ಆಕೆಯ ತಸ್ವೀರನ್ನು ಪೇಪರಿನಲ್ಲಿ ಹಾಕಿರುವರೇ" ಮಂಜಮ್ಮ ಪತ್ರಿಕೆಯ ಹಾಳೆಗಳನ್ನು ತಿರುವಿ ಹಾಕಿದಳು. ಆದರೆ ಆಕೆ ನಿರೀಕ್ಷಿಸಿದ ಬೆಡಗುಗಾತಿಯ ಚಿತ್ರವು ಅಲ್ಲಿರಲಿಲ್ಲ. "ಇದರಲ್ಲೆಲ್ಲಿದೆ ಮಣ್ಣು!" ಎಂದು ಆಕೆ ಪತ್ರಿಕೆಯನ್ನು ದೂರ ಒಗೆದಳು.

"ಓದಿನೋಡಿದರೆ ತಿಳಿಯುವದು."

"ಓದಲು ನನಗೆಲ್ಲಿ ಗೊತ್ತಿದೆ ?"

"ಆ ಚೆನ್ನೆಯು ನಿನ್ನಂತೆ ದೇಹ ಕೈಕಾಲುಗಳಿರುವ ಬೆಡಗುಗಾತಿಯಲ್ಲ."

"ಮೈ ಕೈಕಾಲುಗಳಿಲ್ಲದ ಮಂದಿಯಿರುವರೇ! ಹಾಗಾದರೆ ಅವರು ದೆವ್ವಗಳೇ ಸರಿ!"

"ಅವಳ ಹೆಸರು ಸ್ವಾತಂತ್ರ್ಯವೆಂದು. ಆಕೆಯು ನನ್ನನ್ನು ಕೈಮಾಡಿ ಕರೆಯುತ್ತಿದ್ದಾಳೆ." ನಗೆಯ ಮುಗುಳೊಂದು ಮಾದಯ್ಯನ ತುಟಿಗಳಲ್ಲಿ ಅಲರಿ ತನ್ನ ಕಂಪನ್ನು ಹೊರಸೂಸಿತು.

"ಒಗಟುಗಳನ್ನು ಹೇಳಿ ನನ್ನ ಬುದ್ಧಿಯನ್ನು ಕೆಡಿಸಬೇಡಿ. ತುಸು ಬಿಚ್ಚಿ ಹೇಳಿ" ಮಂಜಮ್ಮನ ಮೊಗವು ಹುಸಿಮುನಿಸನ್ನು ತಳೆದಿತು.

ಆಗ ಮಾದಯ್ಯ ನಾಡಿನ ಪರಾಧೀನತೆ—ಅದಕ್ಕೋಸುಗ ಗಾಂಧೀಜಿಯ ಮುಂದಾಳುತನದಲ್ಲಿ ಜನತೆ ಹೆಣಗುತಲಿಹುದು, ನಾಡಿನ ಉದ್ದಗಲಕ್ಕೆ ಪಸರಿಸಿದ ಸತ್ಯಾಗ್ರಹದ ಕದನ, ಬೆಳೆದು ಬರುತಿಹ ಬಿಡುಗಡೆಯ ನೀರಡಿಕೆಯನ್ನು ಮಾಣಿಸಲು ಸರಕಾರವು ಕೈಗೊಂಡ ರೀತಿಗಳು— ಈ ಸಂಗತಿಗಳನ್ನು ಮಡದಿಗೆ ವಿವರಿಸಿ ಹೇಳಿದ. ಆತನ ಮಾತು ಅರ್ಧದಷ್ಟು ಮಂಜಮ್ಮನಿಗೆ ಅರ್ಥವಾಯಿತು; ಇನ್ನುಳಿದ ಅರ್ಧವು ಆಕೆಗೆ ತಿಳಿಯಲಿಲ್ಲ. ಅವಳ ಮೊಗದಲ್ಲಿ ನೆಲಸಿದ್ದ ಮುನಿಸು ಇಳಿದಿತು. ಮಡಚಿದ ವಿಳ್ಯ-

ಎಲೆಯನ್ನು ಆಕೆ ಅಣ್ಣನ ಬಾಯಿಗೆ ಕೊಟ್ಟಳು.

ಮಾದಯ್ಯ ನಲ್ಲೆಯ ಕೈಗಳೆರಡನ್ನೂ ಸೆಳೆದು ತನ್ನ ಎದೆಯ ಮೇಲಿರಿಸಿ ಕೊಂಡ. ಅವನ ಕೊರಳಿಂದ ನುಡಿಗಳ ಹನಿಗಳು ಜಿನುಗಿದವು. " ನೋಡು ಮಂಜು, ನಾಡಿನ ಕರೆಯು ನನ್ನ ಅಂತರಂಗವನ್ನು ಬಿರುಗಾಳಿಯು ಮಲ್ಲಿಗೆ ಬಳ್ಳಿಯನ್ನು ಹಿಡಿದು ಬಾಗಿಸುವಂತೆ ಬಗ್ಗಿಸಿದೆ. " ಹೊರಡು ನಿನ್ನ ಸೇವೆಯನ್ನು ಸಲ್ಲಿಸು'' ಎಂದು ದೊಣ್ಣೆಯನ್ನು ಹಿಡಿದು ದಂಡಿಗೆ ಹೊರಟ ಮುದುಕ ನನ್ನ ಕಿವಿಗಳಲ್ಲಿ ನುಡಿಯುತಿದ್ದಾನೆ. ಕಡಲ್ಕರೆಯಲ್ಲಿ ಉಪ್ಪು ಮಾಡುತಿಹ ದೇಶಸೇವಕರ ಚಿತ್ರವು ನನ್ನ ಬುದ್ಧಿಯನ್ನು ಕೆರಳಿಸುತಲಿದೆ. ನಾಡಿನಲ್ಲಿ ಪಸರಿಸುತಿಹ ಈ ಉರಿಯಲ್ಲಿ ನೆಗೆದು ಬಿಡಬೇಕು ಎಂದು ನನ್ನ ಜೀವವು ಕಾತರಿಸುತಲಿದೆ.

" ಆದರೆ ನಾನು ಬೇಡವೇ ? ನನ್ನ ಗತಿಯೇನು ? ನಾಡಿನ ಕರೆಯನ್ನು ಕೇಳಿ ನನ್ನ ಕೈ ಬಿಡುವಿರಾ ! " ಮಾದಯ್ಯನ ಎರಡೂ ಕೈಗಳನ್ನು ಸೆಳೆಯುತ್ತಾ ಮಂಜಮ್ಮ ಉಸುರಿದಳು. ಆಕೆಯ ಕಣ್ಣುಗಳಲ್ಲಿ ನೀರಕಣಗಳು ತುಳುಕುತಿದ್ದವು.

"ಅದೇ ಚಿಂತೆಯಾಗಿದೆ ಮಂಜು, ನನ್ನ ಮೆದುಳನ್ನು ತಿನ್ನುತ್ತಲಿರುವದು" ಮಾದಯ್ಯನ ಎದೆಯಿಂದ ಬಿಸಿಯುಸಿರೊಂದು ಹೊಮ್ಮಿತು. " ಇಲ್ಲದಿದ್ದರೆ ನಾಡಿನ ಕರೆಯನ್ನು ಕೇಳಿ ನಾನು ಕಿವುಡನಾಗುತ್ತಿರಲಿಲ್ಲ. "

× × × ×

ಹೋಟೆಲಿಗೆ ಆಗತ್ಯವೆನಿಸಿದ ಸಾಮಗ್ರಿಗಳನ್ನು ತರಲೋಸುಗ ಹತ್ತಿರದ ಪೇಟೆಗೆ ಹೋಗಿದ್ದ ಮಾದಯ್ಯ ಮರಳುವಾಗ ಖಾದಿಯ ಉಡುಪುಗಳನ್ನು ತೆಗೆದುಕೊಂಡು ಬಂದ. ಅವನ ಸೊಂಟವನ್ನು ಬಿಳಿಯ ಖಾದಿ ಪಂಚೆ ಬಳಸಿತ್ತು. ಬಿಳಿಯ ಖಾದಿ ಟೊಪ್ಪಿ ತಲೆಯನ್ನು ಅಲಂಕರಿಸಿತ್ತು. ಅವನ ಈ ನೂತನ ಉಡುಗೆ ತೊಡುಗೆಗಳನ್ನು ನೋಡಿ ಮಾದಯ್ಯ ಗಾಂಧಿಯಾದನೆಂದು ಊರವರು ಗುಸುಗುಸು ಅಂದರು. ಹಲವರ ದೃಷ್ಟಿಗಳಲ್ಲಿ ಅಂಜಿಕೆಯು ಬೆರೆತಿದ್ದಿತು.

ಸ್ವದೇಶಿ ಉಪ್ಪನ್ನು ಮಾರಲು ಆ ಊರಿಗೂ ಒಬ್ಬ ಸತ್ಯಾಗ್ರಹಿಯು ತಲುಪಿದ. ಅವನ ಮೊದಲನೇ ಗಿರಾಕಿಯೇ ಮಾದಯ್ಯ. ಅವನು ಸತ್ಯಾಗ್ರಹಿಗೆ ಎರಡು ರೂಪಾಯಿಗಳನ್ನು ಕೊಟ್ಟು ಒಂದು ಪೊಟ್ಟಣ ಉಪ್ಪನ್ನು ಕೊಂಡುಕೊಂಡ. ಹೋಟೆಲಲ್ಲಿ ನೆರೆದಿದ್ದ ಇತರರೂ ಎರಡಾಣೆ, ಒಂದಾಣೆಗಳನ್ನು ಕೊಟ್ಟು ಗಾಂಧಿ ಉಪ್ಪನ್ನು ಪಡೆದರು.

ಸತ್ಯಾಗ್ರಹಿಯ ಊಟಉಪಚಾರಗಳು ಮಾದಯ್ಯನಲ್ಲಿಯೇ ನಡೆದುವು. ಆತ ಮೂರು ನಾಲ್ಕು ದಿನಗಳತನಕ ಮಾದಯ್ಯನ ಅತಿಥಿಯಾಗಿದ್ದ. ಊರಲ್ಲಿ ಮಾದಯ್ಯನ ಪರಿಶ್ರಮಗಳ ಫಲವಾಗಿ, ಊರ ದೇಗುಲದ ಮುಂದಿನ ಮೈದಾನದಲ್ಲಿ ಒಂದೆರಡು ಸಭೆಗಳು ಜರಗಿದವು. ದೂರದ ಪಟ್ಟಣದಿಂದ ಬಂದ ಸತ್ಯಾಗ್ರಹಿಯು ಮೂರು ಬಣ್ಣಗಳ ಬಾವುಟವನ್ನು ಕೈಯಲ್ಲಿ ಹಿಡಿದು, ಸ್ವಾತಂತ್ರ್ಯ, ಸತ್ಯಾಗ್ರಹ ಮೊದಲಾದ ವಿಷಯಗಳನ್ನು ಕುರಿತು ಮಾತಾಡಿದ. ಜನರು ಆಶ್ಚರ್ಯ ಮತ್ತು ಭಯ ಸಂಭ್ರಮಗಳಿಂದ ಕೂಡಿದವರಾಗಿ ಆತನ ಗಾಂಧಿ ಭಾಷಣವನ್ನು ಕೇಳಿದರು. ತಾವು ಆವುದೋ ಒಂದು ಮಹತ್ಕಾರ್ಯದಲ್ಲಿ ಪಾಲುಗಾರರಾಗುತಲಿಹೆವೆಂದು ಅವರಿಗೆ ಅನಿಸಿತು.

"ಏನೋ ಮಾದಯ್ಯ, ಗಾಂಧಿಜನಕ್ಕೆ ನಿನ್ನ ಮನೆಯಲ್ಲಿಯೇ ನೆರಳುಕೊಟ್ಟು ಮೀಟಿಂಗುಗಳನ್ನು ಏರ್ಪಡಿಸುತಿದ್ದಿ. ಸರಕಾರದವರಿಗೆ ತಿಳಿದರೆ ನಿನ್ನನ್ನು ಸುಮ್ಮನೆ ಬಿಡುತ್ತಾರೊ?" ಎಂದು ಉಸುರಿದ ಚೆನ್ನಪ್ಪ ಮಾದಯ್ಯನ ಕಿವಿಗಳಲ್ಲಿ.

"ಅವರು ದೇಶದ ಸಲುವಾಗಿ ಮನೆ ಮಂದಿಯನ್ನೆಲ್ಲಾ ತೊರೆದು ಬಂದಿದಾರೆ." ದೂರದ ನೀಲಿಯ ಬಾನನ್ನು ದಿಟ್ಟಿಸುತ್ತಾ ಮಾದಯ್ಯ ಮಾರ್ನುಡಿದ. "ಸೆರೆಮನೆಗೆ ತೆರಳಲೂ ಅವರು ತಯಾರಾಗಿದ್ದಾರೆ. ನಾನು ಇನಿತೊಂದು ಸೇವೆಯನ್ನಾದರೂ ನಾಡಿಗೆ ಸಲ್ಲಿಸದಿದ್ದರೆ ಹೇಗೆ?"

ಚೆನ್ನಪ್ಪ ತನ್ನ ಮಾತನ್ನು ಮುಂದೆ ಬೆಳಸಲಿಲ್ಲ. ಮಾದಯ್ಯ ಗಾಂಧಿಯ ಕಡೆಗೆ ತಿರುಗಿದಾನೆಂದು ಅವನಿಗೆ ಅನಿಸಿತು.

ಆ ಸತ್ಯಾಗ್ರಹಿ ಮಾದಯ್ಯನ ಹೋಟೆಲನ್ನೇ ತನ್ನ ಕೇಂದ್ರವಾಗಿಟ್ಟು ಕೊಂಡು ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಉಪ್ಪು ಮಾರಾಟವನ್ನು ಮುಂದು

ವರಿಸಿದ. ಆತ ಮನೆಮನೆಗಳಿಗೆ ತೆರಳಿ ಗಾಂಧೀ ಉಪದೇಶಗಳನ್ನು ಜನತೆಗೆ ತಲುಪಿಸಿದ. ಸ್ವಾತಂತ್ರ್ಯ ಮತ್ತು ಕಾಯಿದೆಭಂಗಗಳ ದೀವಿಗೆ ಜನತೆಯ ಎದೆಗಳಲ್ಲಿ ಉರಿಸಿದ.

ಕೊನೆಗೊಂದು ದಿನ ಅಧಿಕಾರಿಗಳು ಆ ಸತ್ಯಾಗ್ರಹಿಯನ್ನು ಬಂಧಿಸಿ, ಅವನನ್ನು ತುರಂಗಕ್ಕೆ ಒಯ್ದರು.

× × × ×

ದಿನಗಳು ಹಲವು ಉರುಳಿದವು. ಶಾಸನಭಂಗದ ಕಾಳ್ಗಿಚ್ಚು ನಾಡಿನ ಉದ್ದಗಲಕ್ಕೂ ವ್ಯಾಪಿಸಿತು. ಇದುವರೆಗೆ ಅಜ್ಞಾನದಲ್ಲಿ ಮುಳುಗಿದ್ದ ಹಳ್ಳಿಗರ ಎದೆಗಳಲ್ಲಿ ಸಹ ಸ್ವಾತಂತ್ರ್ಯದ ನೀರಡಿಕೆಯನ್ನು ಹುಟ್ಟಿಸಿತು. ಜನತೆಯೂ ಒಂದು ಪರ್ವಕಾಲದಲ್ಲಿ ನಿಂತಿದ್ದಿತು.

ಆ ಕಾಳ್ಗಿಚ್ಚು ಮಾದಯ್ಯನು ವಾಸಿಸುತ್ತಿದ್ದ ಹಳ್ಳಿಗೂ ಪಸರಿಸಿತು. ಒಂದು ದಿನ ಐದು ಮಂದಿ ಸತ್ಯಾಗ್ರಹಿಗಳು ಕಾಯಿದೆ ಭಂಗವನ್ನು ಮಾಡ ಲೋಸುಗ ಆ ಊರಿಗೆ ಬಂದರು. ಮಾದಯ್ಯನ ಹೋಟಿಲೇ ಈ ಸತ್ಯಾಗ್ರಹಿ ಗಳಿಗೆ ವಸತಿಯಾಯಿತು. ಅರಳಿದ ಮೊಗದೊಡನೆ ಮಾದಯ್ಯ ಅಭ್ಯಾಗತರಿಗೆ ನೀರು ನೆರಳುಗಳನ್ನು ನೀಡಿದ. ಮೊದಲನೆಯ ದಿನ ಕಳೆಯಲು, ಸತ್ಯಾಗ್ರಹಿ ಗಳ ಮುಂದಾಳುಗಳಾದ ರಾಮರಾಯರು, ಎರಡುರೂಪಾಯಿಗಳನ್ನು ತೆಗೆದು ಮಾದಯ್ಯನ ಕೈಯಲ್ಲಿರಿಸಲು ಬಂದರು.

“ಬೇಡ ರಾಯರೆ,—ತಮ್ಮಿಂದ ಹಣವನ್ನು ತೆಗೆದುಕೊಂಡು ಪಾಪ ಕಟ್ಟಿಕೊಳ್ಳತಕ್ಕವನಲ್ಲ.” ಮಾದಯ್ಯ ಹಣವನ್ನು ತೆಗೆದುಕೊಳ್ಳಲೊಪ್ಪದೆ ತಲೆಯನ್ನು ಅಲ್ಲಾಡಿಸಿದ.

“ನಾವು ನಾಲ್ಕೈದು ಮಂದಿ ಇದೇವೆ. ನಮ್ಮ ಊಟ ಉಪಚಾರಗಳು ಧರ್ಮಾರ್ಥವಾದರೆ ನಿನಗೆ ನಷ್ಟವಲ್ಲವೆ ? ನಾವು ಒಂದೆರಡು ದಿನಗಳ ಮಟ್ಟಿಗೆ ಇರಲು ಬಂದವರಲ್ಲ. ಒಂದೆರಡು ತಿಂಗಳುಗಳ ಮಟ್ಟಿಗೆ ನಾವು ಇಲ್ಲಿ ಇರ ಬೇಕಾಗಬಹುದು.

“ನೀವು ಎನಿತು ಸಮಯ ಬೇಕಾದರೂ ಇಲ್ಲಿರಿ. ನಾಡಸೇವೆಯನ್ನು ಮುಂದುವರಿಸಿರಿ. ನಾನು ಧನಿಕನಲ್ಲದಿದ್ದರೂ ನಾಲ್ಕೈದು ಮಂದಿಗೆ ಕವಳ

ವನ್ನೊದಗಿಸುವ ಸಾಮರ್ಥ್ಯವನ್ನು ದೇವರು ದಯಪಾಲಿಸಿದಾನೆ. ಬೇರೇನೂ ಸೇವೆಯನ್ನು ಸಲ್ಲಿಸಲು ನಾನು ಶಕ್ತನೆನಿಸದಿದ್ದರೂ, ನಾಡಸೇವೆಗೆ ಪಣ ತೊಟ್ಟ ನಿಮ್ಮಂತಹ ನಾಲ್ಕು ಮಂದಿಯ ಹಸಿವೆಯನ್ನು ತಣಿಸಿಯಾದರೂ ಪುಣ್ಯ ಕಟ್ಟಿಕೊಳ್ಳುತ್ತೇನೆ."

ರಾಯರ ಕೊರಳಿಂದ ಮಾರುಲಿಯೂ ಹೊರಡಲಿಲ್ಲ. ಅವರ ಕಣ್ಣುಗಳು ಮಾದಯ್ಯನ ಮೊಗದಲ್ಲಿ ನೆಲಸಿದುವು. ಸೋಜಿಗದ ಕಣಗಳು ಅವರ ಕಣ್ಣುಗಳಲ್ಲಿ ತೇಲಿದುವು. ಇದೊಂದು ಅವರ ಜೀವನದಲ್ಲಿ ನೂತನ ಅನುಭವವಾಗಿದ್ದಿತು.

ಚಹಾ ಕುಡಿಯಲು ಹೋಟೆಲಿನಲ್ಲಿ ನೆರೆದಿದ್ದ ಹಲವು ಮಂದಿ ಈ ಮಾತುಕತೆಗಳಿಗೆ ಕಿವಿಗೊಟ್ಟಿದ್ದರು. ಮಾದಯ್ಯನ ನುಡಿಗಳನ್ನು ಕೇಳಿ ಹಲವರಿಗೆ ಆಶ್ಚರ್ಯವೆನಿಸಿತು. ನಾಲ್ಕೈದು ಮಂದಿ ಕಾಂಗ್ರೆಸಿಗರಿಗೆ ಧರ್ಮಾರ್ಥವಾಗಿ ಅನ್ನ ನೀರು ಕೊಡಲು ಮಾದಯ್ಯನೊಪ್ಪಿದುದನ್ನು ಕಂಡು ಅವರು ಸೋಜಿಗಗೊಂಡರು. ತನ್ನ ಮನೆಗೆ ತಾನೇ ಕಿಚ್ಚನ್ನಿಕ್ಕಲು ಮಾದಯ್ಯ ಉದ್ಯುಕ್ತನಾಗಿಹನೆಂದು ಹಲವರಿಗೆ ಅನಿಸದೆ ಇರಲಿಲ್ಲ.

× × × ×

ಸತ್ಯಾಗ್ರಹಿಗಳು ಆ ಹಳ್ಳಿಯಲ್ಲಿ ನೆಲಸಿ ಹದಿನೈದು ದಿನಗಳಾಗಿವೆ. ಅವರ ಇರವು ಹಳ್ಳಿಗರ ಬಾಳುವೆಯಲ್ಲಿಯೇ ಒಂದು ಪುಟ್ಟ ಕ್ರಾಂತಿಯನ್ನು ಎಸಗಿದೆ. ಊರ ಹುಡುಗರ,—ನೀರಿಗೋಸುಗ ಭಾವಿಗೆ ಬರುತಲಿಹ ಗಾಡಿಕಾರ್ತಿಯರ ತುಟಿಗಳಲ್ಲಿ ಸತ್ಯಾಗ್ರಹಿಗಳು ಅನ್ನುತಿದ್ದ ರಾಷ್ಟ್ರಗೀತೆಗಳು ನೆಲಸಿದುವು. ಅಳುತಿದ್ದ ಹಸುಳೆಗಳನ್ನು ತೊಟ್ಟಿಲುಗಳಲ್ಲಿ ಮಲಗಿಸಿ, ತೂಗುವಾಗ ತಾಯಂದಿರ ಕೊರಳುಗಳಿಂದ ಗಾಂಧಿ ಹಾಡುಗಳು ಹರಿದು ಬರತೊಡಗಿದುವು.

ಈರ್ವರು ಸತ್ಯಾಗ್ರಹಿಗಳು ಊರ ಸೇಂದಿ ಅಂಗಡಿಯನ್ನು ಸರ್ಪಕಾವಲು ಮಾಡತೊಡಗಿದರು. ಮದ್ಯದಂಗಡಿಗೆ ತೆರಳುತಿಹ ಮಂದಿಯ ಕಾಲುಗಳಿಗೆ ಬಿದ್ದು ಅವರು ಮದ್ಯಪಾನವನ್ನು ತಡೆಯುವ ಚಿತ್ರವು ಹಳ್ಳಿಗರಲ್ಲಿ ಆಶ್ಚರ್ಯವನ್ನುಂಟು ಮಾಡಿತು. ಮದ್ಯಪಾನಿಗಳು ಸೇಂದಿ ಅಂಗಡಿಗೆ ಹೋಗು

ದನ್ನು ನಿಲ್ಲಿಸಿದರು. ಅಂತಹ ದೊಡ್ಡ ಮನುಷ್ಯರಿಂದ ಕಾಲಿಗೆರಗಿಸಿ ಕೊಳ್ಳುವುದು ಪಾಪ; ಗಾಂಧಿಯ ಶಾಪವು ತಮಗೆ ತಗಲದಿರದು ಎಂಬ ಭಾವನೆಯು ಹಳ್ಳಿಗರಲ್ಲಿ ಅಂಕುರಿಸಿತು.

ಒಂದು ದಿನ ಸಂಜೆ ಕೆಂಚಯ್ಯಗೌಡ ಕಾಲಿಗೆ ಬಿದ್ದ ಸತ್ಯಾಗ್ರಹಿಗಳನ್ನು ದೂಡಿ ಸೇಂದಿ ಅಂಗಡಿಯೊಳಗೆ ನುಗ್ಗಿದ. ಆತ ಎರಡು ಸೇರು ಕಳ್ಳಿನಿಂದ ತನ್ನ ಹೊಟ್ಟೆಯನ್ನು ಭರ್ತಿಮಾಡಿದ. ಅವನು ಸೇಂದಿ ಅಂಗಡಿಯಿಂದ ಹೊರಗೆ ಬಂದಾಗ ಎಂಟು ಹತ್ತು ಮಂದಿ ಹಳ್ಳಿಯ ವಾನರ ಸೇನೆ ನೆರೆದಿತ್ತು. ಪುಟ್ಟ ಪುಂಟರು ಕೆಂಚಯ್ಯನನ್ನು ಸುತ್ತುಗಟ್ಟಿ ಕೈಚಪ್ಪಾಳೆ ಹೊಡೆಯು ತಿದ್ದರು; ಕೇಕೆ ಹಾಕಿ ನಗುತಿದ್ದರು. "ಸೇಂದಿ ಕುಡುಕ ಕೆಂಚಯ್ಯ! ಮರ್ಯಾದೆಗೆಟ್ಟ ಕೆಂಚಯ್ಯ!" ಎಂದು ಅವರು ಕೂಗುತಿದ್ದರು. ಈ ರೀತಿ ಎಳೆಯರು ಕೆಂಚಯ್ಯನ ಮೆರವಣಿಗೆಯನ್ನು ಮಾಡಿ ಅವನ ಮನೆಗೆ ಕರೆತಂದು ಬಿಟ್ಟರು. ಅಂದು ಕೆಂಚಯ್ಯನ ಮಡದಿಯು ಸಹ ಗಂಡನನ್ನು ಹಂಗಿಸಿದಳು. ಅಂದಿನಿಂದ ಅವನು ಸೇಂದಿ ಅಂಗಡಿಯ ಕಡೆಗೆ ಇಣಿಕಿ ಸಹ ನೋಡಿರಲಿಲ್ಲ.

ಉಳಿದ ಮೂವರು ಸತ್ಯಾಗ್ರಹಿಗಳು ಹಳ್ಳಿಗಳಲ್ಲಿ ಪ್ರಚಾರಗೆಲಸಗಳನ್ನು ಕೈಗೊಂಡಿದ್ದರು ಸೇಂದಿಗಿಡಗಳನ್ನು ಕಡಿಯುವದು ಅವರ ಕಾರ್ಯಕ್ರಮ ಗಳಲ್ಲಿ ಒಂದಾಗಿದ್ದಿತು. ಅವರು ತಮ್ಮ ಇನಿನುಡಿಗಳಿಂದ ಹಳ್ಳಿಗರ ಪ್ರೀತ್ಯಾ ದರಗಳನ್ನು ಗಳಿಸಿದರು. ಗಾಂಧಿ ಜನರ ಊಟ ಉಪಚಾರಗಳ ಸಲುವಾಗಿ ಹಳ್ಳಿಗರ ಅಕ್ಕಿ, ಬೇಳೆ, ತರಕಾರಿಗಳು ಮಾದಯ್ಯನ ಹೋಟೆಲುಗಳನ್ನು ಸೇರತೊಡಗಿದವು.

ಅಡಿಗೆ ಕೋಣೆಯಲ್ಲಿ ಸತ್ಯಾಗ್ರಹಿಗಳಿಗೆ ಅನ್ನ ಸಾರುಗಳನ್ನು ಅಡುವ ಕೆಲಸವನ್ನು ಮಂಜಮ್ಮನ ಕೈಗಳು ಎಸಗುತಿದ್ದವು.

× × × ×

ಪಕ್ಕದ ಪಟ್ಟಣದಿಂದ ಪೋಲೀಸ ಸಬ್‌ಇನ್ಸ್‌ಪೆಕ್ಟರರ ಸವಾರಿಯು ಮಾದಯ್ಯನ ಹೋಟೆಲಿಗೆ ಚಿತ್ತೈಸಿತು ಅವರು ತಮ್ಮ ಪಾದಧೂಳಿಯಿಂದ ಅವನ ಚಹಾದಂಗಡಿಯನ್ನು ಪುನೀತಗೊಳಿಸಿದರು. ಅವರು ದಯಮಾಡಿ ಸಿದಾಗ,—ಮಾದಯ್ಯ ಗಿರಾಕಿಗಳಿಗೆ ಚಹಾವನ್ನು ಮಾಡಿಕೊಡುತಿದ್ದ. ಇನ್ ಸ್ಪೆಕ್ಟರರು ಅಲ್ಲಿದ್ದ ಒಂದು ಮುರುಕು ಕುರ್ಚಿಯ ಮೇಲೆ ಮಂಡಿಸಿದರು.

ಎಲ್ಲರ ಕಣ್ಣುಗಳೂ ಅವರ ಮೊಗದ ಕಡೆಗೆ ಹೊರಳಿದವು. ಎಲ್ಲರ ಕಣ್ಣುಗಳ ಲ್ಲಿಯೂ ಆಚ್ಚರಿಯು ನೋಟವಿದ್ದಿತು. ಯಾರ ತುಟಿಗಳಿಂದಲೂ ಮಾತುಗಳು ಉದುರಲಿಲ್ಲ. ಇನ್ಸ್‌ಪೆಕ್ಟರರು ಮಾದಯ್ಯನ ಮೊಗದಿಂದ ತಮ್ಮ ಕಣ್ಣು ಗಳನ್ನು ಕದಲಿಸದೆ ನುಡಿದರು. "ಹೋಟೆಲುಗಾರ ಮಾದಯ್ಯ ಎಂದರೆ ನೀನೇ ?"

"ಆಹುದು" ಎಂದ ಮಾದಯ್ಯ.

"ಈ ಊರಲ್ಲಿ ಸತ್ಯಾಗ್ರಹಿಗಳಿಗೆ ನೀನು ಆಶ್ರಯವನ್ನು ನೀಡಿರುವೆ ಯಂತೆ." ಇನ್ಸ್‌ಪೆಕ್ಟರರ ಕೊರಳಿಂದ ಹೊರಟ ಗಂಭೀರ ಸ್ವರವು ಮಂದಿಯ ಕಿವಿಗಳನ್ನು ಪ್ರವೇಶಿಸಿತು. "ಅವರಿಗೆ ಊಟ ಉಪಚಾರಗಳನ್ನು ಇತ್ತು ನೀನು ಕಾಯಿದೆಭಂಗ ಮಾಡಲು ಪುಸಲಾಯಿಸುತ್ತಿರುವೆಯಂತೆ."

"ಅವರು ನನ್ನ ಹೋಟೆಲಿನಲ್ಲಿ ಊಟಮಾಡುತ್ತಿರುವರೆಂಬುದು ನಿಜ" ಮಾದಯ್ಯ ಮಾರ್ನುಡಿದ. "ಆದರೆ ನೀವು ಕಾಯಿದೆ ಮುರಿಯಿರಿ ಎಂದು ಅವರನ್ನು ನಾನು ಪುಸಲಾಯಿಸುತಲಿಲ್ಲ."

"ನಿನ್ನಲ್ಲಿ ಅವರಿಗೆ ಊಟ ಉಪಚಾರಗಳು ನಡೆಯುತಲಿಲ್ಲವೇ ?"

"ಆಹುದು. ನಾನು ಹೋಟೆಲು ಕಸುಬಿನಿಂದ ಹೊಟ್ಟೆ ಹೊರೆಯುತಿ ದೇನೆ. ನನ್ನಲ್ಲಿ ಬಂದವರಿಗೆ ತಿಂಡಿ ತಿನಸು ಊಟ ಉಪಚಾರಗಳನ್ನು ಒದಗಿ ಸುವದು ನನ್ನ ಕೆಲಸ."

"ಆದರೆ ನೀನು ಧರ್ಮಾರ್ಥವಾಗಿ ಸತ್ಯಾಗ್ರಹಿಗಳಿಗೆ ಒದಗಿಸುತಿರುವೆ ಯಂತೆ." ಇನ್ಸ್‌ಪೆಕ್ಟರರು ಹೊಸದೊಂದು ಕಣೆಯನ್ನು ತಮ್ಮ ಬತ್ತಳಿಕೆ ಯಿಂದ ತೆಗೆದರು.

"ಹಾಗೆಂದವರಾರು ? ನಾಲ್ಕಾರು ಮಂದಿಗೆ ಅನುದಿನ ತಿಂಡಿ ತೀರ್ಥ ಗಳನ್ನು ಒದಗಿಸಲು ನನ್ನಿಂದ ಸಾಧ್ಯವಿದೆಯೇ ?" ಮಾದಯ್ಯನು ಪ್ರತ್ಯಸ್ತ್ರ ವೊಂದನ್ನು ಹೂಡಿದನು. "ಗಾಂಧಿ ಜನರು ನನ್ನಲ್ಲಿ ಊಟ ಮಾಡುತಿದ್ದರೆ, ಅವರಿಂದ ನಾನು ರೊಕ್ಕವನ್ನು ವಸೂಲು ಮಾಡುತಿದೇನೆ."

"ಮಾದಯ್ಯ, ನೀನು ತಲೆ ತುಂಬಾ ಮಾತಾಡದಿರು. ನೀನು ರೊಕ್ಕ ಪಡೆದು ಸತ್ಯಾಗ್ರಹಿಗಳಿಗೆ ಅನ್ನ ಹಾಕುತಿದ್ದೀಯೋ, ಅಲ್ಲ ಪುಕ್ಕಟೆ ಹಾಕುತಿ

ದ್ದಿಯೋ ಎಂಬದು ನನಗೆ ಮುಖ್ಯವಾದುದಲ್ಲ." ಇನ್ಸ್‌ಪೆಕ್ಟರರ ಕೊರಳಿಂದ ಅಧಿಕಾರವಾಣಿಯು ಹೊಮ್ಮಿತು. "ನೀನು ಅವರಿಗೆ ಅನ್ನ ಹಾಕುವುದರಿಂದ ಅವರನ್ನು ಶಾಸನಭಂಗ ಮಾಡಲು ಉತ್ತೇಜನಗೊಳಿಸಿದಂತಾಗುವದು. ಅದು ಸರಕಾರಕ್ಕೆ ವಿರೋಧವಾದುದು. ನಾನು ಮೊದಲೇ ತಿಳಿಸಿಬಿಡುತೇನೆ. ನನ್ನ ಮಾತನ್ನು ಮೀರಿ ಸತ್ಯಾಗ್ರಹಿಗಳಿಗೆ ಎಡೆಯನ್ನು ಕೊಡುವುದಾದರೆ,—ನೀನು ಅದರ ಫಲವನ್ನು ಅನುಭವಿಸಬೇಕಾಗುವದು."

"ಸ್ವಾಮೀ, ನನ್ನಲ್ಲಿಗೆ ಬಂದ ಮಂದಿಗೆ ಊಟಉಪಚಾರಗಳನ್ನು ತಿಂಡಿ ತಿನಸುಗಳನ್ನು ಒದಗಿಸುವುದರಿಂದ ನನ್ನ ಬಾಳುವೆಯು ಸಾಗುತಿದೆ. ಹೋಟೆಲು ನಡೆಸಕೂಡದೆಂದು ತಮ್ಮ ಅಪ್ಪಣೆಯಾದರೆ, – ನನ್ನ ಜೀವನದ ವೆಚ್ಚವನ್ನು ಸರಕಾರವೇ ಹೊರಬೇಕಾಗುವದು."

"ಇದೆಂತಹ ಅಧಿಕ ಪ್ರಸಂಗ ನಿನ್ನದು! ಹೋಟೆಲು ನಡೆಸಬೇಡವೆಂದು ಹೇಳಿದವರಾರು? ಆದರೆ ಸತ್ಯಾಗ್ರಹಿಗಳಿಗೆ ಮಾತ್ರ ಅನ್ನ ಹಾಕಬೇಡ." ಇನ್ಸ್‌ಪೆಕ್ಟರರ ಕಣ್ಣುಗಳು ಕೋಪದಿಂದ ಕೆಂಪಡರಿದವು. "ಇತರರೆಲ್ಲರಿಗೂ ಬೇಡವೆಂದು ನಾನು ಹೇಳಿದೆನೇ?"

"ಇವರು ಸತ್ಯಾಗ್ರಹಿಗಳು, ಇವರು ಅಲ್ಲವೆಂದು ನಾನು ತಿಳಿಯುವುದು ಹೇಗೆ? ಹೋಟೆಲಿಗೆ ಎಲ್ಲ ತರದ ಜನರು ಬರುತಾರೆ; ಹೋಗುತಾರೆ."

"ಮೊಗ ನೋಡಿದೊಡನೆಯೇ ಸತ್ಯಾಗ್ರಹಿ ಯಾರೆಂಬುದು ತಿಳಿಯುವುದು." ಇನ್ಸ್‌ಪೆಕ್ಟರರು ಗುಡಗಿದರು. "ನಿನ್ನ ಹಿತಕ್ಕಾಗಿ ಉಸುರುತಿರ್ವೆನೆ; ನೀನು ಸತ್ಯಾಗ್ರಹಿಗಳಿಗೆ ಎಡೆಯನ್ನು ನೀಡಿದರೆ ನಿಶ್ಚಯವಾಗಿಯೂ ತೊಂದರೆಗೊಳಗಾಗುವೆ. ನಾನು ನಿನ್ನನ್ನು ಎಚ್ಚರಿಸಿದೇನೆ."

ಮಾದಯ್ಯನ ಕೊರಳಿಂದ ಮಾರ್ದನಿಯು ಹೊರಡಲಿಲ್ಲ. ಇನ್ಸ್‌ಪೆಕ್ಟರರು ಒಂದು ಕಪ್ಪ ಚಹಾ ಬರಿದು ಮಾಡಿ ಅಲ್ಲಿಂದ ತೆರಳಿದರು.

"ಮಾದಯ್ಯ, ಮೊದಲೇ ನಿನಗೆ ನಾನು ಹೇಳಿದ್ದೆ. ಗಾಂಧಿ ಜನರ ಗೊಡವೆಗೆ ಕೈ ಹಚ್ಚಿದರೆ ನೀನು ತೊಂದರೆಗಳ ಬಲೆಯಲ್ಲಿ ಸಿಲುಕಬೇಕಾಗುವುದೆಂದು." ಇನ್ಸ್‌ಪೆಕ್ಟರರು ತೆರಳಿದ ಅನಂತರ ಚೆನ್ನಪ್ಪ ತನ್ನ ತುಟಿಗಳನ್ನು ಬಿಚ್ಚಿದ. "ನೀನು ಆ ರಾಮರಾಯರಿಗೆ ತಿಳಿಸಿಬಿಡು ಇನ್ನು ಮೇಲೆ ಅನ್ನ ಹಾಕಲಾಗುವುದಿಲ್ಲವೆಂದು."

"ಮುಂದೇನು ಮಾಡಬೇಕೆಂದು ನನಗೆ ತಿಳಿದಿದೆ ಚೆನ್ನಪ್ಪ; ಆ ತೊಂದರೆಯನ್ನು ನೀನು ತೆಗೆದುಕೊಳ್ಳಬೇಕಾಗಿಲ್ಲ." ಮಾದಯ್ಯನ ಕೊರಳಿಂದ ಹೊರಟ ಗಂಭೀರ ವಾಣಿಯು ಚೆನ್ನಪ್ಪನ ಬಾಯಿಗೆ ಬೀಗವನ್ನು ಹಾಕಿಸಿತು.

× × × ×

ಸತ್ಯಾಗ್ರಹಿಗಳ ಮುಂದಾಳು ರಾಮರಾಯರಿಗೆ ಇನ್ಸ್ಪೆಕ್ಟರರು ಮಾದಯ್ಯನಿಗೆ ಒಡ್ಡಿದ ಬೆದರಿಕೆಯು ಅರಿವಾಯಿತು. ತಮಗೋಸುಗ ತೊಂದರೆಯನ್ನು ತೆಗೆದುಕೊಳ್ಳುತಿದ್ದ ಮಾದಯ್ಯನಿಗೆ ಸೆರೆಮನೆಯ ಹಾದಿಯನ್ನು ತೋರಿಸುವ ಬುದ್ಧಿ ಅವರದಾಗಿರಲಿಲ್ಲ. ಆದುದರಿಂದ ಅವರು ಮಾದಯ್ಯನ ಸಂಗಡ ಉಸುರಿದರು. "ಇನಿತು ದಿನಗಳತನಕ ಊಟ ಉಣಿಸುಗಳನ್ನಿತ್ತುದೇ ಹಿರಿಯ ಉಪಕಾರವಾಯಿತು. ಜನತೆಗೆ ನಮ್ಮಲ್ಲಿ ಪ್ರೀತಿ ವಿಶ್ವಾಸಗಳು ಬೆಳೆಯುತಿವೆ ಎಂಬುದನ್ನು ಅಧಿಕಾರಿಗಳು ಬಲ್ಲರು. ಆದುದರಿಂದಲೇ ಅವರು ಈ ರೀತಿಯಲ್ಲಿ ಅಂಜಿಕೆ, ಬೆದರಿಕೆಗಳ ಬಲೆಯನ್ನು ಹರಡುತಿಹರು. ಇನ್ನುಮುಂದೆಯೂ ನಾವು ನಿನ್ನಲ್ಲಿಯೇ ಇದ್ದರೆ, ಅವರಿಂದ ನಿನಗೆ ಕೋಟಲೆಗಳು ಒದಗಬಹುದು. ಆದುದರಿಂದ ನಾವು ಬೇರೆಡೆಗೆ ತೆರಳುವೆವು."

"ರಾಯರೇ, ಇನ್ಸ್ಪೆಕ್ಟರರು ನನ್ನನ್ನು ಬೆದರಿಸಿ ಹೋಗಿದಾರೆಂಬುದು ನಿಜ." ಮಾದಯ್ಯ ನುಡಿದ. "ನೀವು ನಾಡಿಗೋಸುಗ ನಿಮ್ಮ ಜೀವನವನ್ನೇ ಮೀಸಲಾಗಿರಿಸಿರುವಿರಿ. ಸಾವಿಗೂ ಅಳುಕದೆ ಗಾಂಧೀಜಿಯ ಅಪ್ಪಣೆಯಂತೆ ಮುನ್ನುಗ್ಗುತ್ತಿರುವಿರಿ. ನಾನು ಈ ಅಲ್ಪ ಸೇವೆಯನ್ನು ಸಲ್ಲಿಸಲಾರೆನೇ? ಊರ ಜನರನ್ನು ಇನ್ಸ್ಪೆಕ್ಟರರ ನುಡಿಗಳು ಅಳುಕಿಸಿವೆ. ಆದುದರಿಂದ ಬೇರೆಲ್ಲಿಯೂ ನಿಮಗೆ ನೆರಳು ದೊರಕದು."

"ಜನರು ನೆರವನ್ನು ಈಯದಿದ್ದರೇನು! ಮರದ ನೆರಳೇ ನಮ ವಸತಿಯಾಗುವುದು." ರಾಮರಾಯರೆಂದರು. "ಬೆದರಿಕೆಗಳ ಬಳ್ಳಿಯು ನಮ್ಮ ಕಾಲುಗಳಿಗೆ ತೊಡಕದು." ನೀವು ಯಾವ ಕೋಟಲೆಗೂ ಅಳುಕದವರೆಂಬುದನ್ನು ನಾ ಬಲ್ಲೆ. ಈಗ ನೀವು ನನ್ನ ಮೇಲಿನ ಕನಿಕರದಿಂದ ನನ್ನ

ಊಟ ಉಪಚಾರಗಳನ್ನು ಬಿಡುವುದಾದರೆ—ನಾಡಿಗೆ ನಾನು ಸಲ್ಲಿಸಬಹುದಾದ ಅಲ್ಪ ಸೇವೆಯನ್ನು ಸಹ ನೀವು ತಡೆದಂತಾಗುವುದು."

ಮಾದಯ್ಯನ ನುಡಿಗಳು ರಾಯರನ್ನು ನಿರುತ್ತರಗೊಳಿಸಿದುವು.

## ( ೩ )

"ಮಂಜೂ!" ಮಾದಯ್ಯ ತನ್ನ ಬಾಳುವೆಯ ಜತೆಗಾತಿಯನ್ನು ಕರೆದ.

ಮಂಜಮ್ಮ ಇನಿಯನ ಮೊಗವನ್ನು ನಿಟ್ಟಿಸಿದಳು. ಅದು ಗಂಭೀರ ಭಾವವನ್ನು ತಳೆದಿತ್ತು. ವಿಚಾರದ ಕದಿರುಗಳು ಅವನ ಕಣ್ಣುಗಳಿಂದ ಹೊಮ್ಮುತಿದ್ದವು, ನವಕಳೆಯನ್ನು ಕಣ್ಣುಗಳು ಬೀರುತಿದ್ದವು.

"ಮಂಜೂ, ಇನ್ಸ್ಪೆಕ್ಟರರು ಬಂದುದನ್ನು ನೀನು ಬಲ್ಲೆಯಷ್ಟೆ."

"ಹೂಂ" ಎಂದಳು ಮಂಜಮ್ಮ.

"ಅವರು ಏನು ಹೇಳಿದರೆಂಬುದು ನಿನಗೆ ತಿಳಿದಿದೆಯಲ್ಲವೇ?"
"ಗಾಂಧಿ ಜನರನ್ನು ಹೋಟೆಲಿಗೆ ಸೇರಿಸಬಾರದೆಂದು ಹೇಳಿದರಲ್ಲವೇ!"

"ಅಹುದು. ಈಗ ಏನು ಮಾಡಬೇಕೆಂದು ನೀನು ಹೇಳುವೆ!" ಮಡದಿಯ ಮೊಗದಿಂದ ಮಾದಯ್ಯ ತನ್ನ ಕಣ್ಣುಗಳನ್ನು ಕದಲಿಸಲಿಲ್ಲ

"ನಿಮಗೆ ಅದು ತಿಳಿಯದೇ? ಅದೇಕೆ ಹಾಗೆ ಮಾಡಿದಿರಿ ಎಂದು ನಾನು ನಿಮ್ಮ ಗೈಮೆಯನ್ನು ಆವಾಗಲಾದರೂ ಜರೆದಿರುವೆನೇ?"

"ಇದು ಹಾಗಲ್ಲ. ತುಂಬಾ ಗಹನವಾದ ವಿಷಯ. ನಾನು ಸತ್ಯಾಗ್ರಹಿಗಳಿಗೆ ಇದೇ ರೀತಿ ನೆರವನ್ನಿತ್ತುದಾದರೆ, ನಾಳೆ ದಿನ ಅಧಿಕಾರಿಗಳು ನನ್ನನ್ನು ಸೆರೆಮನೆಗೆ ಕಳುಹಿಸಬಹುದು. ಆಗ ನಿನ್ನ ಗತಿಯೇನೆಂಬದು ನನ್ನ ಚಿಂತೆ."

"ಆ ರಾಯರೂ ಸಂಗಡಿಗರೂ ಹಲವು ಸಲ ಮಾತಾಡುವದನ್ನು ನಾನು ಕೇಳಿದ್ದೇನೆ. ಎಷ್ಟೋ ಸಲ ಪತ್ರಿಕೆಗಳನ್ನು ಓದಿ ನೀವು ವಿವರಿಸಿ ಹೇಳಿದ್ದೀರಿ. ಜನರೆಲ್ಲರೂ, ಹೆಂಗಸರೂ ಮಕ್ಕಳೂ ನಾಡಿನ ಬಿಡುಗಡೆಗೋಸುಗ ಕಾಯುತಲಿರುವರಂತೆ; ಪೋಲೀಸರ ದೊಣ್ಣೆ ಪೆಟ್ಟುಗಳಿಗೆ ಬೆನ್ನನ್ನು ಒಡ್ಡುತಲಿರುವರಂತೆ. ನಮ್ಮ ಅಳಿಲ ಸೇವೆಯನ್ನು ಸಲ್ಲಿಸಲು ದೇವರು ನಮಗೆ ಈ ಹಾದಿಯನ್ನು ತೋರಿಸಿದಾನೆ. ಕೇವಲ ನನಗೋಸುಗ ನೀವು ಹಿಂಜರಿಯುವುದೇ? ಖಂಡಿತ

ಕೂಡದು. ನೀವು ಸೆರೆಮನೆವಾಸವನ್ನು ತಾಳಬಲ್ಲಿರಾದರೆ,—ನಾನು ಹೊರಗೆ ನನ್ನ ದಿನಗಳನ್ನು ದೂಡ ಬಲ್ಲೆ. ನನ್ನ ಬಗ್ಗೆ ನೀವು ಚಿಂತಿಸಬೇಕಾದುದಿಲ್ಲ.''

ಮಾದಯ್ಯ ತನ್ನ ಕಿವಿಗಳನ್ನು ನಂಬದಾದ. ಪಕ್ಕದಲ್ಲಿದ್ದ ಮಡದಿಯ ಮೊಗದಿಂದ ಅವನು ಕಣ್ಣುಗಳನ್ನು ತೆಗೆಯಲಿಲ್ಲ. ಅಲ್ಲಿ ಅಪೂರ್ವ ಕಾಂತಿ ಯೊಂದು ಕಳೆಯಾಡುತಿದ್ದಿತು. ಹೃದಯದಲ್ಲಿ ಮೂಡಿದ ವಿಶುದ್ಧ ಭಾವ ಗಳೆಲ್ಲ ಆಕೆಯ ಕಣ್ಣುಗಳಲ್ಲಿ ಬಂದು ನೆರೆದಿದ್ದುವು; ತಮ್ಮ ಪ್ರಭೆಯನ್ನು ಹೊರಚೆಲ್ಲುತಿದ್ದವು. ಮಾದಯ್ಯ ಮಡದಿಯ ಕೈಗಳೆರಡನ್ನೂ ಜೋಡಿಸಿ ತನ್ನ ಎದೆಯ ಮೇಲೆ ಇರಿಸಿಕೊಂಡ. ಅವನ ತುಟಿಗಳು ಅಲುಗಿದವು. ''ಪೋಲೀಸರು ಬಂದು ನನ್ನನ್ನು ಸೆರೆಮನೆಗೆ ಒಯ್ಯುವಾಗ ಕಣ್ಣೀರು ಸುರಿಸುವೆಯಾ ಮಂಜೂ!''

''ಇಲ್ಲ. ಎಂದಿಗೂ ಕಣ್ಣೀರನ್ನು ಹನಿಯಿಸೆನು.''

ಮಾದಯ್ಯನ ತೋಳುಗಳು ಜೀವನದ ಜತೆಗಾತಿಯನ್ನು ಬಳ ಸಿದವು. ಮಂಜಮ್ಮನ ತೋಳಬಳ್ಳಿಯು ಮಾದಯ್ಯನ ಕೊರಳನ್ನು ಸುತ್ತಿತು. ''ಮಂಜೂ, ನೀನು ನನ್ನ ಬಾಳುವೆಯ ಜತೆಗಾತಿ ಮಾತ್ರವಲ್ಲ; ನನ್ನ ಬಾಳುವೆಯ ಬೆಳಕು ಸಹ ನೀನೇ ಆಗಿರುವೆ. ಇಂದು ನೀನು ನನ್ನ ಕಣ್ಣು ಗಳನ್ನು ತೆರೆಯಿಸಿದೆ; ಇಲ್ಲದಿದ್ದರೆ ನಿನಗೋಸುಗವೆಂದು ನಾನು ಬಿಡುಗಡೆಯ ಕೊಳಗುಳದಿಂದ ಹಿಮ್ಮೆಟ್ಟುತಿದ್ದೆ!''

× × × ×

ಕೆಲ ದಿನಗಳಲ್ಲಿಯೇ ರಾಮರಾಯರೂ ಅವರ ಸಂಗಡಿಗರೂ ಸೆರೆಗೆ ಒಳಗಾದರು. ಆದರೆ ಆ ಹಳ್ಳಿಯಲ್ಲಿ ಶಾಸನಭಂಗ ಸಮರವು ಅಲ್ಲಿಗೇ ಪರಿ- ಸಮಾಪ್ತಿಗೊಳ್ಳಲಿಲ್ಲ. ಸಮರವನ್ನು ಮುಂದುವರಿಸಲು ಐದು ಮಂದಿ ಸತ್ಯಾ ಗ್ರಹಿಗಳ ತಂಡವೊಂದು ಕೇಂದ್ರಸ್ಥಳದಿಂದ ಬಂದಿತು. ಹೊಸದಾಗಿ ಬಂದ ಸತ್ಯಾಗ್ರಹಿಗಳಿಗೆ ಮಾದಯ್ಯನ ಹೋಟಿಲೇ ನೆರಳಾಯಿತು. ಮುನ್ನಿನಂತೆಯೇ ಮಾದಯ್ಯ ಅವರಿಗೆ ಊಟ ಉಪಚಾರಗಳನ್ನು ಒದಗಿಸಿದ. ಹಳ್ಳಿಗರೂ ಸತ್ಯಾಗ್ರಹಿಗಳಲ್ಲಿ ಮೊದಲಿಗಿಂತಲೂ ಹೆಚ್ಚು ಸ್ನೇಹಾದರಗಳನ್ನು ತೋರಿಸ ಲಾರಂಭಿಸಿದರು. ಕಾಂಗ್ರೆಸು ಪರಿಶ್ರಮಿಸುತಲಿಹುದು ಬೇರಾರಿಗೋಸುಗವಲ್ಲ. ತಮಗೋಸುಗ ಎಂಬ ಭಾವನೆಯು ಅವರ ಎದೆಗಳಲ್ಲಿ ಅಂಕುರಿಸತೊಡಗಿತು;

ಒಂದು ದಿನ ಸಂಜೆ ನಾಲ್ಕು ಮಂದಿ ಪೋಲಿಸರೂ, ಇನ್ಸ್‌ಪೆಕ್ಟರರೂ ಮಾದಯ್ಯನ ಹೋಟೆಲಿಗೆ ದಯಮಾಡಿಸಿದರು. ದಿನದ ಪ್ರಚಾರಗೆಲಸಗಳನ್ನು ಮುಗಿಸಿಕೊಂಡು ಬಂದ ಸತ್ಯಾಗ್ರಹಿಗಳೂ, ಇತರರೂ ಹೋಟೆಲಿನಲ್ಲಿ ಸಂದಣಿಸಿದ್ದರು. ಹತ್ತಾರು ಮಂದಿ ಚಹಾ ಕುಡಿಯುತಲಿದ್ದರು. ಇನ್ಸ್‌ಪೆಕ್ಟರರು ಹೋಟೆಲಿನೊಳಗೆ ಪ್ರವೇಶಿಸಿ ಮಾದಯ್ಯನ ಸಂಗಡ ನುಡಿದರು. "ನಾನು ಮೊದಲೇ ನಿನಗೆ ಎಚ್ಚರಿಕೆಯನ್ನು ಕೊಟ್ಟಿದ್ದೆ. ಆದರೆ ನನ್ನ ನುಡಿಗಳನ್ನು—ನೀನು ಕಿವಿಗಳಲ್ಲಿ ಹಾಕಿಕೊಳ್ಳದೆ ಸತ್ಯಾಗ್ರಹಿಗಳಿಗೆ ನೆರಳನ್ನು ನೀಡಿ, ಕಾಯಿದೆ ಭಂಗಮಾಡಲು ಉತ್ತೇಜನಗೊಳಿಸಿದೆ. ಆದುದರಿಂದ ನಿನ್ನನ್ನು ಸೆರೆಹಿಡಿಯಬೇಕಾಗಿ ಬಂದಿದೆ."

"ಒಳ್ಳೆಯದು. ನನ್ನ ಮಡದಿಯ ಸಂಗಡ ಮಾತಾಡಲು ಐದು ನಿಮಿಷ ಸಮಯ ಕೊಡಿ.

"ಆಗಲಿ" ಎಂದು ಇನ್ಸ್‌ಪೆಕ್ಟರರ ಅಣತಿಯಾಯಿತು. ತನ್ನಾಕೆಯ ಸಂಗಡ ಮಾತಾಡಲೋಸುಗ ಮಾದಯ್ಯ ಒಳಮನೆಗೆ ತೆರಳಿದ. ನೆರವಿಯು ಆಶ್ಚರ್ಯ ಭಯಗಳಿಂದ ಕೂಡಿದುದಾಯಿತು. ಜನರು ವಿಸ್ಮಯ ದೃಷ್ಟಿಗಳಿಂದ ಪೋಲಿಸರನ್ನು ನೋಡಿದರು. ಮಾದಯ್ಯನನ್ನು ಸೆರೆಹಿಡಿಯಲು ಪೋಲಿಸರು ಬಂದಿದಾರೆಂಬ ಸುದ್ದಿಯು ಊರಲ್ಲೆಲ್ಲಾ ವ್ಯಾಪಿಸಿತು. ಊರ ಜನರು ಚಹಾದಂಗಡಿಯ ಮುಂದೆ ನೆರೆಯತೊಡಗಿದರು

"ಮಂಜೂ, ನನ್ನನ್ನು ಸೆರೆಹಿಡಿದುಕೊಂಡು ಹೋಗಲು ಪೋಲಿಸರು ಬಂದಿದಾರೆ." ಮಡದಿಯನ್ನು ಅಪ್ಪಿಕೊಳ್ಳುತ್ತಾ ಮಾದಯ್ಯ ಉಸುರಿದ.

"ಇದು ಮೊದಲೇ ನನಗೆ ತಿಳಿದಿತ್ತು." ಎಂಬ ದನಿಯು ಹೊರಟಿತು ಮಂಜಮ್ಮನ ಕೊರಳಿಂದ.

"ನಿನ್ನ ಆಲೋಚನೆಯೇ ನನ್ನ ಮೆದುಳನ್ನು ತಿನ್ನುತಲಿದೆ. ನಿನಗೆ ದುಃಖವೆನಿಸುವುದಿಲ್ಲವೇ?"

"ಇಲ್ಲ. ನಾನು ಹೆಮ್ಮೆ ಪಡುತ್ತೇನೆ." ಮಂಜಮ್ಮನ ಬೆರಳುಗಳು ಪತಿಯ ಗಲ್ಲದ ಮೇಲೆ ಆಡಿದುವು. "ನನ್ನ ಕೈ ಹಿಡಿದವರು ನಾಡಸೇವೆಗೈದು ಸೆರೆಮನೆಗೆ ತೆರಳುತಿರುವರಲ್ಲ." ಎಂದು ನಾನು ಹೆಮ್ಮೆ ಪಡುತ್ತೇನೆ. ನನಗೋಸುಗ ಮರುಗದಿರಿ. ಹೊರಗೆ ನನಗೆ ಹಾದಿಯನ್ನು ತೋರಿಸಲು ದೇವರಿದಾನೆ."

ಮಂಜಮ್ಮ ಅಣ್ಣನ ಹಣೆಯ ಮೇಲೆ ಕುಂಕುಮದ ತಿಲಕವನ್ನು ಇರಿಸಿದಳು. ಹಿಂದೆ ಸಮರಾಂಗಣಕ್ಕೆ ಅಣ್ಣರನ್ನು ಕಳುಹುತಿದ್ದ ವೀರ ರಜಪೂತ ಮಹಿಳೆಯರಂತೆ ಆಕೆ ರಮಣನನ್ನು ಸೆರೆಮನೆಗೆ ಬೀಳ್ಕೊಟ್ಟಳು. ಒಂದು ಹನಿ ಕಣ್ಣೀರಾದರೂ ಆಕೆಯ ಕಣ್ಣುಗಳಿಂದ ಉದುರಲಿಲ್ಲ. ವ್ಯಥೆಯ ಕಿರುಮೋಡವು ಆಕೆಯ ಮೊಗವನ್ನು ಕವಿಯಲಿಲ್ಲ. ಹೆಮ್ಮೆಯ ಹೊಬಿಸಿಲು ಆ ಮೊಗದಲ್ಲಿ ಕಳೆಮಾಡುತಿದ್ದಿತು!

ಮಾದಯ್ಯ ಪೋಲಿಸು ಇನ್ಸ್‌ಪೆಕ್ಟರರನ್ನು ಹಿಂಬಾಲಿಸಿದ. ಜನತೆಯ ಕೊರಳಿಂದ ಹೊರಟ ಜಯಘೋಷವು ಬಾನನ್ನು ಸೀಳಿತು. ಜಗುಲಿಯ ಮೇಲೆ ನಿಂತಿದ್ದ ಮಂಜಮ್ಮ ಪತಿಯು ಕಣ್ಮರೆಯಾಗುವತನಕ ಎವೆಯಿಕ್ಕದೆ ದಿಟ್ಟಿಸಿದಳು.

× × × ×

ನ್ಯಾಯಾಧೀಶರು ಮಾದಯ್ಯನಿಗೆ ಒಂದುವರೆ ವರುಷ ಕಠಿನ ದಂಡನೆಯನ್ನು ವಿಧಿಸಿದರು. ತುರಂಗ ಯಾತ್ರೆಯೆಂಬ ತೀರ್ಥಾಟನದಲ್ಲಿ ಆತನೂ ಭಾಗಿಯಾದ.

ಬಾಳುವೆಯ ಹೊರೆಯು ಈಗ ಪೂರ್ತಿಯಾಗಿ ಮಂಜಮ್ಮನ ಮೃದು ತೋಳುಗಳ ಮೇಲೆ ಕುಸಿದುಬಿದ್ದಿತು. ಪತಿಗೆ ನವಚೇತನವನ್ನು ನೀಡಿದಾಕೆ ತಾನು; ಆತನನ್ನು ಮುಂದೆ ಅಡಿಗಳನ್ನಿರಿಸಲು ಪ್ರೇರಣೆಯನ್ನು ಇತ್ತವಳು ತಾನು – ಈ ಸಂಗತಿಯನ್ನು ಮಂಜಮ್ಮ ಬಲ್ಲಳು. ಆತ ತನ್ನ ಹೆಗಲ ಮೇಲೆ ಎಂತಹ ಹೊಣೆಗಾರಿಕೆಯನ್ನು ಒಪ್ಪಿಸಿದನೆಂಬುದರ ಅರಿವೂ ಆಕೆಗೆ ಇತ್ತು. ಆಕೆ ಅಳುಕಲಿಲ್ಲ; ಬಳುಕಲಿಲ್ಲ; ಬಾಳುವೆಯ ಹೋರಾಟಕ್ಕೆ ತನ್ನ ಹೆಗಲುಗಳನ್ನು ಒಡ್ಡಿದಳು.

ಮಾದಯ್ಯನ ಹೋಟೆಲನ್ನು ಈಗ ಮಂಜಮ್ಮನೇ ನಡೆಸುತಿದಾಳೆ. ಅಚ್ಚುಕಟ್ಟು, ಚೊಕ್ಕಟಗಳಲ್ಲಿ ಅದು ಕೆಳಗಿನ ಮಟ್ಟಕ್ಕೆ ಇಳಿಯಲಿಲ್ಲ. ಹದಿನಾರು ವರುಷ ಪ್ರಾಯದ ನಂಜನೆಂಬ ಹುಡುಗ ಆಕೆಯ ನೆರವಿಗೆ ಇದಾನೆ. ಗಿರಾಕಿಗಳಿಗೆ ಚಹಾ ತಿಂಡಿಗಳನ್ನು ನೀಡುವುದು ಅವನ ಕೆಲಸ. ಒಳಗೆ, ತೊಳೆಯುವುದು, ಅರೆಯುವುದು, ತಿಂಡಿಗಳನ್ನು ಬೇಯಿಸುವುದು ಇತ್ಯಾದಿ

ಮಾಳ್ಕೆಗಳನ್ನು ಮಂಜಮ್ಮನ ಕೈಗಳೇ ಎಸಗುತಲಿವೆ. ದಿನದಲ್ಲಿ ಹದಿನೆಂಟು ತಾಸುಗಳನಕ ಆಕೆ ದುಡಿಯುತಾಳೆ. ಗೈಮೆಗಳಲ್ಲಿ ಆಕೆಗೆ ಬೇಸರವಿಲ್ಲ. ಅರಳಿದ ಮಲ್ಲಿಗೆಯ ಮಲರಿನಂತೆ ಆಕೆಯ ಮೊಗವು ಉನ್ಮೇಷ, ಹುರುಪಗಳ ಮಕರಂದದಿಂದ ಕೂಡಿದುದು.

ಊರವರ ಪ್ರೀತ್ಯಾದರಗಳು, ಸ್ನೇಹ ಸಹಾನುಭೂತಿಗಳು ಮಂಜಮ್ಮನ ಬೆಂಗಾವಲಿಗಿದ್ದುವು. ತನ್ನ ಕುಟುಂಬದ ಸಂರಕ್ಷಣೆಯ ವಿಚಾರವನ್ನು ಮಾದಯ್ಯ ಯಾರ ಸಂಗಡವೂ ಹೇಳದಿದ್ದರೂ, ಆತ ಆ ಹೊಣೆಯನ್ನು ತಮ್ಮ ಪಾಲಿಗೆ ಒಪ್ಪಿಸಿದಾನೆ ಎಂಬ ಭಾವನೆಯು ಹಳ್ಳಿಗರ ಮನದಲ್ಲಿ ಮೂಡಿದ್ದಿತು. ಆದುದರಿಂದ ಅವರು ಆಗಾಗ ಮಂಜಮ್ಮನ ಯೋಗಕ್ಷೇಮ ಗಳನ್ನು ವಿಚಾರಿಸಿಕೊಳ್ಳುತಿದ್ದರು. ಅಗತ್ಯವೆನಿಸಿದಾಗ ನೆರವನ್ನು ಈಯು ತಿದ್ದರ.. ಬೇರೆ ಹೆಚ್ಚಿನದೇನೂ ಶಕ್ಯವೆನಿಸದಿದ್ದಾಗ, ಹೋಟೆಲಿಗೆ ಬಂದು ಒಂದು ಕಪ್ಪು ಚಹಾವನ್ನು ಕುಡಿದು ಆ ಮೂಲಕ ಮಂಜಮ್ಮನ ಉಪಜೀವನ ದಲ್ಲಿ ನೆರವಾಗುತಿದ್ದರು.

ಪತಿಯು ತುರಂಗಕ್ಕೆ ತೆರಳಿದರೂ, ನಾಲ್ಕು ಮಂದಿ ಸತ್ಯಾಗ್ರಹಿಗಳ ಉಣಿಸು, ತಿನಸುಗಳನ್ನು ನೋಡಿಕೊಳ್ಳುವ ಕ್ರಮವನ್ನು ಮಂಜಮ್ಮ ಬಿಡ ಲಿಲ್ಲ. ಮಾದಯ್ಯ ಸೆರೆಮನೆಗೆ ತೆರಳಲು ಸತ್ಯಾಗ್ರಹಿಗಳು, ಮಂಜಮ್ಮನಿಗೆ ತೊಂದರೆ ಕೊಡಲು ಇಷ್ಟವಿಲ್ಲದೆ ಅಲ್ಲಿಂದ ಹೊರಟರು. "ನಮಗೋಸುಗ ಮಾದಯ್ಯ ಸೆರೆಮನೆವಾಸದ ಸವಿಯನ್ನುಣಬೇಕಾಗಿ ಬಂತು. ಹೆಣ್ಣು ಹೆಂಗಸು ನಿಮಗೆ ನಾವು ತೊಂದರೆ ಕೊಡುವುದು ಅನುಚಿತವು." ಎಂದರವರು.

"ಗಾಂಧಿ ಜನರ ಸೇವೆಯು ಅವರಿಗೆ ನಚ್ಚಿನದು." ಮಂಜಮ್ಮ ಸತ್ಯಾಗ್ರಹಿಗಳಿಗೆ ಮಾರ್ನುಡಿದಳು. ಅದನ್ನು ನಾನು ಈಡೇರಿಸದಿದ್ದರೆ ಅವರೊಡನೆ ಒಂದು ಹಿರಿಯ ಅಪರಾಧವನ್ನು ಎಸಗಿದಂತಾಗುವುದು. ಬೇಕಾದರೆ ಸರ ಕಾರದವರು ನನ್ನನ್ನೂ ಸೆರೆಮನೆಗೆ ಸೇರಿಸಲಿ!"

ಮಂಜಮ್ಮನ ಬೇಡಿಕೆಯನ್ನು ಅಲ್ಲಗಳೆಯಲು ಸತ್ಯಾಗ್ರಹಿಗಳಿಗೆ ಅಸವಳ ವೆನಿಸಿತು. ಆ ವೀರ ಪತ್ನಿಯ ಊಟ ಉಪಚಾರಗಳನ್ನು ಅವರು ಕೈ ಗೊಂಡರು.

× × × ×

## ( ೪ )

ಕಾಲವೆಂಬ ಗಡಿಯಾರದಲ್ಲಿ ವರುಷವೆಂಬ ಮುಳ್ಳು ಮೂರು ಸುತ್ತು ತಿರುಗಿತು. ಈ ಅವಧಿಯಲ್ಲಿ ಮಾದಯ್ಯ ಎರಡು ಸಲ ತುರಂಗವಾಸದ ತೀರ್ಥಯಾತ್ರೆಯನ್ನು ಮುಗಿಸಿಕೊಂಡು ಹೊರಬಂದ. ಈ ಕಾಲಾವಧಿಯಲ್ಲಿ ಅವನ ಮನಸ್ಸಿನಲ್ಲಿ ಹಲವು ಮಾರ್ಪಾಡು ಉಂಟಾದವು. ಮೊದಲು ಆತ ಕೇವಲ ಗಾಂಧಿಭಕ್ತ ಮಾತ್ರವಾಗಿದ್ದ ರಾಜಕಾರಣ, ರಾಜಕಾರಣದಲ್ಲಿ ಸತ್ಯಾಗ್ರಹವ ನೆಲೆ ಮೊದಲಾದ ವಿಚಾರಗಳು ಆತನಿಗೆ ತಿಳಿದಿರಲಿಲ್ಲ. ಸ್ವಾತಂತ್ರ್ಯದ ಅಗತ್ಯತೆ,—ಅದನ್ನು ಜನತೆಯು ಹೇಗೆ ಪಡೆಯಬಹುದು ಎಂಬ ವಿಚಾರಗಳ ರೂಪ ರೇಷೆಗಳ ಪರಿಚಯವು ಆತನಿಗಿರಲಿಲ್ಲ.

ಆದರೆ ಸೆರೆಮನೆಯು ಆತನಿಗೊಂದು ವಿದ್ಯಾಲಯವಾಯಿತು. ಅಲ್ಲಿ ತಿಳಿವುಳ್ಳ—ಅರಿವಿನ ಕಿಡಿಗಳನ್ನು ಕೆದರಬಲ್ಲ ಕಾಂಗ್ರೆಸಿಗರು ಬಹು ಮಂದಿ ಇದ್ದರು. ಅವರ ಪರಿಚಯ, ಒಡನಾಟಗಳು ಮಾದಯ್ಯನ ಬುದ್ಧಿಯನ್ನು ಕುದುರಿಸಿದವು. ಅವರೊಡನೆ ನಡೆಸಿದ ಮಾತುಕತೆಗಳು ಅವನ ದೃಷ್ಟಿಕೋನ ವನ್ನು ವಿಶಾಲವಾಗಿಸಿದವು; ಅವನ ಭಾವನೆಗಳು ಬಲಿತುವು. ಅವನು ಸೆರೆ-ಮನೆವಾಸವನ್ನು ವ್ಯಾಸಂಗದಲ್ಲಿ ಕಳೆದ; ಕೈಗೆ ಬಂದ ಹಲವು ಉತ್ತಮ ಹೊತ್ತಿಗೆಗಳನ್ನು ಓದಿದ. ಆ ಮೂಲಕ ಅವನು ತನ್ನ ಅರಿವಿನ ಬೊಕ್ಕಸ ವನ್ನು ವಿಪುಲಗೊಳಿಸಿಕೊಂಡುದಾಯಿತು.

ಮೂರು ವರುಷಗಳ ಕಾಲವು ಅವನ ಪಾಲಿಗೆ ಅದೊಂದು ದೊಡ್ಡ ತಪಸ್ಸಾಯಿತು. ವ್ಯಾಸಂಗ, ಅನುಭವಗಳಿಂದ ಅವನ ಬುದ್ಧಿಯು ಪರಿಪಕ್ವ ವಾಯಿತು. ಅವನ ಬುದ್ಧಿಯು ಕ್ರಾಂತಿಯ ಹಾದಿಯನ್ನು ತುಳಿಯಿತು. "ಜನಜೀವನವು ಉತ್ತಮಗೊಳ್ಳಬೇಕಾದರೆ ನಾಡಿನ ಆಡಳಿತದ ಸೂತ್ರಗಳು ಜನತೆಯ ಕೈಗೆ ದೊರಕಬೇಕು; ಕ್ರಾಂತಿಯಿಲ್ಲದೆ ಇತರ ಸಾಮೋಪಾಯ ಗಳಿಂದ ಆಳರಸರು ಆಡಳಿತವನ್ನು ಜನತೆಗೆ ಒಪ್ಪಿಸರು. ಕ್ರಾಂತಿಯಾದರೂ ಜನತೆಯ ಬಸಿರಿನಿಂದಲೇ ಮೂಡಬೇಕು. ಆದುದರಿಂದ ಸ್ವಾತಂತ್ರ್ಯ ಸಾಧನೆಯ ಹೊಣೆಯು ನಾಡಿನ ಬೇಸಾಯಗಾರರ ಹೆಗಲ ಮೇಲಿದೆ. ಅವರ ಅಂತರಂಗಗಳಲ್ಲಿ ಹುದುಗಿದ ಅನಂತ ಚೇತನವನ್ನು ಜಾಗ್ರತಗೊಳಿಸಬೇಕು. ಕ್ರಾಂತಿಯ ಹೆದ್ದಾರಿಯಲ್ಲಿ ಜನಜೀವನದ ತೇರು ಮುಂದೆ ಸಾಗಬೇಕು."

ಹೀಗೆ ಮಾದಯ್ಯನಿಗೆ ತುರಂಗದಲ್ಲಿ ಜನತಾ ಜನಾರ್ದನನ ವಿಶ್ವರೂಪ ದರ್ಶನವಾಯಿತು. ನಾಡನ್ನು ಉದ್ಧರಿಸಬಲ್ಲ ಶಕ್ತಿಯು ಜನತೆಯಲ್ಲಿದೆ ಎಂದು ಆತ ಮನಗಂಡ. ಜನತಾ ಸೇವೆಯಲ್ಲಿ ಆತನಿಗೆ ನಂಬಿಕೆಯು ಇಮ್ಮಡಿಸಿತು.

× × × ×

ಮೂರು ವರುಷಗಳ ಕಾಲಾವಧಿಯಲ್ಲಿ ಮಂಜಮ್ಮ ನಡೆಸುತ್ತಿದ್ದ ಹೋಟೆಲು ಮುರಿದು ಹೋಗಿದ್ದಿತು. ರಾಜದ್ರೋಹಿಗಳಾದ ಕಾಂಗ್ರೆಸಿಗರ ಸಂಕೇತ ಸ್ಥಾನವೆಂಬ ಕಾರಣದಿಂದ ಅಧಿಕಾರಿಗಳು ಅದಕ್ಕೆ ಮುಟ್ಟುಗೋಲು ಹಾಕಿದ್ದರು. ಹೋಟೆಲಿನಲ್ಲಿದ್ದ ಪಾತ್ರ ಪದಾರ್ಥಗಳು ಮಾದಯ್ಯನ ದಂಡದ ಸಲುವಾಗಿ ಲಿಲಾವಾಗಿ ಹೋದವು. ಮಾದಯ್ಯನು ಎರಡನೇ ಸಲದ ಕಾರಾ ಗೃಹವಾಸವನ್ನು ಮುಗಿಸಿಕೊಂಡು ಬಂದಾಗ, ಮಂಜಮ್ಮನ ಬದುಕು ಒಡೆದ ದೋಣಿಯಂತಾಗಿದ್ದಿತು. ಆಕೆ ಮಂದಿಯ ಮನೆಗಳಲ್ಲಿ ನೆಲ್ಲನ್ನು ಮಿದಿದು ದೊರೆವ ಕೂಲಿಯಿಂದ ದಿನಗಳನ್ನು ದೂಡುತ್ತಿದ್ದಳು; ಮೈಯ ಬೆವರನ್ನು ಹನಿಯಿಸಿ ದಿನದ ಕೂಳನ್ನು ಸಂಪಾದಿಸುತಿದ್ದಳು.

ಮಂಜಮ್ಮನ ಮೈಯ ಪ್ರತಿಯೊಂದು ರಕ್ತ ಕಣದಲ್ಲಿಯೂ ಸ್ವಾಭಿ ಮಾನವು ತುಳುಕುತಿದ್ದಿತು. ಹೋಟೆಲನ್ನು ಕಳೆದುಕೊಂಡು, ಹಿಡಿ ಕೂಳ ಗಾಗಿ ಆಲೋಚಿಸಬೇಕಾದ ಪರಿಸ್ಥಿತಿ ಒದಗಿದಾಗ, ಹಳ್ಳಿಗರಲ್ಲಿ ಅನೇಕರು ಆಕೆಗೆ ನೆರವು ನೆಳಲುಗಳನ್ನು ನೀಡಲು ಮುಂದೆ ಬಂದರು. ಆದರೆ ಇತರ ರಿಂದ ಉಚಿತವಾಗಿ ಒಂದು ಬಿಡುಗಾಸನ್ನಾದರೂ ತಾನು ಪಡೆಯೆನೆಂದು ಆಕೆ ಹಟ ಹಿಡಿದಳು. "ನನ್ನ ತೋಳುಗಳಲ್ಲಿ ಬಲವಿದೆ; ಆದುದರಿಂದ ಯಾರನ್ನೂ ತಿರುಪೆ ಬೇಡಲಾರೆ. ನೆಲ್ಲನ್ನು ಮಿದಿದು ದೊರೆವ ಕೂಲಿಯಿಂದ, ನನ್ನ ಕೈಹಿಡಿವವರು ಬರುವನಕ ದಿನಗಳನ್ನು ದೂಡುವೆನು." ಎಂಬ ಉಲಿಗಳು ಹೊರಟವು ಆಕೆಯ ಕೊರಳಿಂದ.

ದುಡಿಮೆಯನ್ನು ತೆಗಳುವವರು ಹಲವರಿದ್ದಾರೆ. ಆದರೆ ಮಂಜಮ್ಮ ಅಂತಹಳಲ್ಲ. ಆಕೆ ಕಠಿನ ಕೆಲಸಗಳಲ್ಲಿ ಸಹ ಒಂದು ಬಗೆಯ ಸೊಗಸನ್ನು ಕಂಡಳು. ಇತರರು ಉಚಿತವಾಗಿ ಇತ್ತ ಒಂದು ರೂಪಾಯಿಗಿಂತ ತಾನು ಬೆವರು ಹರಿಸಿ ಸಂಪಾದಿಸಿದ ಒಂದು ಪಾವಲಿಯು ಹೆಚ್ಚು ಬೆಲೆಯುಳ್ಳ ದ್ದಾಗಿ ತೋರುತಿದ್ದಿತು ಆಕೆಗೆ. ಹೊಟೆಲು ನಡೆಸಿ ಕೈಗಳಲ್ಲಿ ನಾಲ್ಕು ಕಾಸು

ಗಳು ಓಡಾಡುತ್ತಿದ್ದಾಗ, ಇದ್ದ ಸಂತಸವು ಪರರ ಮನೆಗಳಲ್ಲಿ ನೆಲ್ಲನ್ನು ಮಿದಿದು ಹಸಿವೆಯನ್ನು ಪರಿಹರಿಸಿಕೊಳ್ಳಬೇಕಾದ ಪರಿಸ್ಥಿತಿಯಲ್ಲಿಯೂ ಆಕೆಯ ಅಂತ ರಂಗದಲ್ಲಿ ನೆಲೆಸಿದ್ದಿತು!

× × × ×

ತುರಂಗದಿಂದ ಹೊರಬಂದ ಮಾದಯ್ಯನ ಅಂತರಂಗವು ತನ್ನ ಕೈಹಿಡಿದಾಕೆಯ ಇರವನ್ನು ನೋಡಿ ಕರಗಿಹೋಯಿತು. ತನಗೋಸುಗ ಮಡದಿಯು ಎಂತಹ ನೋವು ಸಂಕಟಗಳಿಗೆ ಎದೆಯೊಡ್ಡಿದಾಳೆಂಬ ಚಿತ್ರವು ಆತನ ಕಣ್ಣುಗಳಿಗೆ ಗೋಚರಿಸಿತು. ಆತ ಮಡದಿಯನ್ನು ತೋಳತೆಕ್ಕೆಯಲ್ಲಿ ಸಂತೈಸುತ್ತಾ ನುಡಿದ. “ಮಂಜೂ, ಕಲ್ಲೆದೆಯು ನನ್ನದು. ನಿನ್ನನ್ನು ಎಂತಹ ಸಂಕಟಗಳಿಗೆ ಒಳಗುಮಾಡಿದೆ. ಕೂಲಿಯ ಹೆಣ್ಣಿನಂತೆ ಪರವರ ಮನೆಗಳಲ್ಲಿ ನೆಲ್ಲನ್ನು ಮಿದಿಯುತಿರುವೆಯಲ್ಲ! ನಾಡಸೇವೆಯೆಂದು ನನ್ನ ಮನೆಗೇ ನಾನು ಮೊದಲು ಕಿಚ್ಚನ್ನಿಕ್ಕಿದೆ. ನನ್ನನ್ನು ಮನ್ನಿಸು.”

“ಮನ್ನಿಸುವದೇಕೆ? – ಅಂತಹ ಯಾವ ತಪ್ಪನ್ನು ನೀವು ಎಸಗಿದಿರಿ?” ಪತಿಯ ತೋಳುಗಳು ಮಂಜಮ್ಮನ ಮೂರು ವರುಷಗಳ ಸಂಕಟ ದಣಿವುಗಳನ್ನು ಇಲ್ಲವಾಗಿಸಿದ್ದವು. ಎಳೆನಗೆಯ ತಂಬೆಲರು ಆಕೆಯ ತುಟಿಗಳ ಮೇಲೆ ಮೆಲುಕಾಡಿತು. “ನಾಡಿಗೋಸುಗ ನೀವು ಅನುಭವಿಸಿದ ಸಂಕಟಗಳ ಮುಂದೆ ನನ್ನ ಎಸಕವೊಂದು ಯಾವ ಹುಲ್ಲುಕಡ್ಡಿ! ಎನಿತೋ ಮಂದಿ ಹೆಂಗಸರು ಸಹ ಪೋಲಿಸರ ಹೊಡೆತಗಳನ್ನು ತಿಂದಿಹರು; ಸೆರೆಮನೆಯನ್ನು ಸೇರಿಹರು ಎಂದು ಕೇಳಿದೇನೆ.”

“ನನ್ನ ಮೇಲಿನ ಪ್ರೀತಿಯಿಂದ ನೀನು ಈ ಸಂಕಟಗಳನ್ನೆಲ್ಲಾ ಸಹಿಸಿದೆ ಮಂಜೂ.” ಮಾದಯ್ಯ ಮಡದಿಯ ಕುರುಳುಗಳ ಮೇಲೆ ತನ್ನ ಬೆರಳು ಆಡಿಸಿದ. “ನಿನ್ನ ಪ್ರೀತಿಯ ಬೆಂಗಾವಲಿಗಿದ್ದುದರಿಂದಲೇ, – ನಾನು ಈ ಸಂಕಟಗಳನ್ನು ತಾಳಿದೆ. ಅಲ್ಲಿ, ಸೆರೆಮನೆಯಲ್ಲಿ ಚಿಂತೆಯ ಕಾರ್ಮುಗಿಲು ಮನಸ್ಸನ್ನು ಮುಚ್ಚಿದಾಗ, ನಿನ್ನ ಪ್ರೀತಿಯೇ ನನಗೆ ದಾರಿ ತೋರಿಸಲಿಹ ಬೆಳ್ಳಿ ಬೆಳಕಾಗಿದ್ದಿತು.”

“ಅಹುದು. ಪ್ರೀತಿ ಕೊರಡನ್ನು ಕೊನರಿಸಬಲ್ಲುದು.” ಮಂಜಮ್ಮನ ಕೊರಳಿಂದ ನುಡಿಗಳು ಹರಿದವು. “ಎದೆಯನ್ನು ತಳಿರಿಸಬಲ್ಲ ಸಂಜೀವಿನಿ

ಎಂದರೆ ಒಲವೇ ಸರಿ. ಆ ಒಲುವಿನ ಬಗ್ಗೆಯೋ–ನನ್ನ ಆಯಾಸ–ನೋವು ಸಂಕಟಗಳನ್ನೆಲ್ಲ ಇಲ್ಲವಾಗಿಸಿತು. ಕಷ್ಟಗಳಿಗೆ ಎದೆಯನ್ನೊಡ್ಡುವ ಕೆಚ್ಚನ್ನು ನೀಡಿತು "

"ಪ್ರೀತಿಯೇ ನಮ್ಮ ಬದುಕನ್ನು ಹೊಸತಾಗಿಸಲಿ." ನಲ್ಲನೊತ್ತಿದ ಪ್ರೀತಿಯ ಅಚ್ಚು ಮಂಜಮ್ಮನ ತುಟಿಗಳ ಮೇಲೆ ಮೂಡಿತು "ಇನ್ನೂ ದುಡಿಯಲು ತುಂಬಾ ಇದೆ. ದೂರದಲ್ಲಿ ಯಾವದೋ ಒಂದು ಕನಸು ಗೋಚರಿಸುತಲಿದೆ. ಅದನ್ನು ನನಸಾಗಿಸುವ ಹೊಣೆಯು ನಮ್ಮ ಹೆಗಲ ಮೇಲಿದೆ. ನಿನ್ನ ಪ್ರೀತಿಯು ನನ್ನ ಬೆಂಗಾವಲಿಗಿರಲಿ."

× × × ÷

ಮಾದಯ್ಯ ತನ್ನ ಉಪಜೀವನಕ್ಕೋಸುಗ ಹೊಸದೊಂದು ಕಸಬನ್ನು ಕೈಗೊಳ್ಳಬೇಕಾಯಿತು. ಪುನಃ ಹೋಟೆಲನ್ನು ಪ್ರಾರಂಭಿಸೋಣವೆಂದರೆ ಬಂಡ ವಾಳವಿರಲಿಲ್ಲ. ಪಾತ್ರೆ ಪದಾರ್ಥಗಳನ್ನು ಒದಗಿಸಬೇಕು. ಆದು ಸದ್ಯದ ಪರಿ ಸ್ಥಿತಿಯಲ್ಲಿ ಅಸದಳವಾದುದು. ಆದುದರಿಂದ ಅವಲಕ್ಕಿಯನ್ನು ಮಿದಿದು ಮಾರುವ ಕೆಲಸವನ್ನು ಕೈಗೊಂಡುದಾಯಿತು.

ಒಂದು ಹುಲ್ಲುಗುಡಿಸಿಲೇ ಆ ನಲ್ಲ-ನಲ್ಲೆಯರ ವಸತಿಯಾಯಿತು. ಮಾದಯ್ಯ ಎರಡು ರೂಪಾಯಿಗಳ ನೆಲ್ಲನ್ನು ಕೊಂಡುಕೊಂಡು ತನ್ನ ಕಸಬನ್ನು ಆರಂಭಿಸಿದ. ನೆಲ್ಲನ್ನು ನೀರಿನಲ್ಲಿ ನೆನೆಹಾಕಿದಳು ಮಂಜಮ್ಮ. ಮರುದಿನ ಬೆಳಿಗ್ಗೆ ಮಂಜಮ್ಮ ನೆನೆಹಾಕಿದ ಭತ್ತ ಹುರಿದಳು. ಮಾದಯ್ಯ ಆ ನೆಲ್ಲನ್ನು ಮಿದಿದ. ಆಕೆ ಅನಂತರ ಮಿದಿದ ಅವಿಲನ್ನು ಕೇರಿ ಉಮ್ಮಿ ತವಡು ಗಳನ್ನು ಬೇರ್ಪಡಿಸಿ ತೆಗೆದಳು. ಹಸನು ಮಾಡಿದ ಅವಲಕ್ಕಿಯನ್ನು ಪೇಟೆಗೆ ತೆಗೆದುಕೊಂಡು ಹೋಗಿ ಮಾರುವದು ಮಾದಯ್ಯನ ಕೆಲಸವಾಯಿತು. ಈ ವ್ಯಾಪಾರದಲ್ಲಿ ಅತನಿಗೆ ಎಂಟಾಣೆ, ಒಂದು ರೂಪಾಯಿಗಳ ಲಾಭ ದೊರಕು ತಿದ್ದಿತು. ಈ ಸಂಪಾದನೆಯಿಂದ ಆ ಪುಟ್ಟ ಸಂಸಾರವು ಸಾಗುತಿದ್ದಿತು.

ಮಾದಯ್ಯನ ಕಷ್ಟತರದ ಬಾಳುವೆಯನ್ನು ನೋಡಿ ಹಳ್ಳಿಗರಲ್ಲಿ ಹಲ ವರು ಮರುಗಿದರು. ಕಾಂಗ್ರೆಸ್ಸಿಗೆ ಬೆರೆತುದರಿಂದ ಮಾದಯ್ಯನಿಗೆ ದೊರೆತ ಸೌಭಾಗ್ಯವಿದೆಂದು ಹಲವರು ಗೇಲಿಮಾಡದಿರಲಿಲ್ಲ. ತುಸು ಮುಂದಿ ಮಾದಯ್ಯನ

ನೆರವಿಗೂ ಬಂದರು. ಅವರಲ್ಲಿ ಮುಖ್ಯನಾದವನು ಸಿದ್ದಯ್ಯ. ಒಂದು ದಿನ ಮಾದಯ್ಯನ ಗುಡಿಸಿಲಿಗೆ ಬಂದಿದ್ದ ಸಿದ್ದಯ್ಯ. ತನ್ನ ಗೆಳೆಯ ಅವಲಕ್ಕಿ ಮಿದಿಯುತಲಿಹುದನ್ನು ನೋಡಿ ಹೇಳಿದ. "ಮಾದಯ್ಯ, ನೀನು ಗಾಣದೆತ್ತಿನ ದುಡಿತವನ್ನು ವಹಿಸಿಕೊಂಡಂತಿದೆ."

"ದಿನಗಳೆಯಲು ಆವುದಾದರೂ ದುಡಿಮೆಯನ್ನು ಕೈಗೊಳ್ಳಬೇಕಲ್ಲ." ಅವಲಕ್ಕಿ ಮಿದಿಯುತಿದ್ದ ಮಾದಯ್ಯ ನಗುಮೊಗದೊಡನೆ ಉತ್ತರಿಸಿದ. "ಎಲ್ಲರಿಗೂ ಬಾಳುವೆಯು ಹೂವಿನ ಹಾಸಿಗೆಯಾಗಲು ಸಾಧ್ಯವೇ?"

"ನೀನೂ ಮಂಜಕ್ಕನೂ ಈ ರೀತಿ ದುಡಿಯುವದನ್ನು ಕಂಡು ನನ್ನ ಹೊಟ್ಟೆಯುರಿಯುತಲಿದೆ." ಸಿದ್ದಯ್ಯನ ಕೊರಳಿಂದ ಕನಿಕರದ ಧ್ವನಿಯು ಹೊರಟಿತು. "ನಿನ್ನಲ್ಲಿ ಬಂಡವಾಳವಿಲ್ಲದಿದ್ದರೆ, ನಾನು ನಿನಗೆ ಒಂದು ನೂರು ರೂಪಾಯಿ ಕಡ ಕೊಡುತೇನೆ. ನಿನಗೆ ಅನುಕೂಲವಾದಾಗ ಸಾಲತೀರಿಸು."

"ಬೇಡ. ಸಿದ್ದಯ್ಯ, ನಿನ್ನ ಸ್ನೇಹವಿದ್ದರೆ ಸಾಕು." ಮಾದಯ್ಯನ ತುಟಿಗಳ ಮೇಲೆ ನಗೆಯಲರೊಂದು ಮೂಡಿತು. "ಮಂದಿಯ ಎಂಜಲು ಗ್ಲಾಸುಗಳನ್ನು ತೊಳೆಯುವದರ ಬದಲು ಅವಲು ಮಿದಿಯುವುದು ಮೇಲು. ಹೇಗೂ ದಿನಕ್ಕೆ ಹನ್ನೆರಡಾಣೆ, ಒಂದು ರೂಪಾಯಿ ಸಂಪಾದನೆಯಿದೆ. ಇತರ ಕೆಲಸಗಳಿಗೂ ಧಾರಾಳ ಬಿಡುವು ದೊರಕುವದು."

"ಇತರ ಕೆಲಸಗಳೇನು ಮಾದಯ್ಯ?" ಸಿದ್ದಯ್ಯನು ಪ್ರಶ್ನಿಸಿದ.

"ತುಸ ದಿನಗಳಲ್ಲಿಯೇ ಅದೇನೆಂಬದು ನಿನಗೆ ತಿಳಿಯುವದು. ನಮ್ಮ ಊರ ಬೇಸಾಯಗಾರರೆಲ್ಲ ಒಂದುಗೂಡಬೇಕು. ತಮ್ಮದೇ ಆದ ಒಂದು ಸಂಸ್ಥೆಯನ್ನು ಕಟ್ಟಬೇಕು. ನಾವೆಲ್ಲರೂ ಒಂದಾಗಿ ನಮ್ಮ ಹಕ್ಕು ಬಾಧ್ಯತೆಗಳ ಸಲುವಾಗಿ ಕಾಳಗವೆಸಗಬೇಕು."

"ನೀನು ಜೇಲಿಗೆ ಹೋಗಿ ಕಾಂಗ್ರೆಸಿಗರಿಂದ ಏನೋ ಹೊಸ ಸಂಗತಿಗಳನ್ನು ಕಲಿತುಕೊಂಡು ಬಂದ ಹಾಗಿದೆ." ಸಿದ್ದಯ್ಯ ನುಡಿದ. "ಆದರೆ ನೀನು ಹೇಳುವದೊಂದೂ ನನಗೆ ತಿಳಿಯುವದೇ ಇಲ್ಲ. ರೈತರು ತಮ್ಮ ಸಂಘವೊಂದನ್ನು ಕಟ್ಟಿದರೆ ದೊರಕುವ ಲಾಭವೇನು? ನಮ್ಮ ಹಕ್ಕುಗಳೆಂದೆಯಲ್ಲ—ಅವು ಯಾವವು? ಯಾವ ಕಾಳಗ?"

ಬೇಸಾಯಗಾರರ ಸಂಘಟನೆಯ ಮಹತ್ವವನ್ನು ಸಿದ್ದಯ್ಯನಿಗೆ ತಿಳಿಸಲು ಮಾದಯ್ಯ ಒಂದು ಪುಟ್ಟ ಉಪನ್ಯಾಸವನ್ನೇ ಆರಂಭಿಸಬೇಕಾಯಿತು. ನಾಡಿನಲ್ಲಿ ಬೇಸಾಯಗಾರನ ನೆಲೆ—ಆತನು ಹೇಗೆ ಜನಾಂಗದ ಬೆನ್ನೆಲುಬು ಆಗಿರುವನು;—ಆತನ ಪರಾಧೀನತೆ,—ಸರಕಾರವು ಆತನನ್ನು ದುರ್ಲಕ್ಷಿಸಿರುವದು, —ಜಮೀನ್ದಾರರಿಂದ ರೈತರು ಅನುಭವಿಸಬೇಕಾಗಿ ಬರುವ ಕೋಟಲೆಗಳು ಇತ್ಯಾದಿ ಹಲವು ವಿಚಾರಗಳನ್ನೆತ್ತಿ ಮಾದಯ್ಯ ಮಾತಾಡಿದ. ಆಡಳಿತವನ್ನು ಕೈಗಳಲ್ಲಿ ತೆಗೆದುಕೊಂಡ ರಷ್ಯದ ಶ್ರಮಜೀವಿಗಳ ಬಾಳುವೆಯನ್ನು ಹಲವೆಡೆಯಲ್ಲಿ ಆತ ಉದಾಹರಿಸಿದ.

ಬೇಸಾಯಗಾರರ ಸಂಸ್ಥೆಯ ಅಗತ್ಯತೆಯನ್ನು ಕುರಿತು ಮಾತಾಡಲು ಮಾದಯ್ಯ ಅರ್ಧತಾಸು ಸಮಯವನ್ನು ವಿನಿಯೋಗಿಸಿದ. ಸಿದ್ದಯ್ಯನಿಗೆ ಅರ್ಧಮರ್ಧ ಅರ್ಥವಾಯಿತು. ಬೇಸಾಯಗಾರರೆಂದರೆ, ಜಮೀನ್ದಾರರ, ಹಣ ಲೇವಾದೇವಿಗಾರರ ಮತ್ತು ಸರಕಾರದ ಬೊಕ್ಕಸವನ್ನು ವಿಪುಲಗೊಳಿಸತಕ್ಕ ಯಂತ್ರಗಳಲ್ಲ; ನಾಡಿನ ನರನಾಡಿಗಳಲ್ಲಿ ಜೀವಕಳೆಯನ್ನು ತುಂಬತಕ್ಕ ಸಜೀವ ರಕ್ತ ಕಣಗಳೆಂಬುದು ಅವನಿಗೆ ವೇದ್ಯವಾಯಿತು.

"ಮಾದಯ್ಯ, ನೀನು ದಾರಿಯನ್ನು ತೋರಿಸಿಕೊಡು. ನಾನು ನಿನ್ನ ಹೆಜ್ಜೆಗಳನ್ನು ತುಳಿಯಲು ಸಿದ್ಧನು" ಎಂಬ ನುಡಿಗಳು ಕೊನೆಗೆ ಸಿದ್ದಯ್ಯನ ಕೊರಳಿಂದ ಹೊರಟವು.

೫

ಈಗ ಹಳ್ಳಿಯಲ್ಲಿ ಬೇಸಾಯಗಾರರ ಸಂಸ್ಥೆಯೊಂದು ಅವರ ಹಕ್ಕುಬಾಧ್ಯತೆಗಳನ್ನು ಸಂರಕ್ಷಿಸುವ ಉದ್ದೇಶದಿಂದ ಉದಿಸಿದೆ. ಆ ಸಂಸ್ಥೆಯ ಕಾರ್ಯದರ್ಶಿಯು ಮಾದಯ್ಯ. ಅವನ ಅವಿಶ್ರಾಂತ ಪರಿಶ್ರಮಗಳ ಫಲವಾಗಿ ಆ ಸಂಸ್ಥೆಯು ಮೂಡಿತೆಂದು ಹೇಳಿದರೆ ತಪ್ಪಾಗದು. ಮಧ್ಯಾಹ್ನಾಂತರ ಮಾದಯ್ಯ ಪ್ರತಿಯೊಂದು ಮನೆಗೂ ತೆರಳುತಿದ್ದ. ಅವರ ಸುಖದುಃಖಗಳು ಬಾಳುವೆಯಲ್ಲಿ ಅವರಿಗೆ ಒದಗುತಿದ್ದ ತಡೆತೊಡರುಗಳು ಮೊದಲಾದ ವಿಚಾರಗಳನ್ನು ರೈತರೊಡನೆ ಪ್ರಸ್ತಾಪಿಸುತಿದ್ದ; ಬೇಸಾಯಗಾರರ ಸಂಕಟಗಳಲ್ಲಿ ತನ್ನ ಅನುತಾಪವನ್ನು ಸೂಚಿಸುತಿದ್ದ. ಆನಂತರ ಬೇಸಾಯಗಾರನ ಸಂಕಟಗಳು ಅವುಗಳ ಪರಿಹಾರ,—ಮೊದಲಾದ ಮಾತುಗಳನ್ನು ಎತ್ತುತಿದ್ದ. ಆತ ರೈತರ

ಸ್ನೇಹಾದರಗಳನ್ನು ಗಳಿಸಿದುದರಿಂದ, ಅವನ ನುಡಿಗಳಿಗೆ ಕಿವಿಗೊಡುತಿದ್ದರು; ಆತನ ತುಟಿಗಳಿಂದ ಹೊರಟ ಸಲಹೆ ಸೂಚನೆಗಳನ್ನು ಒಪ್ಪಿಕೊಳ್ಳುತಿದ್ದರು.

ಹೀಗೆ ಊರ ಬೇಸಾಯಗಾರರ ಚಿತ್ತಗಳಲ್ಲಿ ಒಂದು ಪರಿವರ್ತನೆಯನ್ನು ಉಂಟುಮಾಡಬೇಕಾದರೆ ಹತ್ತೆಂಟು ತಿಂಗಳುಗಳು ಬೇಕಾದವು. ಪ್ರತಿ-ಯೊಬ್ಬನ ಸಂಗಡವೂ ಮಾತಾಡಿ ಅವನ ಬುದ್ಧಿಯನ್ನು ಕೊನರಿಸಬೇಕಾಗಿ ಬಂತು. ಆದರೆ ಮಾದಯ್ಯ ಈ ದುಡಿಮೆಯಲ್ಲಿ ಅಲಸಿಕೆಯನ್ನು ತೋರಿಸಲಿಲ್ಲ. ನೆಲದಡಿಯಿಂದಲೇ ದೇಗುಲದ ತಳಹದಿಯನ್ನು ನಿರ್ಮಿಸಿಕೊಂಡು ಬರುವ ರೂವಾರಿಯ ಎಸಕವನ್ನು ಹೋಲುತಿದ್ದವು ಅವನ ಕೈಮೆಗಳು. ಅಲಸದೆ ಹೂವಿನಿಂದ ಹೂವಿಗೆ ಹಾರಿ ಮಕರಂದವನ್ನು ಸಂಗ್ರಹಿಸುವ ಜೇನುನೊಣ ದಂತೆ ಆತ ದುಡಿಯುತಿದ್ದ.

ಅವನ ನುಡಿಗಳು ಅಜ್ಞಾತೆಯ ಇರುಳಿನಲ್ಲಿ ಮುಂಕು ಕವಿದು ಬಿದ್ದಿದ್ದ ಹಳ್ಳಿಗರ ಕಣ್ಣುಗಳನ್ನು ತೆರೆಯಿಸಿದುವು. ಮಾದಯ್ಯನ ಸಲಹೆಯಂತೆ ಹಳ್ಳಿಗರು ತಮ್ಮದೇ ಆದ ಒಂದು ಸಂಸ್ಥೆಯನ್ನು ಕಟ್ಟಿದರು. ಈ ಸಂಸ್ಥೆಯ ಉದಯದೊಡನೆ ಜನತೆಯ ಹೃದಯಗಳಲ್ಲಿ ಹುದುಗಿದ್ದ ಚೇತನವು ಒಂದು ನೂತನ ಹಾದಿಯನ್ನು ಹಿಡಿಯಿತು. ಊರ ಮುಂದಿನ ಅಂಗಣವೇ ಹಳ್ಳಿಗರ ಸಭಾಮಂಟಪವಾಯಿತು. ವಾರಕ್ಕೆ ಒಂದೆರಡು ಬಾರಿ ರೈತರು ಅಲ್ಲಿ ನೆರೆಯು-ತಿದ್ದರು. ಮಾದಯ್ಯ ತಾನು ತರಿಸುತಿದ್ದ ಪತ್ರಿಕೆಗಳನ್ನು ಓದಿ ಜನತೆಗೆ ವಿವರಿಸುತಿದ್ದ; ಜನಜೀವನಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ಎತ್ತಿ ಮಾತಾಡುತಿದ್ದ; ಹಲವು ಸಲ ರಷ್ಯದ ರಾಜ್ಯಕ್ರಾಂತಿಯ ಚರಿತ್ರೆಯನ್ನು ವಿವರಿಸುತಿದ್ದ. ಹೊಸ ರಷ್ಯವು ಸಾಧಿಸಿದ ಅಭ್ಯುನ್ನತಿಯ ಚಿತ್ರಗಳನ್ನು ಜನರ ಕಣ್ಣಮುಂದ ಇಡುತಿದ್ದ.

ಇದು ವರೆಗೆ ಜನತೆಯಲ್ಲಿ ಹೆಪ್ಪುಕಟ್ಟಿದ್ದ ಚೇತನವು ನಿದಾನವಾಗಿ ಕರಗತೊಡಗಿತು. ತಮ್ಮ ಕುಟುಂಬ,—ತಮ್ಮ ಹಳ್ಳಿ ಇವುಗಳಾಚೆ, —ಹಳ್ಳಿಗರ ದೃಷ್ಟಿಯು ಹರಿಯಿತು. ಸ್ವಾತಂತ್ರ್ಯಕ್ಕಾಗಿ, ಬದುಕಿ ಬಾಳಲೋಸುಗ, ವಿಶಾಲ ಭಾರತದಲ್ಲಿ ನಿರಂತರವೆಸುಗುತಿಹ ಭೀಷಣ ಹೋರಾಟದ ಹಲವು ಚಿತ್ರಗಳನ್ನು ಅವರ ಕಣ್ಣುಗಳು ನೋಡಿದುವು. ತಾವು ಬೇರೆ—ಭಾರತವು ಬೇರೆಯಲ್ಲ. ಭಾರತದ ಸುಖಸಂತಸಗಳಲ್ಲಿ ಅವರ ಹಿತವು ಅಡಗಿದೆ. ಭಾರತವು ಉಳಿದರೆ

ತಾವು ಬಾಳುವೆವು ಎಂಬ ವಾಸ್ತವಾಂಶವನ್ನು ಅವರು ಅರಿತರು. ದಿಳ್ಳಿಯಲ್ಲಿ ಜರಗಿದ ಒಂದು ಘಟ್ಟ ಕೆಲಸವು, ದೂರದ ಹಳ್ಳಿಯ ಜೀವವನ್ನು ಸ್ಪರ್ಶಿಸು-ವದು; ದಿಳ್ಳಿಯು ಹಳ್ಳಿಯನ್ನಾಳುವದರ ಬದಲು, ಹಳ್ಳಿ ದಿಳ್ಳಿಯನ್ನಾಳಬೇಕು ಈ ತರದ ಹೊಂಗನಸುಗಳು ಜನತೆಯ ಚಿತ್ತಗಳಲ್ಲಿ ಮೂಡತೊಡಗಿದವು.

ಸ್ವಾತಂತ್ರ್ಯದ ಹೆದ್ದಾರಿಯಲ್ಲಿ ಅಡಿಗಳನ್ನು ಇರಿಸುತಿದ್ದ ಹಳ್ಳಿಗರಿಗೆ ಮಾದಯ್ಯನೇ ಕೈದೀವಿಗೆ; ಮುಂದಿನ ಹಾದಿಯನ್ನು ತೋರಿಸಲಿಹ ಹೆಜ್ಜೊ-ಡರು; ದೂರದಲ್ಲಿಹ ಮುಂದಾಳುಗಳನ್ನೂ ಹಳ್ಳಿಗನನ್ನೂ ಒಂದುಗೂಡಿಸತಕ್ಕ ಸೇತುವೆ!

× × × ×

ಹಳ್ಳಿಗರ ನಡುವೆ ಪ್ರಚಾರವನ್ನು ಕೈಗೊಂಡು,—ಅವರ ಬೆಂಬಲವನ್ನು ಪಡೆಯಲೋಸುಗ ದೂರದ ನಗರದಿಂದ ಮುಂದಾಳುಗಳೊಬ್ಬರು ಮಾದಯ್ಯನ ಹಳ್ಳಿಗೆ ಬಂದರು. ಹಳ್ಳಿಗಳಲ್ಲಿ ಕೃಷಿಕರ ಸಂಘಗಳನ್ನು ಸ್ಥಾಪಿಸುವುದೂ ಅವರ ಉದ್ದೇಶಗಳಲ್ಲಿ ಒಂದು. ಅವರಿಗೆ ಆದರಾತಿಥ್ಯವನ್ನು ಸಲ್ಲಿಸುವ ಭಾಗ್ಯವು ದೊರಕಿತು.

ಮಾದಯ್ಯನ ಬದುಕನ್ನು ನೋಡಿ ಮುಂದಾಳುಗಳಿಗೆ ಸೋಜಿಗ ವೆನಿಸಿತು. ಪಟ್ಟಣದಲ್ಲಿ ಹಲವುಸಲ ಅವರು ಮಾದಯ್ಯನ ಹೆಸರನ್ನು ಕೇಳಿದ್ದರು. ಹಳ್ಳಿಯಲ್ಲಿ ಸದ್ದಿಲ್ಲದೆ ದುಡಿವ ಕೆಲಸಗಾರನಾತನೆಂದು ಜತೆಯ ಕಾಂಗ್ರೆಸಿಗರು ಅವರಿಗೆ ಹೇಳಿದ್ದರು. ಮಾದಯ್ಯನೆಂದರೆ ಅನುಕೂಲಸ್ಥ ನಾದ ಒಬ್ಬ ಬೇಸಾಯಗಾರನೆಂದು ಮುಂದಾಳುಗಳ ಕಲ್ಪನೆಯಾಗಿದ್ದಿತು. ಆದರೆ ಹಳ್ಳಿಗೆ ಬಂದು ನೋಡಿದಾಗ,—ಮಾದಯ್ಯ ಅನುಕೂಲವಿರುವ ಬೇಸಾ ಯಗಾರನಲ್ಲ; ಹೊಟ್ಟೆ ಹೊರೆಯಲು ಅವಲು ಮಿದಿದು ದಿನಗಳನ್ನು ದೂಡುತಿಹ ಒಬ್ಬ ಶ್ರಮಜೀವಿ! ಮಾದಯ್ಯನ ಪುಸ್ತಕ ಸಂಗ್ರಹವನ್ನು ನೋಡಿ ಮುಂದಾಳು ಗಳಿಗೆ ಇನ್ನಷ್ಟು ಸೋಜಿಗವೆನಿಸಿತು. ಈ ಬಡವನಲ್ಲಿ ರಾಜಕಾರಣ,—ಅರ್ಥ ಶಾಸ್ತ್ರ, ಸಮಾಜ ಶಾಸ್ತ್ರ,—ಫ್ರಾನ್ಸಿನ ರಾಜ್ಯಕ್ರಾಂತಿ, ರಶ್ಯದ ರಾಜ್ಯಕ್ರಾಂತಿ, ಮೊದಲಾದ ವಿಚಾರಗಳಿಗೆ ಸಂಬಂಧಿಸಿದ ಅತ್ಯುತ್ತಮ ಪುಸ್ತಕಗಳಿದ್ದುವು. ಆ ಪುಸ್ತಕ ಸಂಗ್ರಹವೇ, ಮಾದಯ್ಯನ ವಿಚಾರ ಪರಿಪಾಕ; ಅವನ ಮನಸ್ಸಿನ ಮಟ್ಟ, ಮೊದಲಾದವುಗಳನ್ನು ಮುಂದಾಳುಗಳಿಗೆ ಅರುಹಿತು. ತೆಳ್ಳಗಿನ,

ಬಡಕಲು ಶರೀರದ ಶ್ರಮಜೀವಿಯ ಎದೆಯ ಅಂತರಾಳದಲ್ಲಿ ವಿಚಾರದ ಅಮೂಲ್ಯ ಖನಿಯೇ ಅಡಕವಾಗಿದೆಯೆಂದು ಅವರು ಅರಿತುಕೊಂಡರು.

ಹಳ್ಳಿಯ ಜನರ ಜೀವನವು ಸಹ ಮುಂದಾಳುಗಳನ್ನು ಅಚ್ಚರಿಗೆ ಈಡುಮಾಡಿತು. ಇತರ ಕಡೆಗಳಲ್ಲಿಯಂತೆ ಅಲ್ಲಿನ ಜನ ಕುರಿಮಂದೆಯಾಗಿರಲಿಲ್ಲ. ತಮ್ಮ ಉಪನ್ಯಾಸವನ್ನು ಒಂದು ಕಿವಿಯಿಂದ ಕೇಳಿ, ಇನ್ನೊಂದು ಕಿವಿಯಿಂದ ಬಿಡತಕ್ಕವರಲ್ಲ. ಅವರು ಮುಂದಾಳುಗಳ ಭಾಷಣವನ್ನು ಸಾವಧಾನದಿಂದ ಕೇಳಿದರು. ಉಪನ್ಯಾಸವು ಮುಗಿದ ಮೇಲೆ ಮುಂದಾಳುಗಳು, ಜನರ ಪ್ರಶ್ನೆಗಳ ಸರಳಂಬುಗಳಿಗೆ ಎದೆಯನ್ನೊಡ್ಡಬೇಕಾಯಿತು. ಈ ಪ್ರಶ್ನೆಗಳ ಮಾಲಿಕೆಯು ಜನರ ವಿಚಾರ ಪರಿಪಕ್ವತೆಯ ನೆಲೆಯನ್ನು ಮುಂದಾಳುಗಳಿಗೆ ಅರುಹಿತು. ಜನಾಂಗದಲ್ಲಿ ರೈತನ ಸ್ಥಾನಮಾನಗಳಾವುವು, ಸ್ವಾತಂತ್ರ್ಯದ ಕಾಳಗದಲ್ಲಿ ರೈತನ ಕೈವಾಡ ಆವ ಪರಿಯದು,–ಮುಂತಾದ ಸಮಸ್ಯೆಗಳ ಮಾಹಿತಿಯು ಆ ಊರ ಹಳ್ಳಿಗನಿಗಿದೆಯೆಂದು ಮುಂದಾಳುಗಳು ತಿಳಿದುಕೊಂಡರು.

ಅಂದು ಸಭೆಯನ್ನು ಮುಗಿಸಿಕೊಂಡು ಮನೆಗೆ ಮರುಳುತಿದ್ದಾಗ, ಮುಂದಾಳುಗಳು ಮಾದಯ್ಯನ ಸಂಗಡ ಉಸುರಿದರು. "ನಿಮ್ಮ ಕರೆಗೆ ನಾನು ಒಪ್ಪದಿದ್ದರೆ,–ಒಂದು ಅಮೂಲ್ಯ ಸಂದರ್ಭವನ್ನೇ ಕಳೆದುಕೊಳ್ಳುತಿದ್ದೆ."

"ಏನದು?" ಎಂಬ ಪ್ರಶ್ನೆಯು ಮಾದಯ್ಯನ ಕೊರಳಿಂದ ಹೊರಟಿತು.

"ಹೊಸ ವಿಚಾರಗಳನ್ನು ಹಳ್ಳಿಗರ ಎದೆಗಳಲ್ಲಿ ನೆಡಬೇಕೆಂದು ಆಲೋಚಿಸಿ, ನಾನು ಇಲ್ಲಿಗೆ ಬಂದೆ." ಮುಂದಾಳುಗಳು ನುಡಿದರು, "ಆದರೆ ನಾನು ಜನತೆಗೆ ಕಲಿಸುವುದಲ್ಲ; ಜನತೆಯಿಂದ ನಾನೀಗ ಹೊಸ ಪಾಠಗಳನ್ನು ಕಲಿಯಬೇಕಾಗಿದೆ."

"ಅದೇಕೆ ಹಾಗೆ ಹೇಳುವಿರಿ? ನಿಮ್ಮಂತಹ ಅರಿವುಳ್ಳವರು ನಮ್ಮಂತಹ ಹಳ್ಳಿಗಾಡಿನವರಿಗೆ ಹಾದಿಯನ್ನು ತೋರಿಸಬೇಕಾಗಿದೆ."

"ಇಲ್ಲ ಮಾದಯ್ಯ, ಈ ತನಕ ನಾನು ಓದಿದವನೆಂಬ ಹೆಮ್ಮೆಯಿಂದ ಇದ್ದೆ. ಆದರೆ ನಿಮ್ಮ ಹಳ್ಳಿಯು ನನ್ನ ಕಣ್ಣುಗಳನ್ನು ತೆರೆಯಿಸಿತು.

ಮುಂದಾಳು ಎಂದು ಹೆಸರು ಹೊತ್ತ ನಾನು ಈ ತನಕ ಮಾಡಿದುದೇನು? ಮಾತಿನ ಮಲ್ಲನಾಗಿ ಗಾಳಿಯನ್ನು ಗುದ್ದುತ್ತಾ ಕಾಲ ಕಳೆಯುತಿದ್ದೇನೆ. ನೀವು ಗೈದ ಕೆಲಸಗಳಲ್ಲಿ ಕಾಲು ಪಾಲು ನಾನು ನೆರವೇರಿಸಿರುವೆನೇ? ಇಡೀ ಹಳ್ಳಿಯನ್ನೇ ನೀವು ಜಾಗ್ರತಗೊಳಿಸಿದ್ದೀರಿ."

"ಹೇಳಿಕೊಡುವವರು ಕೆಲರು; ಅದನ್ನು ಕಾರ್ಯವಾಗಿ ರೂಪಾಂತರ ಗೊಳಿಸುವವರು ಇತರರು. ನಿಮ್ಮಂತಹ ಮುಂದಾಳುಗಳು ದಾರಿಯನ್ನು ತೋರಿಸದಿದ್ದರೆ ನಮ್ಮ ಹಳ್ಳಿಯಲ್ಲಿ ಇನಿತೊಂದು ಪ್ರಗತಿಯಾಗುತಿದ್ದಿತೇ?" ಮಾದಯ್ಯ ಮಾರ್ನುಡಿದ. "ನೀವು ಅರಿವುಳ್ಳವರು. ರಾಜಕಾರಣ, ಅರ್ಥಶಾಸ್ತ್ರ ಮೊದಲಾದ ವಿಷಯಗಳನ್ನು ಅರಗಿಸಿಕೊಂಡವರು. ನೀವು ಹಾಕಿಕೊಟ್ಟ ಹಾದಿಯನ್ನೇ ನಾವು ಅನುಯಾಯಿಗಳು ತುಳಿಯುತಿದ್ದೇವೆ."

"ನಿಮ್ಮ ಸೌಜನ್ಯವು ಈ ಪರಿ ನುಡಿಯಿಸುತಿದೆ ಮಾದಯ್ಯ," ಮುಂದಾಳುಗಳ ತುಟಿಗಳಿಂದ ನುಡಿಯಲರುಗಳು ಉದುರಿದುವು. "ಆದರೆ ದುಡಿಮೆಯಲ್ಲಿ ನೀವು ನನಗಿಂತ ಹಿರಿಯರು. ನಿಮ್ಮ ತ್ಯಾಗ,–ಸಹನೆ,– ಗೈಮೆಗಳನ್ನು ನೋಡಿ ನಾನಿಂದು, ಹೊಸ ಪಾಠಗಳನ್ನು ಕಲಿಯಬೇಕಾಗಿದೆ."

× × × ×

ಮುಂದಾಳುಗಳೂ ಮಾದಯ್ಯನೂ ರೈತಾವಳಿಯನ್ನು ಸಂಘಟಿಸಲು ಸುತ್ತುಮುತ್ತಲಿನ ಹಳ್ಳಿಗಳಿಗೆ ಹೋಗಿ ಮೂರು ನಾಲ್ಕು ದಿನಗಳಾಗಿದ್ದುವು. ಮನೆವಾಳ್ತೆಯೆಲ್ಲ ಮಂಜಮ್ಮನ ಹೆಗಲಮೇಲೆ ಬಿದ್ದಿತು. ಈ ನಾಲ್ಕು ದಿನ ಗಳಲ್ಲಿ ಮಂಜಮ್ಮ ಒಂದು ಪಲ್ಲ ಅವಲು ಮಿದಿದಿದ್ದಳು, ಕೇರಿ ಹಸನು ಮಾಡಿದ್ದಳು. ಕಾಂಗ್ರೆಸು ಕೆಲಸಕ್ಕೋಸುಗ ಬೇರೆ ಹಳ್ಳಿಗಳಿಗೆ ತೆರಳಿದ ಮಾದಯ್ಯ ಮರಳಲು ಇನ್ನೂ ಎರಡು ದಿನಗಳಿವೆ. ಈ ಅವಧಿಯಲ್ಲಿ ಅವಲಕ್ಕಿಯನ್ನು ತೆಗೆದುಕೊಂಡು ಹೋಗಿ ಮಾರಿದರಾಯಿತು ಎಂದು ಆಲೋಚಿಸಿ, ಆಕೆ ಮನೆಯನ್ನು ಸಾರಿಸುವ ಕೆಲಸಕ್ಕೆ ಕೈ ಹಚ್ಚಿದಳು.

ಆದರೆ ಹಳ್ಳಿಗಳಿಗೆ ಹೋಗಿದ್ದ ಮುಂದಾಳುಗಳೂ, ಗಂಡನೂ ಅಂದು ಸಂಜೆಗೇ ಮನೆಗೆ ಹಿಂದಿರುಗಿದರು. ಮಂಜಮ್ಮ ಚಹಾವನ್ನು ತಯಾರಿಸಿ ತಂದಿತ್ತಳು. ಅವರು ಈ ಚಹಾಪಾನದಿಂದ ತಮ್ಮ ನೀರಡಿಕೆಯನ್ನು

ಇಲ್ಲವಾಗಿಸಿದರು. ಅನಂತರ ಮಾತು ಕತೆಗಳ ಸಲುವಾಗಿ ಅವರು ಮಾದಯ್ಯನ ಓದು ಬರಹಗಳ ಕೋಣೆಗೆ ತೆರಳಿದರು.

ಮಂಜಮ್ಮ ಅಡಿಗೆಯ ಕೆಲಸಕ್ಕೆ ಕೈಹಚ್ಚಿದಳು. ಅಕ್ಕಿಡಬ್ಬಕ್ಕೆ ಕೈ ಹಾಕಿದಾಗ,—ಅಲ್ಲಿ ಅರ್ಧ ಸೇರು ಅಕ್ಕಿಗಿಂತ ಹೆಚ್ಚು ಇರಲಿಲ್ಲ. ಅಡಿಗೆಗೆ ಅಕ್ಕಿ ಇಲ್ಲದುದನ್ನು ಕಂಡು ಆಕೆಗೆ ಏನು ಮಾಡಬೇಕೆಂಬುದು ತಿಳಿಯದಾಯಿತು. ಬೇರೆ ರೈತರ ಮನೆಗೆ ಹೋಗಿ ಅಕ್ಕಿಯನ್ನು ಎರವು ತರಲು ಸಮಯವಿಲ್ಲ. ಆದುದರಿಂದ ಮನೆಯಲ್ಲಿದ್ದ ಅಚ್ಚೇರು ಅಕ್ಕಿಯನ್ನೇ ಬೇಯಿಸಿ ಅನ್ನ ಮಾಡಿದಳು. ಬದನೇಕಾಯಿಗಳನ್ನು ಹೆಚ್ಚಿ ಒಂದು ಮೇಲೋಗರವನ್ನು ಮಾಡಿದುದಾಯಿತು.

ಅತಿಥಿಗಳೂ ಮಾದಯ್ಯನೂ ಊಟ ಮಾಡಿದರು. ಮುಂದಾಳುಗಳು ಅಂದು ಮುಂಜಾನೆಯಿಂದ ಸಂಚರಿಸಿದುದರಿಂದ ತುಂಬಾ ಬಳಲಿದ್ದರು. ಆದುದರಿಂದ ಮಾದಯ್ಯ ಅವರಿಗೆ ಹಾಸಿಗೆ ದಿಂಬುಗಳನ್ನು ಅಣಿಗೊಳಿಸಿದ. ಅವರು ಪವಡಿಸಿದರು.

ಮಾದಯ್ಯ ತನ್ನ ಕೋಣೆಯೊಳಗೆ ಪ್ರವೇಶಿಸಿದಾಗ,—ಮುಂಜಮ್ಮ ಅಡಿಗೆ ಕೋಣೆಯನ್ನು ಗುಡಿಸಿ ಸಾರಿಸಿ, ಅಲ್ಲಿಗೆ ಬಂದು ನಿಲುಪಿದ್ದಳು. ಮಡದಿ ಅಷ್ಟು ಬೇಗ ಬಂದುದನ್ನು ಕಂಡು ಮಾದಯ್ಯನಿಗೆ ಸೋಜಿಗವೆನಿಸಿತು. ಆಕೆ ಊಟ ಮಾಡಿರಳು ಎಂದು ಅವನು ಊಹಿಸಿದ. "ಮಂಜೂ, ನೀನು ಊಟ ಮಾಡಲಿಲ್ಲವೇ?" ಎಂದು ಆತ ಮಡದಿಯನ್ನು ಪ್ರಶ್ನಿಸಿದ.

"ಏಕೆ?" ಎಂಬ ಪ್ರಶ್ನೆಯು ಮಂಜಮ್ಮನ ಜೋಗಸೆ ಕಣ್ಣುಗಳಲ್ಲಿ ತೇಲಿತು.

"ನೀನು ಇನಿತು ಬೇಗ ಬಂದುದನ್ನು ಕಂಡು ನನಗೆ ಹಾಗೆ ಅನಿಸುತ್ತದೆ."

"ಇಲ್ಲ." ಎಂದಳು ಮಂಜಮ್ಮ.

"ಏಕೆ? ಮೈ ಚೆನ್ನಾಗಿಲ್ಲವೇ?" ಮಾದಯ್ಯ ಉತ್ತರಿಸಿದ. "ಒಂದು ಪಲ್ಲ ನೆಲ್ಲನ್ನು ಇಡಿದು ಮೈ ಕೈಗಳನ್ನು ನೋಯಿಸಿಕೊಂಡ ಹಾಗಿದೆ."

"ಮೈ ಚೆನ್ನಾಗಿದೆ. ಆದರೆ ಮನೆಯಲ್ಲಿ ಅಕ್ಕಿ ಇರಲಿಲ್ಲ."

"ಅಯ್ಯೋ ? ಅದಕ್ಕೋಸುಗ ಉಪವಾಸವೇ ?"

"ಮನೆಗೆ ಬಂದ ಅತಿಥಿಗಳ ಮತ್ತು ನಿನ್ನ ಹಸಿವೆಯು ತಣಿದರೆ ನನ್ನ ಹಸಿವೆಯೂ ಅಡಗಿದಂತಾಗುವದು."

"ಛೀ, ನೀನು ಉಪವಾಸ ಮಲಗುವದೇ ಅದು ಕೂಡದು." ಮಾದಯ್ಯನ ಕೈಯು ಮಡದಿಯ ಬೆನ್ನ ಮೇಲಾಡಿತು.

"ನನಗೆ ಹಸಿವೆಯಿಲ್ಲ."

"ಕೂಳು ಇಲ್ಲದುದರಿಂದ ಹಸಿವೆಯಿಲ್ಲ ಅಲ್ಲವೇ ?"

ನಗೆಯ ಬೆಳದಿಂಗಳು ಮಂಜಮ್ಮನ ಮೊಗದಲ್ಲಿ ಳಿಯಾಡಿತು.

"ಒಂದಿಷ್ಟು ಅವಲಕ್ಕಿ ತೆಂಗಿನಕಾಯಿಯನ್ನಾದರೂ ತಾ. ಅವನ್ನು ತಿನ್ನು."

ಅಣ್ಣನ ನಿರ್ಬಂಧವನ್ನು ತಡೆಯಲಾಗದೆ ಮಂಜಮ್ಮ ಅವಲಕ್ಕಿ ತೆಂಗಿನಕಾಯಿ ಹೋಳುಗಳನ್ನು ತಂದಳು.

"ನೀವೂ ತೆಗೆದುಕೊಳ್ಳಿ" ಎಂದು ನುಡಿದಳಾಕೆ.

"ನಾನೇನು ಹಸಿದಿರುವೆನೇ ?"

"ಅವಲಕ್ಕಿ ಮೆಲ್ಲಲು ಹಸಿವು ಇದ್ದೇ ತೀರಬೇಕೇ ?" ಎಂಬ ಪ್ರಶ್ನೆಯು ಹೊರಟಿತು ಮಡದಿಯ ಕೊರಳಿಂದ. "ನೀವು ತಿನದಿದ್ದರೆ ನನಗೂ ಅವಲಕ್ಕಿ ಬೇಡ."

ಮಂಜಮ್ಮ ಕಾಯಿ ಚೂರೊಂದನ್ನು ಇನಿಯನ ಬಾಯಿಗೆ ಕೊಟ್ಟಳು. ಒಂದು ಹಿಡಿ ಅವಲಕ್ಕಿಯನ್ನು ಪತಿದೇವನಿಗೆ ನಿವೇದಿಸಿದುದಾಯಿತು. ಮಡದಿಯನ್ನು ಸಂತೋಷಗೊಳಿಸಲೋಸುಗ ಮಾದಯ್ಯನೂ ಎರಡು ಹಿಡಿ ಅವಲಕ್ಕಿಯನ್ನು ಮೆದ್ದ.

( ೬ )

ಮಳೆರಾಯ ನೆಲದವ್ವನ ಮಕ್ಕಳ ಮೇಲೆ ಮುನಿಸು ತಳೆದಿದ್ದ. ಆ ವರುಷ ಹಿಂಗಾರು ಮೋಡಗಳು ಬಾನವನ್ನು ಕವಿಯಲಿಲ್ಲ; ಅವು ಮಳೆ ಹನಿಗಳನ್ನು ಸುರಿಸಿ ನೆಲದಾಯಿಯ ಎದೆಯ ಅಳಲನ್ನು ಆರಿಸದಾದುವು.

ಗದ್ದೆಗಳಲ್ಲಿ ಬೆಳೆದು ನಿಂತಿದ್ದ ಪೈರು ಪಚ್ಚೆಗಳಿಗೆ ನೀರು ಇಲ್ಲವಾಯಿತು. ದಂಟಿನಿಂದ ಹೊರದಾಟುತಿದ್ದ ಕದಿರುಗಳೆಲ್ಲ ಒಣಗಿದುವು. ಮಳೆಯು ಮುನಿಸನ್ನು ತಳೆದುದರಿಂದ ಒಂದು ವರುಷದ ಗೈಮೆಯು ನಿಷ್ಫಲವಾಯಿತೆಂಬ ಅಳಲು ನೆಲದವ್ವನ ಮಕ್ಕಳ ಎದೆಗಳಲ್ಲಿ ಮೂಡಿತು.

ಕೊನೆಗೊಮ್ಮೆ ಮಳೆರಾಯನ ಎದೆಯಲ್ಲಿ ಕನಿಕರವು ಪೊಮ್ಮಿತು. ಕಾರ್ಮುಗಿಲುಗಳು ಬಾಂದಳವನ್ನು ಕವಿದುವು. ಹನಿಗಳ ಅಲರುಗಳನ್ನು ಸುರಿಯಿಸಿದುವು. ಅತಿ ಕರಿದು ಹೋದ ಪೈರುಗಳು ಮುಗಿಲೊಡೆಯನು ತಂದಿತ್ತ ನೀರನ್ನುಂಡು ತಮ್ಮ ತೃಷೆಯನ್ನು ಹಿಂಗಿಸಿದುವು.

ಕಾಲಕ್ಕೆ ಸರಿಯಾಗಿ ಮಳೆ ಬಾರದುದರಿಂದ ಆ ವರುಷದ ಬೆಳಸು ಅರ್ಧದಷ್ಟು ಜಳ್ಳಾಯಿತು. ಪ್ರಯತ್ನಕ್ಕೆ ತಕ್ಕ ಫಲವು ದೊರಕಲಿಲ್ಲ. ಜಮೀನ್ದಾರರ ಗೇಣಿ, ಸರಕಾರದ ತೆರಿಗೆ, ಸಾಲಗಾರರ ಕೋಟಲೆ ಮೊದಲಾದವುಗಳನ್ನು ಬಗೆಹರಿಸುವುದೆಂತು? ಮನೆ ಮುಂದಿಗೆ ಒಂದು ವರುಷದನಕ ಉಣಿಸು ಉಡಿಗೆಗಳನ್ನು ಒದವಿಸುವ ಬಗೆ ಹೇಗೆ ಮೊದಲಾದ ಸಮಸ್ಯೆಗಳು ವಿಕಟಾಕೃತಿಗಳನ್ನು ತಳೆದು ರೈತಾವಳಿಯ ಚಿತ್ತಗಳನ್ನು ಮುಸುಕಿದುವು. ಜಮೀನ್ದಾರರ ಗೇಣಿಯನ್ನು ಸಲ್ಲಿಸಲು ತಮ್ಮ ದನಕರುಗಳನ್ನು ಮಾರುವ ಚಿತ್ರ, ಅರೆಹೊಟ್ಟೆ ಬರಿವೈಗಳಿಂದ ವರುಷವೊಂದನ್ನು ದೂಡಬೇಕಾದ ನೋಟ, ಇವು ಅವರ ಕಣ್ಮನಗಳ ಮುಂದೆ ಸುಳಿದುವು. ಮೊದಲೆ ಬಾಗಿದ್ದ ಅವರ ಬೆನ್ನುಗಳು ಇನ್ನಷ್ಟು ಬಾಗಿದುವು.

ದೈವ ಕೋಪಕ್ಕೆ ಪರಿಹಾರವೇನು? ಇದು ತಮ್ಮ ಹಣೆಬರಹವೆಂದು ರೈತಾವಳಿಯು ಬಾಗುತಿದ್ದಿತು; ಪ್ರಕೃತಿಯು ನೀಡಿದ ವಿಷದ ಬಟ್ಟಲನ್ನು ತನ್ನ ಕೈಗಳಲ್ಲಿ ಎತ್ತಿಕೊಳ್ಳುತಿದ್ದಿತು. ಆದರೆ ಮಾದಯ್ಯನ ಗುಡಿಸಿಲಿಂದ ಹೊರಟ ನಾದವು ಅವರನ್ನು ಎಚ್ಚರಿಸಿತು; ಬಾಗಿದ ಬೆನ್ನುಗಳನ್ನು ನೆಟ್ಟಗೆ ಮಾಡಲು ಅವರನ್ನು ಉತ್ತೇಜನಗೊಳಿಸಿತು. "ಕೇವಲ ಬೇಸಾಯಗಾರರ ಮೇಲೆ ಮಾತ್ರವಲ್ಲ ಪ್ರಕೃತಿ ಮುನಿದುದು; ಈ ವಿಧಿಯ ಆಟದಲ್ಲಿ ಸರಕಾರ, ಜಮೀನ್ದಾರ, ಸಾಲಿಗರು, ಮೊದಲಾದವರೆಲ್ಲ ಪಾಲುಗಾರರು. ಎಲ್ಲ ಹೊರೆಯನ್ನು ರೈತನ ಹೆಗಲ ಮೇಲೆ ಏರಿಸುವುದಲ್ಲ. ರೈತನೊಂದಿಗೆ ಇತರರೂ ಈ ನಷ್ಟವನ್ನು ಹಂಚಿಕೊಳ್ಳಲಿ."

ಈ ನೂತನ ಸಂದೇಶವು ನೆಲದವ್ವನ ಮಕ್ಕಳ ಕಣ್ಣುಗಳನ್ನು ತೆರೆಯಿ-ಸಿತು. ರೈತರು ಆಲೋಚಿಸಲಾರಂಭಿಸಿದರು. "ಗೇಣಿ, ತೆರಿಗೆ, ಬಡ್ಡಿ ಇವುಗಳನ್ನೆಲ್ಲಾ ವರುಷದ ಫಸಲಿನಿಂದ ಸಲಿಸಬೇಕಲ್ಲವೇ? ಮಳೆರಾಯನ ಕೋಪದಿಂದ ಬೆಳಸುಗಳಿಗೆ ಹಾನಿಯಾಗಿರಲು ಮೇಲಿನವರ ಬೊಕ್ಕಸಗಳನ್ನು ನಾವೆಂತು ತುಂಬಿಸುವುದು? ಈ ವರುಷದ ಸಲಿಕೆಯನ್ನು ಅವರು ಬಿಟ್ಟು ಬಿಡಲಿ."

ಮಾದಯ್ಯನಿಗೆ ಬಿಡುವಿಲ್ಲ. ಹಳ್ಳಿಯಿಂದ ಹಳ್ಳಿಗೆ ಮನೆಯಿಂದ ಮನೆಗೆ ಓಡಾಡಿದ. ಹಳ್ಳಿ ಹಳ್ಳಿಗಳಲ್ಲಿ ಬೇಸಾಯಗಾರರ ಸಂಸ್ಥೆಗಳು ಚಟು-ವಟಿಕೆಯಿಂದ ವರ್ತಿಸಿದುವು. ಅಲ್ಲಲ್ಲಿ ಸಭೆಗಳು ಸೇರಿದುವು. ರೈತರು ತಮಗೆ ಕಾಲಕ್ಕೆ ಸರಿಯಾಗಿ ಮಳೆಯಾಗದುದರಿಂದ, ಈ ವರುಷದ ತೆರಿಗೆ ಗೇಣಿಗಳನ್ನು ಬಿಟ್ಟು ಬಿಡಬೇಕೆಂದು ಬೇಡಿಕೊಂಡರು; ಸರಕಾರಕ್ಕೆ ಮತ್ತು ಜಮೀನ್ದಾರರಿಗೆ ಮನವಿಗಳನ್ನು ಬರೆದು ಕಳುಹಿ ತಮಗೆ ಬಂದೊದಗಿದ ಆಪತ್ತುಗಳನ್ನು ವಿಶದಗೊಳಿಸಿದರು.

ಆದರೆ ಮಾದಯ್ಯನ ನುಡಿ ಅಲ್ಲಿಗೆ ನಿಲ್ಲಲಿಲ್ಲ. ಆವನು ರೈತರಿಗೆ ಹೇಳಿದ. "ಆಳುವವರದು ಮತ್ತು ಜಮೀನ್ದಾರರದು ತುಂಬಿದ ಒಡಲು ಗಳು. ನಮ್ಮ ಕೂಗು ಗೊರಕೆ ಹೊಡೆಯುತಿಹ ಅವರನ್ನು ನಿದ್ದೆಯಿಂದ ಎಚ್ಚರಿಸದು. ಅವರನ್ನು ನಿದ್ದೆಯಿಂದ ಎಚ್ಚರಿಸಬೇಕಾದರೆ ಕಿವಿಗಳನ್ನು ಗಡಚಿಕ್ಕುವ ಸಿಡಿಮದ್ದಿನ ಪಟಾಕಿಗಳೇ ಬೇಕು. ನಮ್ಮ ಆಳಲು ಅಶಕ್ತತೆ ಯನ್ನು ಅರುಹತ್ತಿವೆ. ಆಗ ಮೇಲಿನವರು ನಮ್ಮನ್ನು ಇನ್ನಷ್ಟು ಬಲವಾಗಿ ತುಳಿಯುತಾರೆ. ನಾವು ಎದ್ದು ನಿಲ್ಲಬೇಕು."

ಹಲವು ವಾರಗಳಲ್ಲಿಯೇ ಮಾದಯ್ಯನ ನುಡಿಗಳಲ್ಲಿ ಯಥಾರ್ಥವಿದೆ ಎಂಬುದು ಕಿಸಾನರಿಗೆ ಅನುಭವ ವೇದ್ಯವಾಯಿತು. ತೆರಿಗೆಯನ್ನು ಬಿಟ್ಟು ಕೊಡಲೋಸುಗ ಅಧಿಕಾರಿಗಳಿಗೆ ಕಳುಹಿದ ಮನವಿಗಳು ಕಸದ ಬುಟ್ಟಿಗಳಲ್ಲಿ ಮನೆಮಾಡಿದ್ದುವು. ಡೆಪ್ಯುಟಿ ಕಲೆಕ್ಟರರನ್ನು ಕಾಣಲೋಸುಗ ಹೋದ ನಿಯೋಗಗೋಷ್ಠಿ ಮೊಗ ಬಾಡಿಸಿಕೊಂಡು ಹಿಂದಿರುಗಬೇಕಾಗಿ ಬಂದಿತು. ಗೇಣಿಯಲ್ಲಿ ಒಂದು ಕಾಳು ಧಾನ್ಯವನ್ನು ಸಹ ಬಿಟ್ಟುಕೊಡಲೊಲ್ಲವೆಂದು ಜಮೀನ್ದಾರರು ಮಂಗ ಮುಷ್ಟಿಗಳನ್ನು ಹಿಡಿದರು. ರೈತಾವಳಿಯು ಸಂಘಟಿಸಿ

ದಂತೆಯೇ ಜಮೀನ್ದಾರರಾದರೂ, ರೈತಾವಳಿಯನ್ನು ಎದುರಿಸಲೋಸುಗ ಒಂದುಗೂಡಿದರು.

ಸುತ್ತಲಿನಿಂದಲೂ ಒದೆಗಳು. ತುಂಬಿದ ಒಡಲುಗಳಿಗೆ ಕರುಣೆ ಇಲ್ಲ. ಆಡಳಿತವು ರೈತಾವಳಿಯ ಸಂಕಟಗಳನ್ನು ಕಿವಿಗಳಿಗೆ ಹಾಕಿ ಕೊಳ್ಳದು. ರೈತರು ಹತಾಶರಾದರು. ಮುಂದೇನು ಎಂಬ ಪ್ರಶ್ನೆಯು ರೈತರ ಮುಂದೆ ನಿಂತಿತು. ಆಡಳಿತಕ್ಕೆ, ನೆಲದೊಡೆಯರ ಪಾದಗಳಿಗೆ ತಮ್ಮ ಮಸ್ತಕಗಳನ್ನೊಡ್ಡಿ ಆಧುನಿಕ ಮಹಾಬಲಿಗಳಾಗುವುದೇ?

ಸಲ್ಲದು. ನಮ್ಮ ಹಕ್ಕು ಬಾಧ್ಯತೆಗಳ ಸಲುವಾಗಿ ಕಾಪಾಡಬೇಕು. ರೈತಾವಳಿಯು ಒಂದುಗೂಡಿದರೆ ಆಡಳಿತವು ಮಣಿಯುವುದು; ನೆಲದೊಡೆಯರು ತಲೆಯನ್ನು ತಗ್ಗಿಸುವರು. ನೆಲದವ್ವನ ಮಕ್ಕಳ ಬಲವು ಆಡಳಿತಗಾರರನ್ನೂ, ಜಮೀನ್ದಾರರನ್ನೂ ದೀರ್ಘ ನಿದ್ರೆಯಿಂದ ಎಚ್ಚರಿಸಲಿ!" ಎಂಬ ವೀರನಾದ ಮಾದಯ್ಯನ ಗುಡಿಸಿಲಿನಿಂದ ಹೊರಟು ಹಳ್ಳಿಯಲ್ಲೆಲ್ಲಾ ಪಸರಿಸಿತು.

ರೈತರು ಕಿವಿಗೊಟ್ಟು ಆಲಿಸಿದರು. ಆ ನುಡಿಯಲ್ಲಿ ಹೊಸ ಚೇತನ ಇತ್ತು; ಆತ್ಮಾಭಿಮಾನವಿತ್ತು; ಪೌರುಷವಿತ್ತು. ಆ ನುಡಿಯು ನೆಲದವ್ವನ ಮಕ್ಕಳ ಹೃದಯಗಳಲ್ಲಿ ಪ್ರವೇಶಿಸಿತು; ಅಲ್ಲಿ ಅದು ಮಾರ್ದನಿಗೊಂಡಿತು.

ಮಾದಯ್ಯ ತನ್ನ ನಿತ್ಯದ ಕೆಲಸಗಳನ್ನು ಬದಿಗೊತ್ತಿದ. ಹಗಲು ರಾತ್ರಿಗಳೆನ್ನದೆ ಹಳ್ಳಿ ಹಳ್ಳಿಗಳಲ್ಲಿ ಸಂಚರಿಸಿದ. ಮನೆ ಮನೆಗಳಿಗೆ ಹೋರಾಟದ ಕಿಡಿಗಳನ್ನು ಒಯ್ದುದಾಯಿತು. "ತೆರಿಗೆ ಗೇಣಿ ನಿರಾಕರಣೆಯೇ ಮೇಲಿನವರನ್ನು ಹಾದಿಗೆ ತರಲಿಹ ಉತ್ತಮ ಉಪಾಯ"ವೆಂದು ಆತ ಉಸುರಿದ. ಅಂಜಿಕೆ ದಿಗಿಲುಗಳಿದ್ದವರಿಗೆ ನಾಲ್ಕು ವರುಷಗಳ ಹಿಂದೆ ಯಶಸ್ವಿಯಾದ ಬಾರ್ಡೋಲಿ ಸತ್ಯಾಗ್ರಹದ ಕತೆಯನ್ನು ಉದಾಹರಿಸಿದ. ಅದು ಯಶಸ್ವಿಯಾದಂತೆಯೇ, ಹೋರಾಟಕ್ಕೆ ಇಳಿದರೆ ರೈತರು ಗೆಲುವನ್ನು ಪಡೆಯುವುದೆಂದು ಮಾದಯ್ಯ ಭರವಸೆಯನ್ನು ನೀಡಿದ.

ಒಡಕಲು ಒಡಲುಗಳಲ್ಲಿ ಹೊಸ ಕಳೆಯು ಮೂಡಿತು. ಜೀವಗಳಲ್ಲಿ ನವಚೇತನದ ಅಲೆಗಳು ಸಂಚರಿಸಿದುವು. ನೆಲದೊಡೆಯರನ್ನು ಎದುರಿಸಲು ಬತ್ತಿದ ತೋಳುಗಳು ಸ್ಫುರಣಗೊಂಡುವು.

ಹಳ್ಳಿಹಳ್ಳಿಗಳಲ್ಲಿ ಪುನಃ ಕೃಷಿಕರ ಸಭೆಗಳು ನೆರೆದುವು. ಜಮೀನ್ದಾರರಿಗೂ, ಆಡಳಿತಕ್ಕೂ ತಲೆಯನ್ನು ತಗ್ಗಿಸಕೂಡದೆಂದು ಕಿಸಾನರು ತೀರ್ಮಾನಿಸಿದರು. ಗುಡಿಸಿಲುಗಳಲ್ಲಿ ಕರನಿರಾಕರಣೆಯ ದುಂದುಭಿ ಮೊಳಗಿತು.

× × × ×

ಜಮೀನದಾರ ರಂಗಯ್ಯಗೌಡರಿಂದ ಮಾದಯ್ಯನಿಗೆ ಕರೆ ಬಂದಿತು. ಗೇಣಿಯ ವಿಚಾರದಲ್ಲಿ ರೈತರೊಡನೆ ಸಂಧಾನಕ್ಕೆ ಬರಲು ಜಮೀನದಾರರು ಹವಣಿಸುತ್ತಿರಬಹುದೆಂದು ಮಾದಯ್ಯ ಎಣಿಸಿದ. ಆದುದರಿಂದಲೇ ಅವರ ವಸತಿಗೆ ಅವನು ತೆರಳಿದ. ಮಾದಯ್ಯ ರಂಗಯ್ಯಗೌಡರ ವಸತಿಗೆ ತಲುಪಿದಾಗ, ಜಮೀನ್ದಾರರು ಹಜಾರದಲ್ಲಿದ್ದರು. ಅವರು ಕುಳಿತುಕೊಳ್ಳಲು ಮಾದಯ್ಯನಿಗೆ ಒಂದು ಕುರ್ಚಿಯನ್ನು ತೋರಿಸಿದರು. ಮಾದಯ್ಯ ಕುರ್ಚಿಯ ಮೇಲೆ ಕುಳಿತುಕೊಂಡುದಾಯಿತು.

" ನೋಡು ಮಾದಯ್ಯ, ನಿನ್ನಲ್ಲಿ ತುಸ ಮಾತಾಡಲಿತ್ತು. " ಜಮೀನ್ದಾರರು ಮಾತು ಕತೆಗಳಿಗೆ ಮುನ್ನುಡಿ ಹಾಕಿದರು.

" ಬಹು ಸಂತೋಷ. ತಮ್ಮ ಕರೆಯಂತೆ ಅದಕ್ಕೋಸುಗವಾಗಿಯೇ ಬಂದಿದೇನೆ. ಯಾವ ವಿಚಾರವನ್ನು ಬೇಕಾದರೂ ತಾವು ಸಂಕೋಚವಿಲ್ಲದೆ ಮಾತಾಡಬಹುದು. "

" ನೀನು ಈ ವರುಷ ಗೇಣಿಯನ್ನು ಸಲ್ಲಿಸಕೂಡದೆಂದು ರೈತರಿಗೆ ಉಪದೇಶಿಸುತ್ತಿರುವೆಯಂತೆ. "

" ಹಿಂಗಾರು ಮಳೆಯು ಸರಿಯಾಗಿ ಬಾರದುದರಿಂದ ಅರ್ಧಕ್ಕಿಂತ ಹೆಚ್ಚು ಪಾಲು ಪೈರು ಸೀದುಹೋಗಿದೆ. ರೈತರು ತುಂಬಾ ಹಾನಿಗೆ ಒಳಗಾಗಿದ್ದಾರೆ. ಆದುದರಿಂದ ಈ ವರುಷ ಗೇಣಿ ತೆರಿಗೆಗಳನ್ನು ಸಲ್ಲಿಸಲು ಅವರು ಅಸಮರ್ಥರಿರುವರು. ಅವರು ಸಂಕಟಗಳನ್ನು ತಮ್ಮಲ್ಲಿ ಅರಿಕೆ ಮಾಡಿಕೊಂಡರು. ಆದರೆ ತಾವು ಕಣ್ಣು ತೆರೆಯಲಿಲ್ಲ. ಆದುದರಿಂದ ಅವರು ಗೇಣಿ ನಿರಾಕರಣೆಗೆ ಕೈ ಹಚ್ಚಬೇಕಾಯಿತು. "

" ಕಾಲಕ್ಕೆ ಸರಿಯಾಗಿ ಮಳೆ ಬರದಿದ್ದರೆ,—ಅದರಿಂದ ಆದ ಹಾನಿಯನ್ನು ನಾವು ಹೊರಬೇಕೇ? " ಎಂಬ ಪ್ರಶ್ನೆಯು ಜಮೀನ್ದಾರರ ಕೊರಳಿಂದ ಹೊರಟಿತು.

" ಅಲ್ಲ, ರೈತರು ಈ ನಷ್ಟವನ್ನು ಪೂರ್ತಿಯಾಗಿ ಹೊರಬೇಕೇ? ಬೆಳಸು ಇದ್ದರಲ್ಲವೇ ಅವರು ತಮಗೆ ಗೇಣಿಯನ್ನು ತೆರುವುದು. ಅವರು ದನ-ಕರು, ಪಾತ್ರ ಪದಾರ್ಥಗಳನ್ನು ವಿಕ್ರಯಿಸಿ ಗೇಣಿ ಮತ್ತು ತೆರಿಗೆಗಳನ್ನು ಸಲ್ಲಿಸಬೇಕೇ? ತಾವೂ ಹಾನಿಯನ್ನು ಹೊರಲು ಸಿದ್ಧರಾಗಬೇಕು. ಪೂರ್ತಿ ಗೇಣಿಯನ್ನು ಬಿಟ್ಟುಕೊಡಲಾಗದಿದ್ದರೆ, ಅರೆವಾಸಿಯನ್ನಾದರೂ ವಜ ಮಾಡಿ."

" ಒಂದು ಕಾಳು ಗೇಣಿಯನ್ನು ಸಹ ಬಿಟ್ಟುಕೊಡಲು ಸಾಧ್ಯವಿಲ್ಲ. " ಜಮೀನ್ದಾರರ ಕೊರಳಿಂದ ದರ್ಪಸ್ವರವು ಹೊಮ್ಮಿತು.

" ತಾವು ಈ ಪರಿ ಹಟಹಿಡಿಯುವುದಾದರೆ ಸಂಧಾನದ ಹಾದಿಯನ್ನೇ ಮುಚ್ಚಿದಂತಾಗುವುದು. ಗೇಣಿಯನ್ನು ನಿರಾಕರಿಸಲು ರೈತರಿಗೆ ನೀವೇ ನಿಮಂತ್ರಣವನ್ನು ಕೊಟ್ಟಂತಾಗುವುದು. "

" ಮಾದಯ್ಯ, ಗೇಣಿವಿಚಾರ ಮಾತಾಡಲೋಸುಗವಲ್ಲ ನಿನ್ನನ್ನು ಕರೆಯಿಸಿದುದು. ನಿನ್ನ ಸ್ವಂತ ವಿಚಾರದ ಸಲುವಾಗಿಯಾಗಿದೆ ನಿನ್ನನ್ನು ಬರಹೇಳಿದುದು. "

" ನನ್ನ ಸ್ವಂತ ವಿಚಾರಗಳು ತಮ್ಮೊಡನೆ ಚರ್ಚಿಸುವಷ್ಟು ಮಹತ್ವವುಳ್ಳವಲ್ಲ. " ಮಾದಯ್ಯ ಮಾರ್ನುಡಿದ.

" ನೀನು ನಾಡಿಗೋಸುಗ ತುಂಬಾ ದುಡಿದಿರುವೆ. ನಿನ್ನ ತ್ಯಾಗವು ಅಸಾಧಾರಣವಾದುದು. " ಜಮೀನ್ದಾರರ ಕೊರಳಿಂದ ಪ್ರಶಂಸಾವಾಣಿಯು ಹೊರಸೂಸಿತು.

" ಏನೋ ನನ್ನ ಪಾಲಿನ ಅಳಿಲಸೇವೆಯನ್ನು ಸಲ್ಲಿಸಿರುವೆ. " ಮಾದಯ್ಯನ ಎದೆಯಲ್ಲಿ ತುಂಬಿದ್ದ ನಮ್ರತೆಯು ನುಡಿಗಳಾಕೃತಿಯನ್ನು ತಳೆದಿತು.

" ನಿನ್ನ ಈ ಗೇಣಿ ನಿರಾಕರಣೆಯನ್ನು ಮಾತ್ರ ನಾವು ಒಪ್ಪುವುದಿಲ್ಲ. ಆದರೆ ನಮಗೂ ದೇಶಪ್ರೇಮವಿದೆ. ಆದುದರಿಂದ ನಿನ್ನ ಜನಸೇವೆ, ತ್ಯಾಗಗಳ ಬೆಲೆಯನ್ನು ಬಲ್ಲೆವು. ಆದರೆ ನಮ್ಮ ಜನರನ್ನೇ ನಮ್ಮೊಡನೆ ಕಾಳಗ ಎಸಗಲು ಬಿಡುವುದು ಭೂಷಣವಲ್ಲ. ಆದುದರಿಂದ ಒಂದು ಬುದ್ಧಿವಾದವನ್ನು ಹೇಳಲು ನಾನು ಬಯಸುತೇನೆ.

"ಏನದು ?" ಎಂಬ ಪ್ರಶ್ನೆಯು ಮಾದಯ್ಯನ ಕಣ್ಣುಗಳಲ್ಲಿ ತೇಲಿತು.

"ಗೇಣಿ ನಿರಾಕರಣೆಯಿಂದ ನೀನು ಹಿಂದೆಗೆಯುವುದಾದರೆ ನಿನಗೆ ತಕ್ಕ ಪುರಸ್ಕಾರವನ್ನು ನಾವು ಕೊಡುವೆವು."

"ಅದೊಂದು ಮಾತನ್ನು ಮಾತ್ರ ಹೇಳಬೇಡಿ. ಹಾಗೆ ನಾನು ವರ್ತಿಸಿದರೆ ಜನತೆಯನ್ನು ವಂಚಿಸಿದಂತಾಗುವುದು."

ರಂಗಯ್ಯಗೌಡರು ಮಾದಯ್ಯನ ನುಡಿಗಳನ್ನು ಕಿವಿಗಳಿಗೆ ಹಾಕಿಕೊಳ್ಳದೆ ಮನೆಯೊಳಗೆ ತೆರಳಿದರು. ಅವರು ಮರಳಿ ಬರಲು ಐದು ನಿಮಿಷಗಳು ಹಿಡಿದುವು. ಹಿಂದಿರುಗಿ ಬಂದಾಗ ಅವರ ಕೈಯಲ್ಲಿ ನೂರು ರೂಪಾಯಿಗಳ ಐದು ನೋಟುಗಳಿದ್ದುವು. ಅವರು ನೋಟುಗಳನ್ನು ಮಾದಯ್ಯನ ಕಡೆಗೆ ಚಾಚುತ್ತಾ ನುಡಿದರು. "ಇಗೋ ಮಾದಯ್ಯ, ನೀನು ಗೇಣಿ ನಿರಾಕರಣೆಯಿಂದ ಹಿಂದೆಗೆಯುವುದಾದರೆ, ಸುತ್ತಲಿನ ನಾಲ್ಕು ಹಳ್ಳಿಗಳ ಜಮೀನ್ದಾರರಾದ ನಾವು ನಿನಗೆ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತೇವೆ. ಈಗ ಐನೂರು ರೂಪಾಯಿಗಳಿವೆ. ಇನ್ನು ಉಳಿದುದು ಒಂದು ತಿಂಗಳ ಅನಂತರ. ನೀನೇನೂ ಆಲೋಚಿಸಬೇಕಾದುದಿಲ್ಲ. ಈ ಹಣದಿಂದ ನಿನ್ನ ಬದುಕನ್ನು ಉತ್ತಮಗೊಳಿಸಬಹುದು. ಇನ್ನು ಮುಂದೆ ಕಷ್ಟ ಪಡಬೇಕಾದುದಿಲ್ಲ."

ಎರಡು ನಿಮಿಷಗಳ ತನಕ ಮಾದಯ್ಯ ಮೌನವಾಗಿದ್ದ. ಅವನ ಅಂತರಂಗವು ಹೊಯ್ದಾಡಿತು. ಅವನ ಅಂತರಂಗದಲ್ಲಿ ಹಣದಾಸೆ,–ಜನ ಸೇವೆ ಇವೆರಡು ಒಂದು ತುಮುಲಯುದ್ಧವನ್ನು ನಡೆಸಿದುವು ; ಕೊನೆಗೆ ಜನ ಸೇವೆಯೇ ಗೆಲುವನ್ನು ಪಡೆದಿತು. ಅವನ ಕಣ್ಣುಗಳು ಬೆಳಗಿದುವು. ಅವನ ಕೊರಳಿಂದ ದೃಢ ಸ್ವರವು ಹೊಮ್ಮಿತು. "ಇಲ್ಲ ಸ್ವಾಮಿ, ಜನ ಸೇವೆಯಲ್ಲದೆ ಹೆಚ್ಚಿನ ಆಶೆ ಆಕಾಂಕ್ಷೆಗಳೆನಗಿಲ್ಲ. ತಮ್ಮಿಂದ ಹಣವನ್ನು ಲಂಚವಾಗಿ ಪಡೆದು, ನನ್ನನ್ನು ನಂಬಿದ ರೈತಾವಳಿಯನ್ನು ಮೋಸಗೊಳಿಸಲಾರೆ; ತಮ್ಮ ಹಣವನ್ನು ಸ್ವೀಕರಿಸಿ, ನನ್ನ ಕೈಗಳನ್ನು ಕಲಂಕಪಡಿಸಿಕೊಳ್ಳಲಾರೆ."

"ಮಾದಯ್ಯ, ನಿನ್ನ ಹಿತದ ಸಲುವಾಗಿಯೇ, ನಾನು ಈ ನುಡಿಗಳನ್ನು ಎನುತಿರುವುದು. ನನ್ನ ಸಲಹೆಯನ್ನು ನೀನು ನಿರಾಕರಿಸಿದರೆ ಸಂಕಟಗಳಿಗೆ ಒಳಗಾಗಬೇಕಾಗುವುದು."

"ನನ್ನ ಹಿತವೇನೆಂಬುದನ್ನು ನಾನು ಬಲ್ಲೆ" ಉದ್ವೇಗಭರಿತವಾದ ಸ್ವರದಲ್ಲಿ ಮಾದಯ್ಯ ಹೇಳಿದ. "ಹಿಂದೆಯೇ ಹಲವು ನೋವು ಸಂಕಟಗಳ ನಂಜನ್ನು ಉಂಡಿದೇನೆ; ಇನ್ನು ಮುಂದೆಯೂ ಕಷ್ಟಗಳಿಗೆ ಎದೆಯನ್ನೊಡ್ಡಲು ತಯಾರಿದೇನೆ. ಆದರೆ ಜನತೆಗೆ ಮೋಸವನ್ನು ಗೈಯಲು ನನ್ನಿಂದಾಗದು· ಆತ್ಮವಂಚನೆಯನ್ನು ಮಾಡೆಂದು ತಮ್ಮ ಉಪದೇಶವಾದರೆ, ನಾನಿಲ್ಲಿ ಹೆಚ್ಚು ಹೊತ್ತು ನಿಲ್ಲಲಾರೆ."

ರಂಗಯ್ಯಗೌಡರ ಮೊಗವು ಲಜ್ಜೆಯಿಂದ ಕಪ್ಪಡರಿತು. ಅವರ ತುಟಿಗಳಿಂದ ನುಡಿಯು ಹೊರಡಲಿಲ್ಲ. ಮಾದಯ್ಯನ ಪಾದಗಳು ಜಮೀನ್ದಾರರ ವಸತಿಯಿಂದ ಹೊರಗೆ ಹೆಜ್ಜೆಯನ್ನಿರಿಸಿದುವು.

× × × ×

"ಮಂಜೂ, ಇಂದು ನಾನೊಬ್ಬ ಹಣಗಾರನಾಗಬಹುದಿತ್ತು." ಅವ-ಲಕ್ಷ್ಯಿಯು ಉಮ್ಮಿಯನ್ನು ಕೇರುತಿದ್ದ ಮಡದಿಯು ಸಂಗಡ ಮಾದಯ್ಯ ಉಸುರಿದ.

"ಹೇಗೆ?" ಎಂಬ ಪ್ರಶ್ನೆಯು ಮಂಜಮ್ಮನ ಕಣ್ಣುಗಳಲ್ಲಿ ತೇಲಿತು.

"ಜಮೀನ್ದಾರ ರಂಗಯ್ಯಗೌಡರು ಏಕೆ ಬರಹೇಳಿದರು ಗೊತ್ತೇ?"

"ಏಕೆ? ಗೇಣಿಯ ವಿಚಾರ ಮಾತಾಡಲು ಅಲ್ಲವೇ?"

"ಅಲ್ಲ. ನಾನು ಗೇಣಿ ನಿರಾಕರಣೆ ಚಳುವಳಿಯಿಂದ ಹಿಂದೆಗೆಯುವು-ದಾದರೆ, ಒಂದು ಸಾವಿರ ರೂಪಾಯಿಗಳನ್ನು ಕೊಡುವುದಾಗಿ ಹೇಳಿದರು. ಐನೂರು ರೂಪಾಯಿಗಳನ್ನು ನನ್ನ ಕೈಯಲ್ಲಿ ಇರಿಸಲು ಬಂದಿದ್ದರು."

"ನೀವೇನು ಹೇಳಿದಿರಿ?" ಮಂಜಮ್ಮನ ಕೊರಳಿಂದ ಹೊರಟ ಪ್ರಶ್ನೆಯಲ್ಲಿ ಉತ್ಸುಕತೆಯು ಬೆರೆತಿತ್ತು.

"ಅವರ ನುಡಿಗೆ ಒಪ್ಪಬೇಕೆಂದು ಆಲೋಚಿಸಿದೇನೆ. ಒಂದು ಸಾವಿರ ರೂಪಾಯಿಗಳು ದೊರೆತರೆ ನಾವಿಬ್ಬರೂ ಸುಖವಾಗಿ ಸಂಸಾರವನ್ನು ಸಾಗಿಸಬಹುದಲ್ಲ!"

"ಈಗ ನಮ್ಮ ಸುಖದಲ್ಲಿ ಆವ ಕೊರತೆಯಿದೆ? ಜಮೀನ್ದಾರರ ಲಂಚವನ್ನು ತೆಗೆದುಕೊಳ್ಳಲು ಒಪ್ಪಿಬಂದಿರಾ? ಹಾಗೇನಾದರೂ ಆಗಿದ್ದರೆ ಒಲ್ಲೆನೆಂದು ಈಗಲೇ ತಿಳಿಸಿಬನ್ನಿರಿ." ಮಂಜಮ್ಮನ ಅಂತರಂಗದಲ್ಲಿ ಮೂಡಿದ

ವಿವೇಕವಾಣಿಯು ಹೊರಸೂಸಿತು. "ಜನರನ್ನು ವಂಚಿಸುವ ಪಾಪವನ್ನು ಉಡಿಯಲ್ಲಿ ಕಟ್ಟಿಕೊಳ್ಳುವುದು ಬೇಡ. ಅರೆಹೊಟ್ಟೆಯಿಂದ, ಅರೆಬತ್ತಲೆಯಾಗಿ ನಾವು ದಿನಗಳನ್ನು ದೂಡುವಾ. ಆದರೆ ನಂಬಿದವರನ್ನು ಕೈಬಿಡುವುದು ಬೇಡ."

"ಇಂತಹ ಹೊಲಸು ಕೆಲಸಕ್ಕೆ ಎಂದಾದರೂ ಕೈ ಹಾಕುವೆನೇ?" ಮಾದಯ್ಯ ಉಸುರಿದ. "ಹಣದಾಸೆಯಿಂದ ಆತ್ಮವನ್ನು ಮಾರಿಕೊಳ್ಳಲಾರೆನೆಂದು ಹೇಳಿಬಂದೆ."

"ನನ್ನ ಎದೆಯ ಮೇಲಿನ ಹೊರೆಯನ್ನು ಇಳಿಸಿದಂತಾಯಿತು. ಹಣದ ಆಸೆಗೆ ನೀವೆಲ್ಲಿ ಒಳಗಾದಿರೋ ಎಂದು ನಾನು ಭಾವಿಸಿದ್ದೆ." ಮಂಜಮ್ಮನ ಕೊರಳಿಂದ ಹೊರಟ ಹರ್ಷೋದ್ಗಾರವು ಗಾಳಿಯಲ್ಲಿ ಬೆರೆತಿತು.

× × × ×

ಗೇಣಿ ಮತ್ತು ತೆರಿಗೆಗಳನ್ನು ಸಲ್ಲಿಸುವ ದಿನಗಳು ಬಂದುವು. ಆದರೆ ರೈತರಲ್ಲಿ ಬಹುಮಂದಿ ಸಲ್ಲಿಸಲಿಲ್ಲ. ನೂರಕ್ಕೆ ಹತ್ತು ಮಂದಿ ಮಾತ್ರ ಕಚೇರಿಗೆ ಹೋಗಿ ಕಂದಾಯವನ್ನು ಕೊಟ್ಟರು; ಜಮೀನ್ದಾರರಿಗೆ ಗೇಣಿಯನ್ನು ಪಾವತಿ ಮಾಡಿದರು. ಈ ಪರಿ ಪಾವತಿ ಮಾಡಿದವರು ಇತರ ರೈತರ ನಿಂದನೆ ನಿಷ್ಠುರತೆಗಳಿಗೆ ಒಳಗಾಗಬೇಕಾಯಿತು ಕರ ನಿಷೇಧಿಸಿದ ರೈತರು ಈ ಮಂದಿಯನ್ನು ಮೋಸಗಾರರೆಂದು ಕರೆದರು; ಸಮುದಾಯದ ಕೂಡಿಕೆಗಳಲ್ಲಿ ಸೇರಿಸದಾದರು; ಮಂದಿಯು ಕೆರೆ ಭಾವಿಗಳಿಂದ ನೀರು ಕೊಡದಾದರು; ಬಹಿಷ್ಕರಿಸಿದರು.

ಕಿಸಾನರು ತೆರಿಗೆ ಗೇಣಿಗಳನ್ನು ಕೊಡದಿಹುದನ್ನು ಕಂಡು ಆಡಳಿತಗಾರರೂ ಜಮೀನ್ದಾರರೂ ಸುಮ್ಮನಿರಲಿಲ್ಲ ಪಟೇಲರು ಮನೆಮನೆಗಳಿಗೆ ತಿರುಗಲಾರಂಭಿಸಿದರು; ಕಂದಾಯವನ್ನು ಸಲ್ಲಿಸಲು ಜನರಿಗೆ ಉಪದೇಶಿಸಿದರು. ಕರನಿರಾಕರಣೆಯಿಂದ ಅನರ್ಥಗಳನ್ನು ನೂರು ಪಾಲು ಉತ್ಪ್ರೇಕ್ಷಿಸಿ ಭಯಂಕರ ಚಿತ್ರವನ್ನು ಜನರ ಕಣ್ಣುಮುಂದೆ ಇರಿಸಿದರು; ಆಸ್ತಿ ಮನೆ ಮಾರು ದನ-ಕರುಗಳನ್ನೆಲ್ಲಾ ಕಳೆದುಕೊಳ್ಳಬೇಕಾಗುವುದೆಂಬ ಭೀತಿಯನ್ನು ಹುಟ್ಟಿಸಲು ಪ್ರಯತ್ನಿಸಿದರು.

ಆದರೆ ಜನರು ಬಂಡೆಗಲ್ಲಿನಂತೆ ನಿಂತಿದ್ದರು. ಪಟೇಲರ ,ಮತ್ತು ಜಮೀನ್ದಾರರ ಬೆದರಿಕೆಗಳಿಗೆ ಅವರು ಅಳುಕಲಿಲ್ಲ; ಅಂಜಲಿಲ್ಲ. ತಮ್ಮ ಹಕ್ಕು ಬಾಧ್ಯತೆಗಳ ಸಲುವಾಗಿ ಅವರು ಹಿಮಾಲಯದಂತೆ ಸ್ಥಿರವಾಗಿ ನಿಂತಿದ್ದರು.

ತಮ್ಮ ಬೆದರಿಕೆಗಳಿಗೆ ರೈತಾವಳಿಯು ಬಾಗದಿರುವದನ್ನು ಕಂಡು ಜಮೀನ್ದಾರರೂ ಅಧಿಕಾರಿಗಳೂ ಅಕ್ರಮಗಳಿಗೆ ಕೈ ಹಚ್ಚಿದರು; ಅವರು ಕಿಸಾನರ ಗುಡಿಸಿಲುಗಳನ್ನು ಜಪ್ತಿ ಮಾಡತೊಡಗಿದರು. ನೆಲದವ್ವನ ಮಕ್ಕಳು ಒಬ್ಬೊಬ್ಬರಾಗಿ, ದನ-ಕರು, ದವಸಧಾನ್ಯ, ಪಾತ್ರೆ ಪದಾರ್ಥಗಳನ್ನು ಕಳೆದು ಕೊಂಡರು. ಆದರೆ ಹೃದಯಗಳಲ್ಲಿ ಮೂಡಿದ್ದ ಸ್ಥೈರ್ಯವು ಕದಲಲಿಲ್ಲ. ಅವರು ಸರ್ವಸ್ವವನ್ನೂ ತ್ಯಾಗ ಮಾಡಲು ಅಣಿಯಾಗಿದ್ದರು.

೭

ಆಸ್ತಿಪಾಸ್ತಿಗಳನ್ನು ಕಳಕೊಂಡವರಿಗೆ ನೆರಳು ನೆರವುಗಳನ್ನು ಈಯ ಬೇಕಾಗಿಬಂದಿತು. ರೈತರ ಹೋರಾಟದ ಸುದ್ದಿಯು ನಾಡಿನ ಉದ್ದಗಲಕ್ಕೂ ಹರಡಿತು. ದೇಶದ ಮುಂದಾಳುಗಳು ಎಚ್ಚತ್ತರು. ನಾಡಿನ ಬೆನ್ನೆಲಬು ರೈತನು; ಆಡಳಿತದ, ನೆಲದೊಡೆಯರ ತುಳಿತಗಳಿಗೆ ಆತ ಒಳಗಾಗಿದಾನೆ. ಅವನ ಕೂಗು ಸಿಡಿಲಿನಂತೆ ಬಾನನ್ನು ಬಿರಿಯುತಿದೆ. ತಾವು ಕಿವುಡರಾಗಿರುವದು ಸಲ್ಲದು ಎಂದರವರು. ನಾಡಿನ ಉದ್ದಗಲಕ್ಕೂ ಸಭೆಗಳು ಜರುಗಿದುವು. ಪ್ರಜೆಗಳು ಸರಕಾರದ ಕೃತ್ಯಗಳಲ್ಲಿ ತಮ್ಮ ಸಂತಾಪವನ್ನು ಹೊರಗೆಡವಿದರು. ಕಷ್ಟನಷ್ಟಗಳಿಗೆ ಒಳಗಾದ ರೈತರಿಗೆ ನೆರವನ್ನು ನೀಡಲು ಮುಂದಾಳುಗಳು ನಿಧಿಯನ್ನು ಸಂಗ್ರಹಿಸಿದರು. ಬಿದರೂರು ತಾಲೂಕಿನ ರೈತಾವಳಿಗೆ ಹೊರಗಿನ ನೆರವು ಬಂತು.

ಹಳ್ಳಿಗಳಲ್ಲಿ ಕಷ್ಟಕ್ಕೊಳಗಾದ ಕೃಷಿಕರ ಯೋಗಕ್ಷೇಮವನ್ನು ವಿಚಾರಿಸಿ ಕೊಳ್ಳಲೋಸುಗ ಹೊರತೆರಳಿದ್ದ ಮಾದಯ್ಯ ಮನೆಗೆ ಬರುವಾಗ ರಾತ್ರಿ ಹತ್ತು ತಾಸಾಗಿದ್ದಿತು. ದನ-ಕರು, ದವಸಧಾನ್ಯಗಳನ್ನು ಕಳಕೊಂಡ ರೈತರಿಗೆ ವಾರದ ವೆಚ್ಚಕ್ಕಾಗಿ ಧಾನ್ಯವನ್ನು ಹಂಚಿ, ಜತೆಗಾರರಿಗೆ ಧೈರ್ಯ ಹೇಳಿ, ಅವನ ಮೈಮನಗಳು ಬಳಲಿದ್ದುವು. ಆತ ರಾತ್ರಿ ಹೊತ್ತು ಎಡಬಲದೆಡೆಗೆ ದೃಷ್ಟಿಯನ್ನು ಹೊರಳಿಸದೆ, ಹಾದಿಯಲ್ಲಿ ಬರುತಿದ್ದ. ಥಕ್ಕನೆ ದೊಣ್ಣೆಗಳನ್ನು ಹಿಡಿದ ಮೂರು ನಾಲ್ಕು ಮಂದಿ ಅವನ ಮುಂದೆ ಹಾದಿಗೆ ಅಡ್ಡವಾಗಿ ನಿಂತರು. ಅವರು ತಮ್ಮ ದೊಣ್ಣೆಗಳಿಂದ ಮಾದಯ್ಯನನ್ನು ಬಡಿಯತೊಡಗಿದರು. ಅವನು ಬರಿಗೈಯಿಂದ ಅವರ ಹೊಡೆತಗಳನ್ನು ತಡೆಯಲು ಯತ್ನಿಸಿದ "ನಾನು

ನಿಮಗಾರಿಗೂ ಕೆಡುಕನ್ನು ಮಾಡಿಲ್ಲ. ನನ್ನನ್ನು ಏಕೆ ಬಡಿಯುತ್ತಿರುವಿರಿ ?" ಎಂದು ಅವನು ಅವರನ್ನು ಪ್ರಶ್ನಿಸಿದ.

ಆದರೆ ತುಂಟರು ಮಾತುಕೊಡಲಿಲ್ಲ. ಅವರ ಕೈಗಳಲ್ಲಿದ್ದ ದೊಣ್ಣೆಗಳು ಮಾತ್ರ ಮಾದಯ್ಯನ ಮೈಮೇಲೆ ನರ್ತಿಸುತ್ತಿದ್ದುವು.

"ನೀವು ಯಾರೆಂದು ನನಗೆ ತಿಳಿಯಿತು" ಮಾದಯ್ಯ ಹಗೆಗಳ ಮೇಲೆ ತನ್ನ ಕೈಯನ್ನು ಎತ್ತದೆ ಉಸುರಿದ. "ಮನಃಪೂರ್ವಕವಾಗಿ ನೀವು ನನ್ನನ್ನು ಪೀಡಿಸುತಲಿಲ್ಲ. ಜಮೀನ್ದಾರರ ಹಣವು ಈ ಕೆಲಸವನ್ನು ಮಾಡಲು ನಿಮ್ಮನ್ನು ಪ್ರೇರಿಸಿದೆ. ನನ್ನೊಬ್ಬನ ಜೀವವನ್ನು ತೆಗೆದರೆ, ಈ ಉರಿಯು ಅಡಗುವುದೆಂದು ತಿಳಿಯಬೇಡಿ. ನನ್ನ ಮರಣವು ಉರಿವ ಕಿಚ್ಚಿಗೆ ಎಣ್ಣೆಯನ್ನು ಸುರಿದಂತಾಗುವುದು."

ಮಾದಯ್ಯನಿಗೆ ನಿಂತಿರಲಾಗಲಿಲ್ಲ. ಅವನು ಕೆಳಗೆ ಬಿದ್ದ. ಆದರೆ ಪುಂಡರು ಅವನನ್ನು ಬಡೆವುದನ್ನು ನಿಲ್ಲಿಸಲಿಲ್ಲ. ಕೆಲವು ನಿಮಿಷಗಳಲ್ಲಿಯೇ ಅವನ ಜೀವವು ವಿಸ್ಮೃತಿಗೊಳಗಾಯಿತು.

× × × ×

ಮಾದಯ್ಯನಿಗೆ ಎಚ್ಚರವಾದಾಗ ಅವನು ತನ್ನ ಗುಡಿಸಿಲಲ್ಲಿ ಇದ್ದ. ನಲ್ಲೆ ಮಂಜಮ್ಮ ಅವನನ್ನು ಉಪಚರಿಸುತ್ತಿದ್ದಳು. ಕಾಲಹತ್ತಿರ ಗೆಳೆಯ ಸಿದ್ದಯ್ಯ ನಿಂತಿದ್ದ. "ನಾನೆಲ್ಲಿದೇನೆ" ಎಂಬ ಕ್ಷೀಣ ಸ್ವರವು ಮಾದಯ್ಯನ ಕೊರಳಿಂದ ಹೊರಟಿತು.

"ನೀನು ಮನೆಯಲ್ಲಿಯೇ ಇದ್ದೀ" ಸಿದ್ದಯ್ಯ ನುಡಿದ. "ಪಕ್ಕದ ಹಳ್ಳಿಯ ಜನರಿಗೆ ವಾರದ ಅಕ್ಕಿಯನ್ನು ಹಂಚಿ ನಾನು ಅದೇ ದಾರಿಗಾಗಿ ಬರುತ್ತಿದ್ದೆ. ನಾಲ್ಕು ಮಂದಿ ಒಬ್ಬನನ್ನು ಹಿಡಿದು ಹೊಡೆಯುವುದನ್ನು ನಾನು ಕಂಡೆ. ನನ್ನನ್ನು ನೋಡಿದೊಡನೆಯೇ ಅವರು ಹೆದರಿ ಓಡಿ ಹೋದರು. ಯಾರೆಂದು ನೋಡುವಾಗ ನೀನು. ನಾನು ನಿನ್ನನ್ನು ಇಲ್ಲಿಗೆ ಎತ್ತಿಕೊಂಡು ಬಂದೆ."

"ಬಹಳ ಉಪಕಾರವಾಯಿತು." ಎಂದಳು ಮಂಜಮ್ಮ.

"ಎಂತಹ ನಿಷ್ಕರುಣಿಗಳು! ನಾಲ್ಕು ಮಂದಿ ಒಬ್ಬನನ್ನು ಹಿಡಿದು ಇರುಳು ಹೊತ್ತು ಕೋಣನನ್ನು ಬಡೆಯುವಂತೆ ಸಾಯ ಬಡೆಯಲು ಹೇಗೆ ಮನಸ್ಸು ಬಂದಿತು."

ಮಂಜಮ್ಮನ ಕಣ್ಣುಗಳಲ್ಲಿ ನೀರ ಹನಿಗಳು ತುಳುಕಿದುವು.

"ಅವರೊಡನೆ ನಮಗೆ ಹಗೆತನವೇಕೆ ?" ಮಾದಯ್ಯ ಉಸುರಿದ. "ಅವರ ಸ್ಥಿತಿಯನ್ನು ನೋಡಿ ನಾವು ಕನಿಕರಪಡಬೇಕಾಗಿದೆ."

"ಈ ಕಟುಕರಿಗೆ ಕನಿಕರವೇ!" ಎಂಬ ಉದ್ಗಾರವು ಸಿದ್ದಯ್ಯನ ತುಟಿಗಳಿಂದ ಬಿರಿದು ಬಂತು.

"ಅವರೇನು ನನ್ನನ್ನು ಮನಃಪೂರ್ವಕವಾಗಿ ಬಡೆದರೇ ? ಜಮೀನ್ದಾರರಿತ್ತ ಹಿಡಿ ಹೊನ್ನಿನಾಸೆಯು ಅವರಿಂದ ಈ ಅಕೃತ್ಯವನ್ನು ಎಸಗಿಸಿತು. ಆ ಹೊನ್ನನ್ನಿತ್ತ ಕೈ, ನನ್ನನ್ನು ಬಡಿದಿತಲ್ಲದೆ ಆ ಬಡಪಾಯಿಗಳಲ್ಲ. ಅವರು ಕೇವಲ ಜಮೀನ್ದಾರರ ಅಡಿಯಾಳುಗಳು: ಆದುದರಿಂದಲೇ ಅವರಿಗೋಸುಗ ನಾವು ಕನಿಕರಪಡಬೇಕಾಗಿದೆ."

ಪುಣ್ಯದಿಂದ ಮಾದಯ್ಯನ ಎಲುಬುಗಳಿಗೆ ಬಹಳ ಪೆಟ್ಟಾಗಿರಲಿಲ್ಲ. ಮಂಜಮ್ಮನ ಒಂದುವಾರದ ಆರೈಕೆಯು ಅವನನ್ನು ಹುಷಾರುಗೊಳಿಸಿತು.

× × × ×

ಜಮೀನ್ದಾರರು ರೈತರನ್ನು ಅವರ ವಸತಿಗಳಿಂದ ಬಲಾತ್ಕಾರವಾಗಿ ದೂಡತೊಡಗಿದರು. ಅವರ ಬೆಂಗಾವಲಿಗೆ ಪೋಲೀಸು ಪಡೆಯಿದ್ದಿತು. ರೈತರಾದರೂ ತಮ್ಮ ಗುಡಿಸಲುಗಳನ್ನು ತ್ಯಜಿಸಲು ನಿರಾಕರಿಸುತಿದ್ದರು. ಆಗ ಜಮೀನ್ದಾರರ ನೌಕರರು ಮನೆಯೊಳಗೆ ನುಗ್ಗಿ ಹೆಂಗಸು ಮಕ್ಕಳು ಎಂದು ನೋಡದೆ ಬಲಾತ್ಕಾರವಾಗಿ ಹೊರಗೆ ಎಳೆದು ಹಾಕುತಿದ್ದರು. ಕಿಸಾನರು ಹಿಂಸೆಯನ್ನು ಕೈಗೊಂಡಿರಲಿಲ್ಲ. ಅವರು ಶಾಂತರೀತಿಯಿಂದ ಸೌಮ್ಯವಾಗಿ ವರ್ತಿಸುತಿದ್ದರು. ತಾವು ಹಿಂಸೆಯನ್ನು ಕೈಕೊಂಡರೆ, ಜಮೀನ್ದಾರರಿಗೆ ತುಪಾಕಿಗಳು,—ಸಿಡಿಮದ್ದು ಗುಂಡುಗಳು ಬೆಂಬಲವಾಗುವುವೆಂಬುದನ್ನು ಅವರು ಬಲ್ಲರು. ಜಮೀನ್ದಾರರು ಮನೆಗಳಿಗೆ ಬೀಗಹಾಕಿ ಹೋದ ಅನಂತರ, ರೈತರು ಮನೆಗಳ ಬೀಗಗಳನ್ನು ಮುರಿದು ಮರಳಿ ಅಲ್ಲಿಯೇ ವಾಸಿಸತೊಡಗಿದರು. ತೆರವು ಮಾಡಿದ ವಸತಿಗಳಿಗೆ ಮರಳಿ ಕೃಷಿಕರು ಪ್ರವೇಶಿಸದಂತೆ ನೋಡಿಕೊಳ್ಳಲು ಜಮೀನ್ದಾರರು ಪೋಲಿಸು ಪಡೆಯ ನೆರವನ್ನು ಪಡೆಯಬೇಕಾಯಿತು. ಹಳ್ಳಿಗಳಲ್ಲಿ ಪೋಲಿಸರು ನೆಲೆಸಿ,—ಮನೆಯ ಬೀಗಗಳನ್ನು ರೈತರು ಮುರಿಯದಂತೆ ನೋಡಿಕೊಳ್ಳುತಿದ್ದರು.

ಊರ ಹನುಮನಗುಡಿಯ ಮುಂದಿನ ಮೈದಾನವೇ ಮನೆ ಮಠಗಳನ್ನು ಕಳೆದುಕೊಂಡ ರೈತಾವಳಿಯ ನಿವಾಸ ಕೇಂದ್ರವಾಯಿತು. ಚಪ್ಪರಗಳನ್ನು ಹಾಕಿ ಅವರು ಅಲ್ಲಿ ವಾಸಿಸತೊಡಗಿದರು. ಉದರನಿರ್ವಹಣಕ್ಕೆ ಪರ ಊರುಗಳಿಂದ ಬರುತಿದ್ದ ಸಾಹಾಯ್ಯ ದ್ರವ್ಯವೇ ಗತಿ. ಆದರೂ ಕೃಷಿಕರು ತಮ್ಮ ಹಟವನ್ನು ಬಿಡಲಿಲ್ಲ; ಗೇಣಿ ತೆರಿಗೆಗಳನ್ನು ಕೊಡಲು ಒಪ್ಪಲಿಲ್ಲ. ಕಾಳಗವು ಮುಂದುವರಿದಿತು. ಹೊರಗಿನಿಂದ ಮುಂದಾಳುಗಳು ಬಂದು ಹಳ್ಳಿಗರಿಗೆ ಹೊಸ ಹುರುಪು ನವಚೇತನಗಳನ್ನು ಈಯಲೆತ್ನಿಸಿದರು. ಆದರೆ ಆಡಳಿತಗಾರರು ಆವರ ಸಾನ್ನಿಧ್ಯಕ್ಕೆ ಎಡೆಗೊಡುತಿರಲಿಲ್ಲ; ಅವರು ಬರುವುದೇ ತಡ, ಅವರನ್ನು ಬಂಧಿಸಿ, ಸೆರೆಮನೆಗಳಿಗೆ ಕಳುಹುತಿದ್ದರು. ಮುಂದಿನ ಹಾದಿಯನ್ನು ತೋರಿಸಲು ಗಣ್ಯ ಮುಂದಾಳುಗಳು ಇಲ್ಲದಿದ್ದರೂ ಜನತೆಯು ಸ್ವಾಧೀನತೆಯ ಹೆದ್ದಾರಿಯಲ್ಲಿ ಮುಂದೆ ಸಾಗಿತು.

ಹಳ್ಳಿಗರಿಗೆ ಇರುಳಲ್ಲಿ ಉರಿಯುತಿಹ ಪಂಜನ್ನು ಹಿಡಿದು ತೋರಿಸು ತಿದ್ದ ಒಂದು ವ್ಯಕ್ತಿಯೆಂದರೆ ಮಾದಯ್ಯನೇ ಸರಿ. ಆವನು ವಿದ್ಯುದ್ದೀಪದಂತೆ ಪ್ರಕಾಶಿಸುತಿದ್ದ; ಸಂಗಡಿಗರಿಗೆ ಮುಂದಿನ ಹಾದಿಯನ್ನು ತೋರಿಸುತಿದ್ದ; ಜನತೆಯ ಎದೆಗಳನ್ನು ಕವಿಯುತಿದ್ದ ನಿರಾಶೆಯನ್ನು ಹೊಡೆದಟ್ಟುತಿದ್ದ.

## (೮)

ಅಂದು ನೆಲದೊಡೆಯರು ಉಸ್ಮಾನನನ್ನು ಅವನ ಗುಡಿಸಿಲಿನಿಂದ ಹೊರ ದೂಡುವ ಕಜ್ಜವನ್ನು ಕೈಗೊಂಡಿದ್ದರು. ಉಸ್ಮಾನನದು ದೊಡ್ಡ ಸಂಸಾರ. ಮುದುಕಿಯಾದ ತಾಯಿ, ಕೈ ಹಿಡಿದ ಮಡದಿ, ನಾಲ್ಕು ಜನ ಮಕ್ಕಳು. ತಾಯಿ ನಿಮೋನಿಯಾಕ್ಕೆ ಒಳಗಾಗಿ ಹಾಸಿಗೆಯನ್ನು ಹಿಡಿದಿದ್ದಳು. ಮಕ್ಕಳು ಇಬ್ಬರು ಜ್ವರ ಹಿಡಿದು ಮಲಗಿದ್ದುವು. ಆದರೆ ಮನೆಮಂದಿಯ ಅನಾ ರೋಗ್ಯವು ಉಳ್ಳವರ ಕಣ್ಣುಗಳನ್ನು ತೆರೆಯಿಸಲಿಲ್ಲ. ರೋಗಿಗಳಾದರೇನು? ತೆರಿಗೆ ಗೇಣಿಗಳನ್ನು ಸಲ್ಲಿಸಿಲ್ಲ– ಆದುದರಿಂದ ಮನೆಯೊಳಗೆ ವಾಸಿಸಲು ಉಸ್ಮಾನನಿಗೆ ಹಕ್ಕಿಲ್ಲ. ಜಮೀನ್ದಾರರ ನೌಕರರು ಉಸ್ಮಾನನ ಮನೆಯೊಳಗೆ ನುಗ್ಗಿದರು. ಬಾಗಿಲಲ್ಲಿ ಅವರನ್ನು ತಡೆಯಲೋಸುಗ ಮಲಗಿದ ಇತರ ರೈತರನ್ನು ಅವರು ಲೆಕ್ಕಿಸಲಿಲ್ಲ. ಅವರನ್ನು ತುಳಿದು ಮನೆಯೊಳಗೆ ಪ್ರವೇಶಿ ಸಿದರು; ಜಗುಲಿಯ ಮೇಲೆ ನಿಂತಿದ್ದ ರೈತರನ್ನು ರಟ್ಟೆಹಿಡಿದು ದೂಡಿದರು.

ನೆಲದೊಡೆಯರ ಆಳುಗಳು ಮನೆಯೊಳಗೆ ನುಗ್ಗಿ ಉಸ್ಮಾನನ ಮನೆಯೊಳಗಿನ ಮಡಿಕೆ ಕುಡಿಕೆಗಳನ್ನು ದೊಣ್ಣೆಗಳಿಂದ ಹೊಡೆದು ಹುಡಿಮಾಡಿದರು; ಪದಾರ್ಥಗಳನ್ನು ಹೊರಗೆ ಎಳೆದುಹಾಕಿದರು; ಅವನ ಹೆಂಡತಿಯ ಕೊರಳಿಗೆ ಕೈಹಾಕಿ ಹೊರದೂಡಿದರು. ಮಕ್ಕಳ ಕೈ ಹಿಡಿದು ಹೊರಗೆ ಎಳೆದುದಾಯಿತು. ಕೊನೆಗೆ ಅವರು ನರಳುತ್ತಾ ಹಾಸಿಗೆಯ ಮೇಲೆ ಮಲಗಿದ್ದ ಮುದುಕಿಯ ಮೈಗೆ ಕೈ ಹಚ್ಚಿದರು. ಅವರು ಏಳಲಾಗದಿದ್ದ ಮುದುಕಿಯನ್ನು ಕೈ ಹಿಡಿದು ನೆಲದ ಮೇಲೆ ದರದರನೆ ಎಳೆದರು.

ಉಸ್ಮಾನನು ಇದುವರೆಗೆ ಎಲ್ಲಾ ಅಕ್ರಮಗಳನ್ನು ತನ್ನ ಕಣ್ಣುಗಳಿಂದ ನೋಡುತ್ತಾ ಸಹಿಸಿಕೊಂಡಿದ್ದ. ಉಕ್ಕಿ ಬರುತಿಹ ಸಿಟ್ಟನ್ನು ನುಂಗಿಕೊಂಡಿದ್ದ. ಆದರೆ ಹೆತ್ತ ತಾಯಿಯನ್ನು ದರದರನೆ ಎಳೆವ ಚಿತ್ರವು ಅವನ ಅಂತರಂಗವನ್ನು ಕದಡಿಸಿತು. ಬುದ್ಧಿಯು ವಿವೇಕದ ಹಿಡಿತದಿಂದ ತಪ್ಪಿಸಿಕೊಂಡು ಕೋಪದ ತೆಕ್ಕೆಗೆ ಒಳಗಾಯಿತು. ಅವನ ಕಣ್ಣುಗಳು ಕೆಂಡವನ್ನು ಕಾರಿದವು. ಮೈ ನವಿರಿಗೊಳಗಾಯಿತು. ಅವನು ತನ್ನ ತೋಳನ್ನು ಮೇಲಕ್ಕೆತ್ತಿದ. ಇನ್ನೊಂದು ಚಣದಲ್ಲಿ ಅವನ ಕೈ ಜಮೀನ್ದಾರರ ಆಳೊಬ್ಬನ ಕೈಯಲ್ಲಿದ್ದ ದೊಣ್ಣೆಯನ್ನು ಕಸಿದುಕೊಂಡಿತು. ಉಸ್ಮಾನನು ತಾಯಿಯನ್ನು ಕೈ ಹಿಡಿದೆಳೆಯುತಿದ್ದ ನೌಕರನ ಕೈಯ ಮೇಲೆ ಅಪ್ಪಳಿಸಿದ. ಅವನ ಕೈ ಮುರಿದು ಹೋಯಿತು. ನೋವನ್ನು ಸಹಿಸಲಾಗದೆ ಅವನು ಅರಚಿದ; ಇನ್ನೊಂದು ಕ್ಷಣದಲ್ಲಿ ಆತ ನೆಲದಮೇಲೆ ಉರುಳಿದುದೂ ಆಯಿತು.

ಜಮೀನ್ದಾರರ ನೌಕರರು ಉಸ್ಮಾನನನ್ನು ಮುತ್ತಿಕೊಂಡರು. ಅವನ ಹಣೆ, ತಲೆ, ಎದೆ ಮೊದಲಾದ ಅಂಗಗಳ ಮೇಲೆ ದೊಣ್ಣೆಗಳಿಂದ ಬಡಿಯತೊಡಗಿದರು; ಮುಷ್ಟಿಗಳನ್ನು ಬಿಗಿಹಿಡಿದು ಅವನನ್ನು ಗುದ್ದಿದರು. ಅವನು ಕೆಳಗೆ ಬೀಳಲು, ಅವರು ತಮ್ಮ ಪಾದಗಳಿಂದ ಅವನ ಹೊಟ್ಟೆ, ಎದೆ, ಮೊಗಗಳನ್ನು ತುಳಿದರು ಈ ಪೀಡನೆಯನ್ನು ಸಹಿಸುವದು ಆತನಿಗೆ ಅಸದಳವೆನಿಸಿತು. ಅವನ ಕೊರಳಿಂದ ಹೊರಟ ಕ್ರಂದನವು ಬಾನ ಮಟ್ಟಕ್ಕೇರಿತು.

ಉಸ್ಮಾನನ ಕೊರಳಿಂದ ಹೊರಟ ಅಳಲು ಹೊರಗೆ ನಿಂತಿದ್ದ ರೈತಾವಳಿಯ ಕಿವಿಗಳನ್ನು ಸೇರಿತು. ಮನೆಯೊಳಗೆ ಹೊಡೆದಾಟವು ಜರಗುತಿದೆಯೆಂದು ಅವರು ತಿಳಿದರು. ತಮ್ಮ ಒಡನಾಡಿ ಕೃಷಿಕನೊಬ್ಬನನ್ನು ಜಮೀನು

ದಾರರ ನೌಕರರು ಪೀಡಿಸುತಿಹರೆಂಬುದು ಅವರ ಎದೆಗಳಲ್ಲಿ ಹೊಗೆಯಾಡುತಿದ್ದ ರೋಷಾಗ್ನಿಯನ್ನು ಪ್ರಜ್ವಲಗೊಳಿಸಿತು. ಈ ರುದ್ರ ನಾಟಕವನ್ನು ಪ್ರೇಕ್ಷಕರಂತೆ ನೋಡಿ ನಿಂತಿರುವುದು ಅವರಿಗೆ ಸಾಧ್ಯವೆನಿಸಲಿಲ್ಲ. ಅವರ ಧಮನಿಗಳಲ್ಲಿ ಬಿಸಿರಕ್ತದ ಹೊನಲು ಪ್ರವಹಿಸಿತು. ಅವರ ಕಾಲುಗಳು ಬಾಗಿಲ ಕಡೆಗೆ ಹೆಜ್ಜೆ ಹಾಕಿದುವು.

ಬಾಗಿಲಲ್ಲಿ ನಿಂತಿದ್ದ ಪೋಲೀಸರನ್ನು ರೈತರು ಹಿಡಿದೆಳೆದು ಅಂಗಳಕ್ಕೆ ದೂಡಿದರು; ಅವರು ಹಸಿದ ತೋಳಗಳಂತೆ ಮನೆಯೊಳಕ್ಕೆ ನುಗ್ಗಿದರು.

" ರೊಚ್ಚಿಗೇಳಬೇಡಿ. ಸಿಟ್ಟಿನ ಕೈಯಲ್ಲಿ ಬುದ್ಧಿಯನ್ನು ಕೊಟ್ಟರೆ ಕಾರ್ಯ ಕೆಡುವುದು; ಹಿಂಸೆಗೆ ಕೈ ಹಾಕಿದರೆ ಸರ್ವನಾಶವಾಗುವದು. ಆದುದರಿಂದ ತಾಳ್ಮೆಯನ್ನು ಬಿಡದಿರಿ; ಹಿಂದಿರುಗಿರಿ ! " ಎಂದು ಅಂಗಳದಲ್ಲಿ ನಿಂತಿದ್ದ ಮಾದಯ್ಯ ಕೂಗಿ ಹೇಳಿದ; ಮನೆಯೊಳಗೆ ನುಗ್ಗುತಿದ್ದ ಜನರನ್ನು ತಡೆಯಲು ಹವಣಿಸಿದ.

ಆದರೆ ಕೈ ಮೀರಿ ಹೋಗಿತ್ತು. ಜನರ ಎದೆಗಳಲ್ಲಿ ಹಗೆ ದ್ವೇಷಗಳ ಜ್ವಾಲಾಮುಖಿಯು ಉಮ್ಮಳಿಸಿತು. ಜನಜಂಗುಳಿಯು ವಿವೇಕವನ್ನು ಬದಿಗೊತ್ತಿ ಸೇಡಿಗಾಗಿ ಹಾಯ್ತೊರೆಯಿತು. ಅವರನ್ನು ತಡೆಯಲು ಮಾದಯ್ಯನಿಂದ ಸಾಧ್ಯವಾಗಲಿಲ್ಲ. ಆಗ ಅವನು ಪೋಲೀಸರಿಗೆ ಕೂಗಿ ಹೇಳಿದ. " ಜನರು ರೊಚ್ಚಿಗೆದ್ದಿದಾರೆ. ಅವರ ಮುನಿಸು ನಿಮ್ಮ ಜೀವವನ್ನು ತೆಗೆಯಬಹುದು. ಆದುದರಿಂದ ನಿಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಿರಿ. "

ಮಾದಯ್ಯನ ಸಲಹೆಯಂತೆ ಪೋಲೀಸರು ತಮ್ಮ ಕಾಲುಗಳಿಗೆ ಬುದ್ಧಿ ಹೇಳಿದರು

× × × ×

ರೊಚ್ಚಿಗೆದ್ದ ಕೃಷಿಕರು ಜಮೀನ್ದಾರರ ನೌಕರರಿಗೆ ಹಿಂಸೆ ಮಾಡದಂತೆ ನೋಡಿಕೊಳ್ಳಲು ಮಾದಯ್ಯ ಮನೆಯ ಜಗುಲಿಯನ್ನೇರಿದ. ಅನಿತರಲ್ಲಿ ಮನೆಯೊಳಗಿನ ಜನರು ಜಮೀನ್ದಾರರ ನೌಕರರನ್ನು ಹಿಡಿದು ಮನೆಯ ಕಿಟಕಿ ಕಂಬಗಳಿಗೆ ಹಗ್ಗಗಳಿಂದ ಕಟ್ಟಿದ್ದರು; ಉಸ್ಮಾನನನ್ನೂ ಅವನ ಮನೆಯ ಹೆಂಗಸರನ್ನೂ ಹೊರಗೆ ಕರೆತಂದಿದ್ದರು. ಮನೆಯ ಕದಗಳನ್ನು ಅವರು

ಮುಚ್ಚಿದರು. ಮಾದಯ್ಯನು ರೆಪ್ಪೆ ಮುಚ್ಚುವುದರೊಳಗಾಗಿ ಮನೆಯಲ್ಲಿ ಹೊಗೆಯಾಡತೊಡಗಿತು. ಬೆಂಕಿಯು ತನ್ನ ಕೆನ್ನಾಲಗೆಗಳನ್ನು ಹೊರಚಾಚಿತು.

ಸಿಟ್ಟಿಗೆದ್ದ ರೈತರು ಜಮೀನ್ದಾರರ ನೌಕರರನ್ನು ಮನೆಯೊಳಗೆ ಸೇರಿಸಿ ಕಿಚ್ಚನ್ನಿಕ್ಕಿದ್ದರು. ನೌಕರರನ್ನು ಜೀವ ಸಹಿತ ಸುಡಲು ಹವಣಿಸಿದ್ದರು. ಆ ಭೀಕರ ಚಿತ್ರವನ್ನು ನೋಡಿ ಮಾದಯ್ಯನ ಮೈ ಬೆವೆತುಹೋಯಿತು. ಮೊಗವು ಬಿಳುಪೇರಿತು ಅಂಗಾಂಗಗಳು ಅರಳೆ ಎಲೆಗಳಂತೆ ಕಂಪಿಸಿದುವು. ಒಂದು ಕ್ಷಣ ಬುದ್ಧಿಗೆ ಮಂಕು ಕವಿದಂತಾಯಿತು ಮುಂದೇನು ಮಾಡುವುದು ಎಂದು ಅವನಿಗೆ ತಿಳಿಯಲಿಲ್ಲ.

ಇನ್ನೊಂದು ಕ್ಷಣದಲ್ಲಿಯೇ ಮಾದಯ್ಯನ ಬುದ್ಧಿಯು ಸ್ಥಿಮಿತಕ್ಕೆ ಬಂದಿತು. ಅವನ ಕರ್ತವ್ಯವೇನೆಂಬುದು ನಿಚ್ಚಳವಾಗಿ ಹೊಳೆದಿತು. ಜಮೀನು ದಾರರ ನೌಕರರು ಎಂತಹ ನೀಚರೇ ಆಗಿರಲಿ ಅವರನ್ನು ಜೀವ ಸಹಿತ ಸುಡುವುದು ಸಲ್ಲದು. ಅವರ ಪ್ರಾಣಗಳನ್ನು ರಕ್ಷಿಸುವುದು ತನ್ನ ಪ್ರಥಮ ಕರ್ತವ್ಯ ಎಂಬ ಆಲೋಚನೆಯು ಅವನ ಬಗೆಯಲ್ಲಿ ಮೂಡಿತು. ನೆಟ್ಟಗೆ ಬಾಗಿಲ ಕಡೆಗೆ ಅವನು ಹೆಜ್ಜೆಗಳನ್ನಿರಿಸಿದ.

" ಬೇಡ ಮಾದಯ್ಯ, ಅವರು ಜೀವಸಹಿತ ಬೆಂದು ಹೋಗಲಿ! ಮಾಡಿದ ಪಾಪಕ್ಕೆ ತಕ್ಕ ಶಾಸ್ತಿಯಾದಂತಾಯಿತು! " ಅಂಗಳದಲ್ಲಿ ನಿಂತಿದ್ದ ರೈತರು ಕೂಗಿ ಹೇಳಿದರು

ಆದರೆ ಮಾದಯ್ಯ ಆ ಕೂಗುಗಳನ್ನು ಕಿವಿಗಳಿಗೆ ಹಾಕಿಕೊಳ್ಳಲಿಲ್ಲ ಮುಚ್ಚಿದ್ದ ಕದಗಳನ್ನು ಒದೆದು ಮುರಿದುದಾಯಿತು. ಬಿದಿರು ದಬ್ಬೆಗಳನ್ನು ಹೆಣೆದು ಮಾಡಿದ ಗೋಡೆಗಳು ಧಗಧಗನೆ ಉರಿಯುತ್ತಿದ್ದುವು. ಮಾಡಿನ ಹುಲ್ಲಿಗೆ ಬೆಂಕಿ ಹತ್ತಿ, ಬಾನನ್ನು ಮುಟ್ಟಲು ಹವಣಿಸುತಿದ್ದಿತು. ಮನೆಯೊಳಗೆ ಹೊಗೆತುಂಬಿಕೊಂಡಿತ್ತು. ಮಾದಯ್ಯ ಅಳುಕದೆ ಒಳಗೆ ಪ್ರವೇಶಿಸಿದ

ಒಳಗೆ ಜಮೀನುದಾರರ ನಾಲ್ವರು ಆಳುಗಳಿದ್ದರು ಇಬ್ಬರನ್ನು ಕಿಟಕಿ ಗಳಿಗೆ ಕಟ್ಟಿ ಹಾಕಿದ್ದರು. ಇನ್ನಿಬ್ಬರನ್ನು ಕಂಬಗಳಿಗೆ ಬಿಗಿದಿದ್ದರು. ಕಿಟಕಿ ಗಳಿಗೆ ಬಂಧಿಸಿದ ಇಬ್ಬರ ಕಟ್ಟುಗಳನ್ನು ಮಾದಯ್ಯ ಬಿಚ್ಚಿದ. ಅವರು ಉಸಿರಾಡುತಿದ್ದರು. ಕಟ್ಟುಗಳನ್ನು ಬಿಚ್ಚಿಕೊಳ್ಳುತ್ತಲೇ, ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಅವರು ಅಲ್ಲಿಂದ ಓಡಿದರು ತಮ್ಮಿಬ್ಬರು ಸಂಗಾತಿಗಳನ್ನು ಕಾಪಾಡುವ ಹೊಣೆಯು ತಮ್ಮದು ಎಂಬ ಆಲೋಚನೆ ಸಹ ಬರಲಿಲ್ಲ.

ಮೂರನೆಯವನನ್ನು ರಕ್ಷಿಸಲು ಮಾದಯ್ಯ ಹೋದ. ಅವನ ಮೈಗೆ ಬೆಂಕಿ ಹಿಡಿದಿತ್ತು. ಹೊಗೆಯಿಂದ ಶ್ವಾಸತೆಗೆದುಕೊಳ್ಳಲಾಗದೆ ಆತ ಮೂರ್ಛೆ ಹೋಗಿದ್ದ. ಮಾದಯ್ಯ ಕಟ್ಟುಗಳನ್ನು ಬಿಚ್ಚಿದ. ಅವನನ್ನು ಹೊತ್ತು ಮಾದಯ್ಯನೇ ಹೊರ ತರಬೇಕಾಯಿತು. ಅವನನ್ನು ಎತ್ತಿಕೊಂಡು ಬಂದು ಅಂಗಳದಲ್ಲಿ ಮಲಗಿಸುವುದಾಯಿತು. ಅವನ ಸುತ್ತಲೂ ಕೃಷಿಕರು ನೆರೆದರು. ಅವರ ಕೋಪವು ಇನ್ನೂ ಆರಿರಲಿಲ್ಲ "ಎಚ್ಚರ ತಪ್ಪಿದಾನೆ. ಅವನ ಜೀವ ತೆಗೆಯುವ ಕೆಲಸಕ್ಕೆ ಕೈ ಹಾಕಬೇಡಿ. ಹಾಗೇನಾದರೂ ನಿಮ್ಮ ಇಚ್ಛೆಯು ಆಗಿದ್ದರೆ, ನನ್ನ ಪ್ರಾಣವನ್ನು ತೆಗೆದು ಆನಂತರ,–ಜಮೀನುದಾರರ ನೌಕರರ ಮೇಲೆ ಕೈ ಮಾಡಿ"

ಮಾದಯ್ಯನ ನುಡಿಗಳು ಜನತೆಯ ಹೃದಯಗಳನ್ನು ಸ್ಪರ್ಶಿಸಿದುವು. ತಮ್ಮ ಕೀಳು ಗೈಮೆಯ ಬಗ್ಗೆ ಅವರಿಗೆ ಲಜ್ಜೆಯುಂಟಾಯಿತ. ಅವರೆದೆಗಳಲ್ಲಿ ಕುದಿಯುತಿದ್ದ ಸಿಟ್ಟು ಆರಿತು. ನಾಚಿಕೆಯಿಂದ ಅವರು ತಲೆ ತಗ್ಗಿಸಿದರು.

ನಾಲ್ಕನೆಯವನು ಇನ್ನೂ ಮನೆಯೊಳಗಿದ್ದ. ಅವನ ಪ್ರಾಣವನ್ನು ಕಾಪಾಡಲೋಸುಗ ಮಾದಯ್ಯ ಒಳಗೆ ಹೆಜ್ಜೆಗಳನ್ನು ಇರಿಸಿದ. ಗೆಳೆಯ ಸಿದ್ದಯ್ಯ ಕೂಗಿ ಹೇಳಿದ. "ಮಾದಯ್ಯ, ಮನೆ ಪೂರ್ತಿಯಾಗಿ ಹತ್ತಿ ಕೊಂಡಿದೆ. ಜೀವಕ್ಕೆ ಅಪಾಯ ಒದಗೀತು." ಆದರೆ ಮಾದಯ್ಯ ಗೆಳೆಯನ ನುಡಿಗಳಿಗೆ ಕಿವಿಗೊಡಲಿಲ್ಲ.

ನಾಲನೆಯವನ ಉಡಿಗೆ ತೊಡಿಗೆಗಳಿಗೆ ಇನ್ನೂ ಬೆಂಕಿ ಹಿಡಿದಿರಲಿಲ್ಲ. ಆ ಭಾಗದಲ್ಲಿ ಬೆಂಕಿಯು ವ್ಯಾಪಿಸದುದರಿಂದ ಅವನ ಎಚ್ಚರ ತಪ್ಪಿರಲಿಲ್ಲ. ಮಾದಯ್ಯ ಚೂರಿಯಿಂದ ಅವನ ಕಟ್ಟುಗಳನ್ನು ತುಂಡರಿಸಿದ. ಹುಲಿಯ ಬಾಯಿಯಿಂದ ಪಾರಾದ ಜಿಂಕೆಯಂತೆ ಅವನು ಅಲ್ಲಿಂದ ಏದುತ್ತಾ ಬೀಳುತ್ತಾ ಹೊರಕ್ಕೆ ಓಡಿದ.

ಇನ್ನು ಮಾದಯ್ಯ ಮನೆಯಿಂದ ಹೊರಗೆ ದಾಟಬೇಕು. ಆದರೆ ಉರಿಯುತಿದ್ದ ಗುಡಿಸಲು ಕುಸಿದು ಬಿದ್ದಿತು. ಅವನು ಹೊರದಾಟಲಾಗಲಿಲ್ಲ. ಅದರ ನಡುವೆ ಸಿಕ್ಕಿಬಿದ್ದ.

ಜಮೀನುದಾರರ ನಾಲ್ಕನೆಯ ಆಳೂ ಹೊರಬಂದುದನ್ನು ರೈತರು ನೋಡಿದರು. ಆದರೆ ಅಷ್ಟರಲ್ಲಿ ಮನೆ ಮುರಿದು ಬಿತ್ತು. ನಾಲ್ಕಾರು ನಿಮಿಷ

ಕಳೆದರೂ ಮಾದಯ್ಯ ಹೊರಗೆ ಬರಲಿಲ್ಲ. ಸಿದ್ದಯ್ಯನ ಹೃದಯ ಮಿಡುಕಿತು. ಮನೆಯೊಳಗೆ ಮಾದಯ್ಯ ಜೀವ ಸಹಿತ ಬೇಯುತಲಿಹುದನ್ನು ನೋಡಿ ನಿಂತಿರಲು ಅವನಿಂದಾಗಲಿಲ್ಲ. ಮಾದಯ್ಯನನ್ನು ಹೊರಗೆ ಎಳೆದು ತರಬೇಕು; ಇಲ್ಲವೇ ಅವನ ಸಂಗಡ ತಾನೂ ಬೆಂದು ಬೂದಿಯಾಗಬೇಕೆಂಬ ಸಂಕಲ್ಪವು ಅವನ ಅಂತರಂಗದಲ್ಲಿ ಮೂಡಿತು. ಇನ್ನೊಂದು ಕ್ಷಣದಲ್ಲಿ ಅವನೂ ಬೆಂಕಿಯೊಳಗೆ ನೆಗೆದ. ಅವನ ಈ ಮಾಳ್ಕೆಯನ್ನು ಕಂಡು ಜನರು ಆಶ್ಚರ್ಯದಿಂದ ಬೆರಳುಗಳನ್ನು ಕಚ್ಚಿಕೊಂಡರು.

ಎರಡು ನಿಮಿಷಗಳು ಉರುಳಿದವು. ಜನರೆಲ್ಲ ಉರಿಯುತಿದ್ದ ಬೆಂಕಿಯನ್ನೇ ನಿಟ್ಟಿಸುತಿದ್ದರು. ಕೊನೆಗೆ ಸಿದ್ದಯ್ಯ ಅರೆಬೆಂದ ಮಾದಯ್ಯನನ್ನು ಹೊತ್ತುಕೊಂಡು ಬಂದ. ಸಿದ್ದಯ್ಯನ ಉಡಿಗೆ ತೊಡಿಗೆಗಳನ್ನು ಬೆಂಕಿಯ ಜ್ವಾಲೆಯು ಸ್ಪರ್ಶಿಸಿದ್ದಿತು.

× × × ×

ಮಾದಯ್ಯನ ದೇಹವು ಅರೆಬೆಂದು ಹೋಗಿದೆ. ಮಂಜಮ್ಮ ಅವನ ಹಾಸಿಗೆಯ ಪಕ್ಕದಲ್ಲಿ ಕುಳಿತು ಬೀಸಣಿಕೆಯಿಂದ ಗಾಳಿ ಹಾಕುತಿದ್ದಳು. ಆಕೆಯ ಕಣ್ಣುಗಳಿಂದ ನೀರು ಹೊನಲಾಗಿ ಹರಿಯುತಿದ್ದಿತು. ಸಿದ್ದಯ್ಯ ಕಾಲಬಳಿಯಲ್ಲಿ ಕುಳಿತು ಗೆಳೆಯನನ್ನು ನಿಟ್ಟಿಸುತಿದ್ದ. ಅವನ ಮೊಗವನ್ನು ವ್ಯಸನದ ಕಾರ್ಮುಗಿಲು ಮುಸುಕಿದ್ದಿತು. ಮಾದಯ್ಯನಿಗೆ ಇನ್ನೂ ಎಚ್ಚರವಾಗಲಿಲ್ಲ. ಅವನ ಜೀವವು ವಿಸ್ಮೃತಿಯ ಕಡಲಿನಲ್ಲಿ ತೇಲುತಿದ್ದಿತು.

ಕೊನೆಗೊಮ್ಮೆ ಮಾದಯ್ಯನ ದೇಹವು ಅಲುಗಿತು. ಅವನು ತನ್ನ ರೆಪ್ಪೆಗಳನ್ನು ಅರಿದೆರೆದ. ದೃಷ್ಟಿಯು ಮಂಜಮ್ಮನ ಮೊಗದ ಬಳಿಗೆ ಹೊರಳಿತು. ಒಮ್ಮೆಲೆ ಆತನ ಕಣ್ಣುಗಳು ಮಡದಿಯನ್ನು ಗುರುತಿಸಲಿಲ್ಲ. "ಯಾರು ನೀನು" ಎಂಬ ಸ್ವರವು ಹೊರಟಿತು ಆತನ ಕೊರಳಿಂದ.

"ನಾನು ಮಂಜೂ, ನಿಮ್ಮ ಮಂಜೂ!" ಉಕ್ಕಿ ಬರುತಿದ್ದ ಅಳಲನ್ನು ತಡೆಗಟ್ಟುತ್ತಾ ಮಂಜಮ್ಮ ಉಸುರಿದಳು.

"ಮಂಜೂ, ನನ್ನ ಜೀವನ ಜತೆಗಾತಿ ಮಂಜೂ, ಮರುಗದಿರು. ನನಗೆ ಕರೆ ಬಂದಿದೆ."

ಈಗ ಮಾದಯ್ಯನ ದೃಷ್ಟಿಯು ಗೆಳೆಯ ಸಿದ್ದಯ್ಯನ ಮೊಗದತ್ತ ಹರಿದಿತು. ಅವನ ಕಣ್ಣುಗಳು ಗೆಳೆಯನನ್ನು ಗುರುತಿಸಿದವು. ಅವನ ತುಟಿಗಳು ಅಲುಗಿದವು. ನಾಲಗೆಯಿಂದ ತೊದಲು ನುಡಿಗಳು ಹೊರಟವು. "ಹೋರಾಟವನ್ನು ಮುಂದುವರಿಸಿರಿ. ಆದರೆ ಹಿಂಸೆಯನ್ನು ಮಾತ್ರ ಕೈಗೊಳ್ಳಬೇಡಿರಿ."

"ಇಲ್ಲ. ಎಂದಿಗೂ ಇಲ್ಲ. ಹಿಂಸೆಯನ್ನು ಕೈಗೊಳ್ಳುವದಿಲ್ಲ" ಎಂದು ಸಿದ್ದಯ್ಯ ಗೆಳೆಯನಿಗೆ ಭರವಸೆಯನ್ನು ನೀಡಿದ.

ಮಾದಯ್ಯನ ಜೀವವು ಪುನಃ ವಿಸ್ಮೃತಿಗೊಳಗಾಯಿತು. ಅದು ಪುನಃ ಎಚ್ಚರಿಕೆಯನ್ನು ಹೊಂದಲಿಲ್ಲ.

ಅವನ ಉಸಿರು ಜಡದೇಹವನ್ನು ಪರಿತ್ಯಜಿಸಿ, ಹೊರಗಿನ ಅನಂತತೆಯಲ್ಲಿ ಕರಗಿ ಹೋಯಿತು; ಮಂಜಮ್ಮನ ಕೊರಳಿಂದ ಹೊರಟ ಶೋಕಾರ್ತರವವು ಮುಗಿಲ ಮಂಡಲದಲ್ಲಿ ಮಾರ್ದನಿಗೊಂಡಿತು !

---

# ವೇಣುವಿನ ಕೊನೆಯ ದಿನಗಳು

## (೧)

ವೇಣು ತನ್ನ ಕೋಣೆಯಲ್ಲಿ ಕುಳಿತು ಗಡ್ಡಕ್ಕೆ ಸಾಬೂನು ಬಳಿದು ಬ್ರಷಿನಿಂದ ಉಜ್ಜುತಿದ್ದ. ಪಕ್ಕದಲ್ಲಿಯೇ ಒಂದು ಮುರುಕು ಮೇಜದ ಮೇಲೆ ಒಂದು ಬಿಸಿನೀರಿನ ಪಾತ್ರೆ, ರೇಸರುಗಳು ಕುಳಿತಿದ್ದುವು. ಅವನ ಬಲಗೈ ರೇಸರನ್ನು ಎತ್ತಿಕೊಂಡಿತು. ಎಡಗೈ ಬೆರಳುಗಳಿಂದ ಅವನು ಗಲ್ಲವನ್ನು ಒತ್ತಿ ಹಿಡಿದು ಗಡ್ಡ ಕೆರೆಯಲು ಆರಂಭಿಸಿದ. ಗೋಡೆಯಲ್ಲಿ ನೇತು ಹಾಕಿದ್ದ ಕನ್ನಡಿಯಲ್ಲಿ ಬಿಂಬಿಸಿದ ಆತನ ಪಡಿನೆಳಲು ವೇಣುವನ್ನು ಅಣಕಿಸಿತು. ಬ್ಲೇಡು ಅವನ ಇಚ್ಛೆಯಂತೆ ಮುಂದೆ ಸಾಗುತಿರಲಿಲ್ಲ. ಅದು ಮೊಗದ ಮೇಲೆ ಹುಲುಸಾಗಿ ಬೆಳೆದ ಕೂದಲುಗಳನ್ನು ಕತ್ತರಿಸಲಾರೆನೆಂದು ಸತ್ಯಾಗ್ರಹ ವನ್ನು ಕೈಗೊಳ್ಳುವ ಹವಣಿಕೆಯಲ್ಲಿದ್ದಿತು. ಆತನ ಕೆಲಸ ಮುಂದೆ ಸಾಗು ವಂತಿರಲಿಲ್ಲ. ವೇಣು ರೇಸರನ್ನು ಬಿಚ್ಚಿ ಬ್ಲೇಡನ್ನು ಗಾಜಿನಲೋಟದೊಳಗೆ ಹಾಕಿ ಮಸೆಯಬೇಕಾಗಿ ಬಂತು. ಬ್ಲೇಡನ್ನು ಮಸೆಯುತ್ತಾ ಅವನು ತನ್ನ ಷ್ಟಕ್ಕೇ ಉಸುರಿದ "ಎಂತಹ ಅನಿಷ್ಟ ಬ್ಲೇಡುಗಳು ಈಗಿನವು. ಎರಡಾಣೆ ಕೊಟ್ಟು ತೆಗೆದುಕೊಂಡರೂ ಎರಡು 'ಶೇವಿ'ಗೆ ಬರುವುದು ಪ್ರಯಾಸ! ಇನ್ನು ಹಲ್ಲು ಕಿರಿದು ಈ ಬ್ಲೇಡನ್ನು ಅರ್ಧ ತಾಸು ಮಸೆಯಬೇಕು; ದುಡ್ಡು ಹಾಳು; ಸಮಯ ಹಾಳು!"

ಬ್ಲೇಡನ್ನು ಮಸೆಯುವ ಎಸಕವು ಮುಂದುವರಿದಿತು. ಅದು ಹರಿತ ವಾದಾಗ ಗಡ್ಡಕ್ಕೆ ಹಚ್ಚಿದ ಸಾಬೂನು ಒಣಗಿ ಹೋಗಿತ್ತು. ಮತ್ತೆ ಬ್ರಷಿಗೆ ಕೆಲಸ ಕೊಡಬೇಕಾಯಿತು.

"ಕಿತ್ತಳೆ ಹಣ್ಣು, ಕೊಡಗಿನ ಕಿತ್ತಳೇ ಹಣ್ಣು!" ಎಂಬ ಕೂಗು ಬೀದಿಯಿಂದ ಕೋಣೆಯೊಳಕ್ಕೆ ಹರಿದು ಬಂತು. ವೇಣು ಬೀದಿಯ ಕಡೆಗೆ ಕಣ್ಣುಗಳನ್ನು ಹೊರಳಿಸಿದ. ಮಲಬಾರಿನ ಮೊಪಿಳ್ಳೆಯೊಬ್ಬ ಬುಟ್ಟಿ ತುಂಬ

ಕಿತ್ತಳೆ ಹಣ್ಣುಗಳನ್ನು ತನ್ನ ಬೋಳು ಮಂಡೆಯ ಮೇಲೇರಿಸಿಕೊಂಡು ಬೀದಿಯಲ್ಲಿ ಅಲೆಯುತಿದ್ದ. ಮುಂಜಾನೆಯ ಎಳೆ ನೇಸರಿನ ಕದಿರುಗಳು ಹಣ್ಣುಗಳನ್ನು ಮುತ್ತಿಡುತಿದ್ದುವು. ಕೆಂಪು ಹಣ್ಣುಗಳು ಬುಟ್ಟಿಯಲ್ಲಿ ಥಳಥಳಿಸುತಿದ್ದುವು.

ಮಾಪಿಳ್ಳೆ ವೇಣುವಿನ ಕೋಣೆಯ ಮುಂದಿನ ಜಗಲಿಯ ಮೇಲೆ ಬುಟ್ಟಿಯನ್ನಿಳಿಸಿದ ಅವನು ಕೋಣೆಯೊಳಗೊಮ್ಮೆ ಇಣಿಕಿ ನೋಡಿದುದಾಯಿತು. "ಏ ಸಾಮೀ, ಚಿತ್ತಲೆ ಹಣ್ಬೇಕಾ ?" ಎಂಬ ಉಲಿಯು ಆತನ ಕೊರಳಿಂದ ಹೊರಟಿತು. "ಏನು ಬೇಡ ಮಹಾರಾಯ!" ರೇಸರನ್ನು ಕೈಯಲ್ಲಿ ಹಿಡಿದು ಹೊಸ ಕಾಳಗಕ್ಕೆ ಅಣಿಯಾಗುತಿದ್ದ ವೇಣು ನುಡಿದ.

"ಒಲ್ಲೆ ಚಿತ್ತಲೆ ಸಾಮೀ. ಕೊಡಗಿನ ಚಿತ್ತಲೆ. ಇಂತ ಹಣ್ಣ ಬೇರೆಲ್ಲಿಯೂ ಸಿಕ್ಕದು. ಡಜನ್ನಿಗೆ ಒಂದುವರೆ ರೂಪಾಯಿ ಸಾಮೀ."

"ನೋಡು ಕಾಕ, ನಾನು ಗಡ್ಡ ತೆಗೆಯಲು ಹೊರಟಿದೇನೆ. ನಿನ್ನ ಮಾತಿಗೆ ಕಿವಿಗೊಟ್ಟರೆ ರೋಮದೊಡನೆ ನನ್ನ ಕೆನ್ನೆಯ ಮೇಲಿನ ಚರ್ಮವೂ ಕಿತ್ತು ಬಂದೀತು!" ಕೆನ್ನೆಯ ಮೇಲೆ ರೇಸರನ್ನು ಒತ್ತಿ ಎಳೆಯುತಿದ್ದ ವೇಣು ಮಾರ್ನುಡಿದ. "ನನಗೆ ಹಣ್ಣೇನೂ ಬೇಕಾಗಿಲ್ಲ. ನಿನ್ನ ಪಾಡಿಗೆ ಹೋಗು!"

ಮಾಪಿಳ್ಳೆ ಮರುಮಾತಾಡದೆ ಹಣ್ಣುಗಳ ಬುಟ್ಟಿಯನ್ನು ತಲೆಯ ಮೇಲೇರಿಸಿದ. ಅರ್ಧ ಸೇದಿದ ಬೀಡಿಯ ತುಂಡನ್ನು ಜೇಬಿನಿಂದ ತೆಗೆದು ಅವನು ತನ್ನ ತುಟಿಗಳ ಮೇಲಿರಿಸಿದ. ಅದಕ್ಕೆ ಬೆಂಕಿಯನ್ನು ಹಚ್ಚಿ ಅವನು ಸೇದತೊಡಗಿದ. ಅದೇ ಕಟ್ಟಡದಲ್ಲಿದ್ದ ಪಕ್ಕದ ವಸತಿಯೆಡೆಗೆ ಅವನ ಪಾದಗಳು ಹೆಜ್ಜೆಗಳನ್ನಿರಿಸಿದುವು. "ಚಿತ್ತಲೇ ಹಣ್ಣು ಕೊಡಗಿನ ಚಿತ್ತಲೇ ಹಣ್ಣು!" ಎಂಬ ಕೊರಳುಲಿಯು ಗಾಳಿಯಲ್ಲಿ ಪಸರಿಸಿತು.

ಪಕ್ಕದ ಮನೆಯೊಳಗಿಂದ ಮಾಪಿಳ್ಳೆಯ ದನಿಗೇಳಿ ಹಸುಳೆಗಳೆರಡು ಜಗುಲಿಗೆ ಓಡಿ ಬಂದುವು. ಒಂದು ಮಗು ಆರು ವರುಷ ಹರಯದ್ದು ಇನ್ನೊಂದರ ಪ್ರಾಯವು ನಾಲ್ಕರ ಮನೆಯಲ್ಲಿದೆ. ಸೊರಗಿ ಕಡ್ಡಿಯಂತಾದ, ಕೈಕಾಲುಗಳು; ಇಳಿ ಬಿದ್ದ ಕಣ್ಣುಗಳು, ಮೈಯಲ್ಲಿ ಎದ್ದು ಕಾಂಬ ಎಲುಬುಗಳ ಇವು ಆ ಹಸುಳೆಗಳ ಬಾಳ್ವೆ, ಕಲ್ಮುಳ್ಳುಗಳ ಹಾದಿಯನ್ನು ಹಿಡಿದು ಸಾಗುತಿದೆ

ಎಂದು ಅರುಹುತಿದ್ದುವು. ಹರಿದು ಚಿಂದಿಯಾದ ಅರಿವೆಗಳು ಅವರ ಮೈಗಳನ್ನು ಮುಚ್ಚಿದ್ದುವು. ಮನೆಯೊಳಗಿಂದ ಓಡಿಬಂದ ಬಾಲಕರು ಬಾಯೊಳಗೆ ಬೆರಳು ಹಾಕಿ ಕೆಂಪು ಕಿತ್ತಳೆ ಹಣ್ಣುಗಳನ್ನು ನೋಡುತ್ತಾ ನಿಂತುಕೊಂಡರು.

ಮಾಪಿಳ್ಳೆ ಮುಂದಿಟ್ಟ ಹೆಜ್ಜೆಯನ್ನು ಕೀಳದೆ "ಹಣ್ಣು ಬೇಕಾ?" ಎಂದು ಉಸುರಿದ.

"ಅಮ್ಮಾ ಕಿತ್ತಲೇ ಹಣ್ಣು!" ಎಂದು ಒದರುತ್ತಾ ಹಸುಳೆಗಳೆರಡೂ ಮನೆಯೊಳಗೆ ಓಡಿದುವು.

ಕಸಬರಿಕೆಯನ್ನು ಹಿಡಿದು ಮನೆಯನ್ನು ಉಡುಗುವುದರಲ್ಲಿ ನಿರತಳಾಗಿದ್ದ ಗೃಹಿಣಿಯನ್ನು ಮಕ್ಕಳ ಕೂಗು ಉಚ್ಚರಿಸಿತು; ಆಕೆಯನ್ನು ಜಗಲಿಗೆ ಬರುವಂತೆ ಪ್ರೇರಿಸಿತು. ತನ್ನ ಬಲಗೈಯನ್ನು ಅಲಂಕರಿಸಿದ್ದ ಗೃಹಚಾಮರದೊಡನೆ ಆಕೆ ಹೊರಗೆ ಹೆಜ್ಜೆ ಹಾಕಿದಳು. ಹಣ್ಣುಗಳ ಬುಟ್ಟಿಯನ್ನು ತಲೆಯ ಮೇಲೇರಿಸಿ ನಿಂತಿದ್ದ ಮಾಪಿಳ್ಳೆಯ ಆಕೃತಿ ಆಕೆಯ ಕಣ್ಣುಗಳಲ್ಲಿ ಬಿಂಬಿಸಿತು. "ಹಣ್ಬೇಕ ತಾಯಿ? ಒಳ್ಳೆ ಕೊಡಗಿನ ಚಿತ್ತಲೇ ಹಣ್ಣು" ಎಂದು ನುಡಿದ ಆತ.

"ಬೇಡಪ್ಪ, ಹೋಗು." ಎಂದು ಉಸುರಿದಳು ಗೃಹಿಣಿ. ಆಕೆಯ ಎದೆಯಿಂದ ಹೊರಟ ನಿಟ್ಟುಸಿರು ಗಾಳಿಯಲ್ಲಿ ಬೆರೆತಿತು.

ಮಾಪಿಳ್ಳೆ ಮುಂದೆ ಅಡಿಗಳನ್ನು ಇರಿಸಿದ. "ಅಮ್ಮಾ ಹಣ್ಣು. ಕಿತ್ತಳೇ ಹಣ್ಣು ಬೇಕಮ್ಮಾ!" ಎಂಬ ಅಳಲು ಬಾಲಕರ ಕೊರಳುಗಳಿಂದ ಹೊಮ್ಮಿತು.

"ಈಗ ಸುಮ್ಮಗಿರಿ. ಹಣ್ಣು ಚೆನ್ನಾಗಿಲ್ಲ. ಅಣ್ಣ ಪೇಟೆಯಿಂದ ತರುವರು." ತಾಯಿ ಬಾಲಕರನ್ನು ಸಂತೈಸಲು ಯತ್ನಿಸಿದಳು.

"ಸುಳ್ಳು. ಯಾವಾಗ್ಲೂ ನೀನು ಹಿಂಗೇಳ್ತಿ!" ಹಿರಿಯ ಹುಡುಗ ತಾಯಿಯ ನುಡಿಯಲ್ಲಿ ತನಗಿದ್ದ ಅಪನಂಬಿಕೆಯನ್ನು ಹೊರಸೂಸಿದ. "ಅಣ್ಣ ಒಂದು ದಿನವಾದ್ರೂ ಪೇಟೆಯಿಂದ ಹಣ್ಣು ತಂದಿಲ್ಲ. ಈ ಹಣ್ಣೇ ನಮಗೆ ಸಾಕು!"

ಮರಳಿ ಅಳಲು ಹೊರಟುವು ಹಸುಳೆಗಳು.

× × × ×

ಪಕ್ಕದ ವಸತಿಯಲ್ಲಿ ನಡೆದ ಮಾತುಕತೆ ಅಳಲುಗಳು ರೇಸರು ಹಿಡಿದು ಗಡ್ಡ ಬೋಳಿಸುವುದರಲ್ಲಿ ನಿರತನಾಗಿದ್ದ ವೇಣುವಿನ ಕಿವಿಗಳಿಗೆ ಬಿದ್ದುವು. ಹಣ್ಣುಗಳಿಗೋಸುಗ ಬಾಲಕರ ಅಳಲು,–ಹಣ್ಣು ಬೇಡವೆಂದು ಗೃಹಿಣಿಯ ಮಾರ್ನುಡಿ,–ಇವು ಪಕ್ಕದ ಸಂಸಾರದ ಸ್ಥಿತಿಗತಿಗಳ ರೂಪರೇಷೆಗಳನ್ನು ಆತನಿಗೆ ಅರುಹಿದುವು. ಪಕ್ಕದ ಮನೆಯವರಾರು ಎಂಬುದು ವೇಣುವಿಗೆ ತಿಳಿಯದು. ಮನೆಯೊಡೆಯನನ್ನು ನಾಲ್ಕಾರು ಸಲ ಕಂಡಿದ್ದ. ಆತ ಒಳ್ಳೆ ಸಭ್ಯನಂತೆ ತೋರುತ್ತಿದ್ದ. ಗೃಹಿಣಿಯ ದರ್ಶನವಾದರೂ ಅವನಿಗೆ ಒಂದೆರಡು ಬಾರಿ ಆಗಿತ್ತು. ಆಕೆ ಕುಲೀನೆ ಎಂದೂ ಅವನಿಗೆ ಅನಿಸಿತ್ತು. ಬೇರೇನನ್ನು ತಿಳಿಯದಿದ್ದರೂ ಅವರ ಸಂಸಾರ ಬಡತನದ್ದು ಎಂಬುದನ್ನು ವೇಣು ಅರಿತಿದ್ದ. ಈ ಯುದ್ಧಕಾಲದಲ್ಲಿ ಅರೆ ಹೊಟ್ಟೆಯಿಂದ ದಿನಗಳನ್ನು ದೂಡಬೇಕಾದ ದೌರ್ಭಾಗ್ಯವನ್ನು ಪಡೆದ ಅನೇಕ ಸಂಸಾರಗಳಲ್ಲಿ ಇದೂ ಒಂದು ಎಂದು ಆತ ಎಣಿಸಿದ್ದ.

ಎಳೆಯರ ಅಳಲು ಇನ್ನೂ ನಿಂತಿರಲಿಲ್ಲ. ಅದು ಗಾಳಿಯಲ್ಲಿ ಹರಿದು ಬಂದು ವೇಣುವಿನ ಕಿವಿಗಳಲ್ಲಿ ಮಾರ್ದನಿಗೊಡುತಿದ್ದಿತು. ಅವನ ಮನಸ್ಸಿನ ಅಂತರಾಳದಲ್ಲಿ ಹಲವು ವಿಲಕ್ಷಣ ಭಾವಗಳು, ಸಂಜೆಯಾಗಲು ಬಾನಿನಲ್ಲಿ ಮೂಡುವ ಚಿಕ್ಕೆಗಳಂತೆ ಮಿನುಗಿದುವು. ಅವನ ಮನಸ್ಸನ್ನು ಆವರಿಸಿದ್ದ ಮರವೆಯ ಜವನಿಕೆಯು ಕುಸಿದುಬಿದ್ದಿತು. ಕಳೆದುಹೋದ ದಿನಗಳ ಒಂದು ಅನುಭವದ ನೆನಪು ಚಿತ್ತದಲ್ಲಿ ತೇಲಿತು; ಮುಂಜಾನೆ ಮೂಡಿದ ಕಿರುಬೆಳ್ಳಿಯಂತೆ ಅದು ಅಲ್ಲಿ ಬೆಳಗಿತು.

ವೇಣುವಿನ ಜೀವವು ಗತಜೀವನದ ಸ್ಮರಣೆಗಳ ತೆಕ್ಕೆಯಲ್ಲಿ ತೊಳಲಿತು. ಕಣ್ಣುಗಳಿಂದ ಎರಡು ಕಂಬನಿಗಳು ಮಿಡಿದುವು. ಎದೆಯಿಂದ ಬಿಸಿಯುಸಿರು ಹೊರಸೂಸಿತು. ಕೈ ರೇಸರನ್ನು ಪಕ್ಕದ ಮುರುಕು ಮೇಜದ ಮೇಲೆ ಇರಿಸಿತು. ಅವನ ಕಾಲುಗಳು ಬಾಗಿಲ ಕಡೆಗೆ ಸರಿದುವು. ಬೀದಿಯನ್ನು ಆತ ಇಣಿಕಿ ನೋಡಿದ. ಕಿತ್ತಳೇ ಹಣ್ಣು ತಂದ ಮಾಪಿಳ್ಳೆ ಹತ್ತು ಮಾರು ಮುಂತೆರಳಿದ್ದ. ವೇಣು ಮಾಪಿಳ್ಳೆಯನ್ನು ಕೈ ತಟ್ಟಿ ಕರೆದ. "ಏ ಮಾಪಿಳ್ಳೆ, ಕಿತ್ತಳೇ ಹಣ್ಣು. ಇತ್ತ ಬಾ!" ಎಂದು ಕೂಗಿ ಹೇಳಿದ. ಆತನ ಕರೆ

ಮಾಪಿಳ್ಳೆಗೆ ಕೇಳಿಸಿತು. ಅವನು ಹಿಂದಿರುಗಿ ನೋಡಿದಾಗ ವೇಣು ತನ್ನನ್ನು ಕೈಮಾಡಿ ಕರೆಯುತಿದ್ದುದು ಕಂಡು ಬಂತು.

"ಏಕೆ ಸಾಮೀ ನನ್ನ ಕರಿದ್ರಿ?" ಮಾಪಿಳ್ಳೆ ತಲೆಯ ಮೇಲಿದ್ದ ಬುಟ್ಟಿಯನ್ನು ಇಳಿಸುತ್ತಾ ಉಸುರಿದ. "ಏನ್ ನಿಮ್ಗೆ 'ಹಣ್ಬೇಕಾ?"

"ಆಹುದು. ಕೆಲವು ಹಣ್ಣುಗಳು ಬೇಕು." ವೇಣು ತಲೆಯನ್ನು ಅಲುಗಿಸಿದ. "ಬೆಲೆಯೇನು?"

"ಆಗ್ಗೆ ಹೇಳ್ಲಿಲ್ವಾ ಡಜನ್ಗೆ ಒಂದುವರೆ ರೂಪಾಯಿ."

"ಒಂದು ರೂಪಾಯಿಗೆ ಕೊಡುತ್ತೀಯಾ?"

"ಇಲ್ಲ. ಒಂದೂವರೆಗೆ ಒಂದು ದಂಮುಡಿ ಕಡಿಮೆ ಇಲ್ಲ." ಮಾಪಿಳ್ಳೆ ಹೇಳಿದ. "ಸುಮ್ಮನೆ ಚೌಕಸಿ ಮಾಡಬೇಡಿ. ಹೊತ್ತು ಹಾಳಾಗ್ತೆ."

"ಆಗಲಿ. ನೀನು ಹೇಳಿದ ಕ್ರಯಕ್ಕೇ ಕೊಡು. ಒಂದು ಡಜನ ಒಳ್ಳೆ ಹಣ್ಣುಗಳನ್ನು."

ಮಾಪಿಳ್ಳೆ ಹಣ್ಣುಗಳನ್ನು ಎಣಿಸಿ ಜಗಲಿಯ ಮೇಲಿರಿಸತೊಡಗಿದ. ಹಣ್ಣುಗಳನ್ನು ಕಂಡ ಪಕ್ಕದ ಮನೆಯ ಬಾಲಕರು ತಮ್ಮ ಕೊರಳುಲಿಯ ಶಂಖನಾದವನ್ನು ನಿಲ್ಲಿಸಿದರು. ಅವರು ಹಣ್ಣುಗಳಿದ್ದೆಡೆಗೆ ಓಡಿ ಬಂದರು; ಬಾಯಿಗಳಲ್ಲಿ ಬೆರಳನ್ನು ಇರಿಸಿ ಅವರು ಹಣ್ಣುಗಳನ್ನೇ ನೋಡಿದರು. ವೇಣು ತಮಗೆ ಹಣ್ಣುಗಳನ್ನು ದಯಪಾಲಿಸುವನೋ ಎಂಬ ಆಸೆಯ ನೋಟ ಅವರ ಕಂಗಳಲ್ಲಿ ತೇಲುತಿದ್ದಿತು.

ಮಾಪಿಳ್ಳೆ ಒಂದು ಡಜನ್ ಹಣ್ಣುಗಳನ್ನು ಎಣಿಸಿ ವೇಣುವಿನ ಮುಂದಿರಿಸಿದ. "ಇಗೊಳ್ಳಿ ಹಣ್ಣು!" ಎಂದು ಅವನು ಹೇಳಿದ. ವೇಣು ಎರಡು ಹಣ್ಣುಗಳನ್ನು ತೆಗೆದು ಆಸೆಯ ಕಣ್ಣುಗಳಿಂದ ನೋಡುತ್ತಿದ್ದ ಎಳೆಯರ ಕೈಗಳಲ್ಲಿ ಇರಿಸಿದ. ಹಣ್ಣು ದೊರಕಲು ಬಾಡಿದ್ದ ಅವರ ಮೊಗಗಳು ಅರಳಿದುವು. ಬೆಳಗಿನ ತಂಗಾಳಿ ತೀಡಲು ತನ್ನ ಅಂತರಂಗದ ಸೌರಭವನ್ನು ಗಾಳಿಯಲ್ಲಿ ಬೆರಸುವ ಪನ್ನೀರು ಗುಲಾಬಿಗೆ ಎಣೆಯಾಗಿದ್ದುವು ಆ ಮುದ್ದು ಮೊಗಗಳು.

ವೇಣು ಇನ್ನೊಂದು ಹಣ್ಣನ್ನು ಸುಲಿದು ಪಾಲುಮಾಡಿ ಎಳೆಯರ ಕೈಗಳಿಗೆ ನೀಡಿದ. ಅವರು ಅದನ್ನು ತೆಗೆದುಕೊಂಡು ಸವಿಯತೊಡಗಿದರು.

ಕೋಣೆಯೊಳಗೆ ತೆರಳಿ ವೇಣು ಹಣವನ್ನು ತಂದು ಮಾಪಿಳ್ಳೆಗೆ ಹಣ್ಣುಗಳ ಬೆಲೆಯನ್ನು ಕೊಟ್ಟ. ಮಾಪಿಳ್ಳೆ ದುಡ್ಡನ್ನು ತನ್ನ ಕಿಸೆಯೊಳಗೆ ಸೇರಿಸಿದ. ಆತ ಬುಟ್ಟಿಯನ್ನು ತಲೆಯ ಮೇಲೇರಿಸಿಕೊಂಡುದಾಯಿತು. ಮುಂದೆ ಸಾಗಿದುವು ಅವನ ಕಾಲುಗಳು.

ವೇಣು ಮರಳಿ ಬಾಲಕರ ಕೈಗಳ ಮೇಲೆ ಎರಡೆರಡು ಹಣ್ಣುಗಳನ್ನು ಇರಿಸಿದ. ಅವನ ಕೊರಳಿಂದ ಒಲುಮೆಯುಲಿ ಹೊಮ್ಮಿತು. "ನೀವಿನ್ನು ಅಳಬೇಡಿ. ಈ ಹಣ್ಣುಗಳನ್ನು ತಿನ್ನಿ. ನಿಮಗೆ ಹಣ್ಣು ಬೇಕಾದಾಗ ನನಗೆ ತಿಳಿಸಿ."

ಎಳೆಯರ ಕೊರಳುಗಳಿಂದ ಮಾರುಲಿಯು ದನಿಗೊಳ್ಳಲಿಲ್ಲ. ಆದರೆ ತಿಳಿಯಾದ ಅವರ ಕಂಗಳು ಅವರ ಎದೆಯೊಳಗೆ ಉಕ್ಕುತಿದ್ದ ಕೃತಜ್ಞತೆಯನ್ನು ವೇಣುಗೆ ಅರುಹಿದುವು. ಅವರು ಎರಡು ಕೈಗಳಲ್ಲಿಯೂ ಹಣ್ಣುಗಳನ್ನು ಹಿಡಿದು ಮನೆಯೊಳಕ್ಕೆ ಓಡಿದರು. ಮನೆಯೊಳಗಿಂದ ಅವರ ಮಾತಿನ ಮೊಳಗು ವೇಣುವಿನ ಕಿವಿಗಳಲ್ಲಿ ಬಿದ್ದಿತು. "ಅಮ್ಮಾ, ಹಣ್ಣು, ಹಣ್ಣು, ಪಕ್ಕದ ಮನೆಯ ಮಾವ ಕೊಟ್ಟರು!"

ಸಂತಸದ ಉಸಿರೊಂದು ವೇಣುವಿನ ಎದೆಯಿಂದ ಹೊರಟಿತು. ತನ್ನ ಬಾಳುವೆಯಲ್ಲಿ ಆವುದೋ ಒಂದು ಮಹತ್ಕಾರ್ಯವನ್ನು ಗೈದಂತೆ ಅವನಿಗೆ ಅನಿಸಿತು. ಉಳಿದ ಏಳು ಹಣ್ಣುಗಳನ್ನು ಅವನು ತನ್ನ ಕೋಣೆಯೊಳಗೆ ಇರಿಸಿದ. ಅವನ ಕೈ ಪುನಃ ರೇಸರಿನಿಂದ ಗಡ್ಡ ಬೋಳಿಸತೊಡಗಿದವು.

× × × ×

ವೇಣು ಸ್ನಾನವನ್ನು ಪೂರೈಸಿ ಒಂದು ಬಟ್ಟೆಗಳನ್ನು ತೊಟ್ಟುಕೊಳ್ಳುತಿದ್ದ. ಆಗ ಪಕ್ಕದ ವಸತಿಯ ರಾಯರು ಅವನ ಬಾಗಿಲಿಗೆ ಬಂದರು. ಅವನ ಕಣ್ಣುಗಳು ರಾಯರ ಮೊಗದ ಕಡೆಗೆ ಚಲಿಸಿದುವು. ತೆಳ್ಳಗೆ ಉದ್ದವಾದ ಶರೀರ; ಉದ್ದವಾದ ಮೊಗ; ಬತ್ತಿದ ಕೈಕಾಲುಗಳು ಇಳಿಬಿದ್ದ ಕಣ್ಣುಗಳು ಚಿಂತೆಯ ಕಿಡಿಗಳನ್ನು ಚೆಲ್ಲುತಿದ್ದುವು. ಒಂದೆರಡು ಕಡೆ ಹರಿದ ಪಂಜೆಯನ್ನು ಅವರು ಸೊಂಟಕ್ಕೆ ಸುತ್ತಿದ್ದರು. ತುಂಡು ಕೈಗಳ ಜುಬ್ಬ ಅವರ ಮೈಯನ್ನು ಮುಚ್ಚಿದ್ದಿತು. ಅವರ ಹಿಂದೆ ಅರ್ಧ ಸುಲಿದ ಕಿತ್ತಳೆ ಹಣ್ಣುಗಳನ್ನು ಕೈ

ಗಳಲ್ಲಿ ಹಿಡಿದಿದ್ದ ಬಾಲಕರು ಬೆಂಗಾವಲಿಗಿದ್ದರು. ಎಳೆಯರಲ್ಲಿ ಹಿರಿಯ ತೊದಲು ಮಾತುಗಳಲ್ಲಿ ಹೇಳಿದ. "ನೋಡಣ್ಣ, ಇದ್ರೇ ಪಕ್ಕದ್ಮನೆ ಮಾವ. ನಮಗೆ ಹಣ್ಣು ಕೊಟ್ಟವ್ರು"

"ಬನ್ನಿ ಕುಳಿತುಕೊಳ್ಳಿರಿ." ಜುಬ್ಬವನ್ನು ತೊಟ್ಟುಕೊಳ್ಳುತಿದ್ದ ವೇಣು ರಾಯರಿಗೆ ಮೇಜದ ಪಕ್ಕದಲ್ಲಿದ್ದ ಕುರ್ಚಿಯನ್ನು ತೋರಿಸಿದ.

ರಾಯರು ಕೋಣೆಯೊಳಗೆ ಬಂದರು. ವೇಣು ತೋರಿಸಿದ ಕುರ್ಚಿಯ ಮೇಲೆ ಅವರು ಕುಳಿತರು. ಹುಡುಗರು ಅಂಗರಕ್ಷಕರಂತೆ ರಾಯರ ಎಡ ಬಲದಲ್ಲಿ ನಿಂತರು. ಅವರು ತಮ್ಮ ಬೊಗಸೆಗಣ್ಣುಗಳನ್ನು ಒಮ್ಮೆ ತಂದೆಯ ಮೊಗದ ಕಡೆಗೂ, ಇನ್ನೊಮ್ಮೆ ವೇಣುವಿನ ಮೊಗದತ್ತಲೂ ಹೊರಳಿಸುತ್ತಿದ್ದರು. ವೇಣು ಮೌನವಾಗಿರುವುದನ್ನು ಕಂಡು ರಾಯರೇ ಮಾತಿಗೆ ಪ್ರಾರಂಭಿಸಿದರು. "ನೀವು ನಮ್ಮ ಹುಡುಗರಿಗೆ ಹಣ್ಣು ತೆಗೆದು ಕೊಟ್ಟಿರಂತೆ."

"ಅಹುದು." ಮೇಜದ ಮೇಲಿದ್ದ ಹಣಿಗೆಯನ್ನು ತೆಗೆದುಕೊಳ್ಳುತ ಲಿದ್ದ ವೇಣು ಉಸುರಿದ. "ನಾವು ಅವರಿಗೆ ಹಣ್ಣು ಕೊಡಬಾರದೇ?"

"ನಮ್ಮ ಮಕ್ಕಳ ಸಲುವಾಗಿ ನೀವೇಕೆ ತೊಂದರೆ ತೆಗೆದುಕೊಂಡಿರಿ?" ರಾಯರು ಪ್ರಶ್ನಿಸಿದರು. "ಈ ತುಂಟರು ಬಂದು ನಿಮ್ಮನ್ನು ಪೀಡಿಸಿದರೆಂದು ತೋರುತ್ತದೆ."

"ಇಲ್ಲ. ಹಣ್ಣುಗಳಿಗಾಗಿ ಆಸೆ ಪಡುವುದು ಮಕ್ಕಳ ಸ್ವಭಾವ." ವೇಣು ನುಡಿದ. "ಮಾಪಿಳ್ಳೆ ಹಣ್ಣುಗಳನ್ನು ತರುತಿದ್ದಾಗ ಮಕ್ಕಳು ಅಳ ಹತ್ತಿದರು. ಅವರಿಗೆ ನಾನು ನಾಲ್ಕು ಹಣ್ಣು ತೆಗೆದುಕೊಟ್ಟೆ."

"ಇನ್ನು ಮುಂದೆ ನಮ್ಮ ಮಕ್ಕಳಿಗೆ ಹಣ್ಣು ಹಂಪಲಗಳನ್ನು ನೀವು ತೆಗೆದು ಕೊಡಬೇಡಿ."

"ಏಕೆ?" ಎಂದು ವಿಸ್ಮಯ ದೃಷ್ಟಿಯನ್ನು ಬೀರಿದ ವೇಣು.

"ನಾವು ಬಡವರು. ಈ ದಿನಗಳಲ್ಲಿ ಹಣ್ಣು ಹಂಪಲಗಳು ನಮ್ಮ ಕೈಗೆ ನಿಲುಕವು. ನೀವು ಈ ತುಂಟರಿಗೆ ಹಣ್ಣು ತಿಂಡಿಗಳನ್ನು ತೆಗೆದು ಕೊಟ್ಟು ನನ್ನ ಹೆಗಲ ಮೇಲೆ ಉಪಕಾರದ ಹೊರೆಯನ್ನು ಹೊರಿಸಬೇಡಿ."

"ರಾಯರೇ, ಯಾವ ಉಪಕಾರವನ್ನೂ ನಾನು ನಿಮ್ಮ ಮೇಲೆ

ಹೊರಿಸುತಲಿಲ್ಲ. ಎಳೆಯರೆಂದರೆ ದೇವರ ಮಕ್ಕಳು. ಅವರನ್ನು ಪ್ರೀತಿಸಲು ನನಗೂ ಹಕ್ಕಿದೆ. ನೀವು ಬೇರಿನ್ನೇನನ್ನೂ ತಿಳಿದುಕೊಳ್ಳಬೇಡಿ."

ರಾಯರ ತುಟಿಗಳಿಂದ ಮಾತು ಹೊರಡಲಿಲ್ಲ. ಒಂದು ನಿಮಿಷದತನಕ ಅವರ ಕಣ್ಣುಗಳು ವೇಣುವಿನ ಮೊಗದ ಮೇಲೆ ನೆಲಿಸಿದ್ದುವು.

"ಈ ಹಣ್ಣುಗಳ ಕಾರಣದಿಂದ ನಿಮ್ಮ ಪರಿಚಯವಾದರೂ ಆಯಿತಲ್ಲ!" ವೇಣು ಮಾತಿನ ಹೊನಲನ್ನು ಬೇರೊಂದು ಕಾಲುವೆಗೆ ತಿರಿಗಿಸಿದ. "ನೀವಾರು ಎಂದು ಪರಿಚಯುವನ್ನು ಅರುಹಿದರೆ ತುಂಬಾ ಉಪಕಾರವೆನಿಸುವುದು"

"ನನ್ನ ಪರಿಚಯುವೇನು?" ರಾಯರೊಂದು ನಿಟ್ಟುಸಿರನ್ನು ಬಿಟ್ಟರು. "ಹೆಸರು ಶ್ಯಾಮಸುಂದರನೆಂದು. ಹಿಂದಿನ ಜನ್ಮದಲ್ಲಿ ಗೈದ ಆವುದೋ ಒಂದು ಹಿರಿಯ ಪಾಪದ ಫಲವಾಗಿ ಈ ಜನ್ಮದಲ್ಲಿ ಒಬ್ಬ ಉಪಾಧ್ಯಾಯನಾಗಿದೇನೆ.

"ಏಕೆ ಅಧ್ಯಾಪಕನಾಗುವುದು ದೊಡ್ಡ ಪಾಪದ ಫಲವೆಂದು ಹೇಳು ತೀರಿ?" ವೇಣು ನಡುವೆ ಬಾಯಿಹಾಕಿದ. "ಕಸುಬುಗಳಲ್ಲೆಲ್ಲಾ ಉತ್ತಮ ವಾದುದು ಅಧ್ಯಾಪಕ ವೃತ್ತಿಯೆಂದು ಎಲ್ಲರೂ ನುಡಿಯುವರಲ್ಲ! ಮುಂದಿನ ಜನಾಂಗವನ್ನು ರಚಿಸುವ ನಿಮ್ಮ ಹೊಣೆಯೇನು ಸಾಮಾನ್ಯವಾದುದೇ?"

"ನಮ್ಮ ಹೆಗಲ ಮೇಲೆ ಇರಿಸಿದ ಹೊಣೆಯೇನೊ ಹಿರಿದು. ಆದರೆ ಎಲ್ಲವೂ ಬರಿ ಸೋಗು! ಈ ಪ್ರಪಂಚದಲ್ಲಿ ಯಾರಿಗೂ ಬೇಡವೆನಿಸಿದ ವ್ಯಕ್ತಿ ಯೊಬ್ಬನಿದ್ದರೆ, ಆತ ಉಪಾಧ್ಯಾಯ. ಅವನ ಬದುಕಿನ ಬಗ್ಗೆ ಯಾರೂ ಆಲೋಚಿಸುವುದಿಲ್ಲ." ರಾಯರು ಜಿಗುಪ್ಸೆಯ ದನಿಯಲ್ಲಿ ನುಡಿದರು." ಹಿರಿಯ ಹೊಣೆಯನ್ನೇನೋ ಅವನ ಹೆಗಲಮೇಲಿರಿಸಿದಾರೆ. ಆದರೆ ಅವನಿಗೆ ಕೊಡುವ ಸಂಬಳ ಉಪಜೀವನಕ್ಕೆ ಸಾಕೆನಿಸುವುದಿಲ್ಲ. ಹತ್ತು ವರುಷ ಕಾಲ ಕೆಲಸ ಮಾಡಿದ ನನಗೆ ಈಗ ದೊರೆಯುವ ಸಂಬಳ ಇಪ್ಪತ್ತೈದು ರೂಪಾಯಿ ಗಳು. ಈ ಹಣದಿಂದ ಈ ಬರಗಾಲದ ದಿನಗಳಲ್ಲಿ ನಾಲ್ಕು ಜೀವಗಳು ಹೊಟ್ಟೆ ಹೊರೆವುದು ಹೇಗೆಂದು ನೀವೇ ಹೇಳಿ."

ವೇಣು ಮಾರ್ನುಡಿಯಲಿಲ್ಲ. ರಾಯರ ಮಾತುಗಳು ಅವನ ಮೆದುಳನ್ನು ಕೆಣಕಿದುವು.

"ನಮ್ಮ ಪುರಾಣವನ್ನು ಹೇಳಿ ಪ್ರಯೋಜನವಿಲ್ಲ." ವೇಣು ಉತ್ತರಿಸ ದಿರಲು ರಾಯರ ಮಾತುಗಳು ಮುಂದುವರಿದುವು. "ಬಿಕ್ಕೆಯನ್ನು ಬೇಡುವ

ತಿರುಕನ ಪಾಡಾದರೂ ನಮ್ಮದಕ್ಕಿಂತ ವಾಸಿ. ಯಾವುದೋ ಒಂದು ಆದರ್ಶದ ಕನಸಿಗೆ ಗಂಟು ಬಿದ್ದು ಈ ಕಸುಬಿಗೆ ಕೈಹಾಕಿದೆ. ಈಗ ಅದರ ಫಲವನ್ನು ಉಣುತಿದೇನೆ. ನನ್ನ ಜತೆಗಾರರು ಬೇರೆ ಬೇರೆ ಉದ್ಯೋಗಗಳಲ್ಲಿ ಪ್ರವೇಶಿಸಿ ಕೈ ತುಂಬಾ ಹಣ ಗಳಿಸುತಿದಾರೆ! ''

'' ಈ ಪ್ರಪಂಚ ಬಹು ವಿಚಿತ್ರವಾದುದು. " ವೇಣುವಿನ ಕೊರಳೊಳಗಿಂದ ಸಮಾಧಾನೋಕ್ತಿಯು ಹೊರಟಿತು. ದುಡಿಯುವವರಿಗೆ, ಸತ್ಯನ್ಯಾಯಗಳ ಹಾದಿಯನ್ನು ಹಿಡಿಯುವವರಿಗೆ ಈ ಪ್ರಪಂಚ ಒಂದು ಮುಳ್ಳಿನ ಹಾಸಿಗೆ! "

'' ನೀವು ಯಾರು ಎಂಬುದನ್ನು ತಿಳಿಸಲೇ ಇಲ್ಲವಲ್ಲ ! " ಎಂದರು ರಾಯರು.

'' ನನ್ನ ಹೆಸರು ವೇಣು ಗೋಪಾಲನೆಂದು. ನಾನೊಬ್ಬ ಟ್ರಾವಲಿಂಗು ಏಜೆಂಟು. ನಾಲ್ಕಾರು ಕಂಪೆನಿಗಳಿಗೆ ಗಿರಾಕಿಗಳನ್ನು ದೊರಕಿಸಿಕೊಡುವುದೇ ನನ್ನ ಕೆಲಸ. ತಕ್ಕ ಮಟ್ಟಿಗೆ ಸಂಪಾದನೆಯಾಗುತಿದೆ. ನನ್ನ ಊರು ಮಂಗಳೂರು. ಈ ಊರಲ್ಲಿ ಇನ್ನೊಂದು ಹದಿನೈದು ದಿನಗಳಿರುವೆ. ''

'' ನಿಮ್ಮ ಸಮಯವನ್ನು ಹಾಳು ಮಾಡಿದೆ. '' ರಾಯರು ಕುರ್ಚಿಯಿಂದೆದ್ದರು.

'' ಹಾಳೇನೂ ಆಗಿಲ್ಲ. ನಿಮ್ಮ ಪರಿಚಯವಾದರೂ ನನಗಾಯಿತಲ್ಲ! '' ಎಂದು ವೇಣು ರಾಯರನ್ನು ಬೀಳ್ಕೊಟ್ಟ.

## ( ೨ )

'' ಮೇಸ್ಟ್ರೇ! ಮೇಸ್ಟ್ರೇ '' ಎಂಬ ಕೂಗು ಹಾಸಿಗೆಯ ಮೇಲೆ ಅರೆನಿದ್ದೆಯಲ್ಲಿದ್ದ ವೇಣುವನ್ನು ಎಚ್ಚರಿಸಿತು. ಅವನು ಮಲಗಿದಲ್ಲಿಂದ ಎದ್ದು ಬಾಗಿಲ ಕಡೆಗೆ ಇಣಿಕಿ ನೋಡಿದ. ಉಪಾಧ್ಯಾಯರ ಮನೆಯ ಮುಂದೆ ವ್ಯಕ್ತಿಯೊಂದು ನಿಂತು ಅವರನ್ನು ಕೂಗುತಿದ್ದಿತು. ಆತ ಸೊಂಟಕ್ಕೆ ಸುತ್ತಿದುದು ಒಂದು ಹೊಲಸಾದ ಪಂಜೆ; ಮೈಮೇಲೊಂದು ಕೋಟು; ತಲೆಯ ಮೇಲೆ ಒಂದು ಕೊಳೆಯಾದ ಮುಂಡಾಸು. ಅವನ ನಿಲವು ಆತನೊಬ್ಬ ಸಾಲಕೊಟ್ಟವನೆಂಬುದನ್ನು ಗೋಪುಗೆ ಅರುಹಿತು. ಸಾಲಿಗನು ಕಡ ವಸೂಲಿಗೋಸುಗ ಶ್ಯಾಮಸುಂದರರಾಯರ ಮನೆಗೆ ಬಂದಿದ್ದ.

" ಮೇಸ್ಟ್ರೇ, ಮೇಸ್ಟ್ರೇ ! " ಎಂಬ ಕೂಗು ಬೈರಂಗಿ ಕೊರೆದಂತೆ ಆತನ ಕೊರಳಿಂದ ಹೊರಟಿತು. ಸಾಲಿಗನ ಕರೆ ಮನೆಗೆಲಸದಲ್ಲಿ ನಿರತಳಾಗಿದ್ದ ಗೃಹಿಣಿಯನ್ನು ಜಗುಲಿಗೆ ಕರೆತಂದಿತು.

" ಯಾರದು ? " ತಲೆಯನ್ನು ಹೊರಚಾಚಿ ಆಗಂತುಕನನ್ನು ನಿಟ್ಟಿಸಿದಳು ಉಪಾಧ್ಯಾಯರ ಸಹಧರ್ಮಿಣಿ.

" ನಾನು ನಾಗಪ್ಪ ಶೆಟ್ಟಿ " ಸಾಲಿಗನು ಒರಟು ಸ್ವರದಲ್ಲಿ ನುಡಿದ. " ಮೇಸ್ಟ್ರು ಮನೇಲಿಲ್ವೇ ? "

" ಇಲ್ಲ; ಹೊರಗೆ ಹೋಗಿದಾರೆ " ಎಂದಳು ಮನೆಯಾಕೆ.

" ನಾನು ಬಂದಾಗಲೆಲ್ಲ ಅವ್ರು ಮನೇಲಿರೋದಿಲ್ಲ. ಎಲ್ಲೋ ತಲೆ ಮರ್ಸಿಕೋತಾರೆ. "

" ಏನಾಗಬೇಕಿತ್ತು ನಿಮಗೆ ? "

"ಮೇಸ್ಟ್ರು ನನ್ಗೆ ಸಾಮಾನಿನ ಬಾಬ್ತು ನಲವತ್ರುಪಾಯಿ ಹನ್ನೆರಡಾಣೆ ಕೊಡಲಿದೆ. " ನಾಗಪ್ಪ ಶೆಟ್ಟಿ ನುಡಿದ. ಕಳೆದ ಒಂದು ತಿಂಗಳಿಂದ ಅವ್ರು ನನಗೆ ಒಂದ್ಕಾಸೂ ಕೊಟ್ಟಿಲ್ಲ. ಅವ್ರು ಬಂದ್ರೆ ಹೇಳಿ. ನಾಳೆ ಸಂಜೆಯೊಳಗೆ ಹಣ ಸಲಿಸದಿದ್ರೆ ನಾನು ಕೋರ್ಟಿಗೆ ಹೋಗಬೇಕಾಗ್ತೆ. "

" ಅವರು ಬಂದ ಮೇಲೆ ಹೇಳುವೆನು " ಎಂದು ಗೃಹಿಣಿ ಮಾರ್ನುಡಿದಳು.

" ಒಳ್ಳೇದು. ಮೇಸ್ಟ್ರಿಗೆ ಚೆನ್ನಾಗಿ ಹೇಳಿ. ನಾಳೆ ತಪ್ಪದೆ ಅಂಗಡಿಗೆ ಹಣ ತಲುಪಿಸಲಿ " ಎಂದು ನುಡಿದು ನಾಗಪ್ಪ ಶೆಟ್ಟಿ ಅಲ್ಲಿಂದ ತೆರಳಿದ.

ಈ ಮಾತುಕತೆಗಳೆಲ್ಲ ವೇಣುವಿನ ಕಿವಿಗಳಲ್ಲಿ ಬಿದ್ದುವು. ಹೊಸದೊಂದು ಆಪತ್ತು ಮಾಸ್ತರರನ್ನು ಇದಿರು ನೋಡುತಿದೆ ಎಂದು ಆತನಿಗೆ ಅರಿವಾಯಿತು. ಪಾಪ! ಬದುಕು ಎಂದರೆ ಅವರ ಪಾಲಿಗೆ ಒಂದು ಮುಳ್ಳಿನ ಹಾಸಿಗೆ ! ಇತರರಂತೆ ಅವರೂ ದುಡಿಯುತಿದಾರೆ! ಆದರೆ ಅವರ ಕುಟುಂಬದ ಹಸಿವು ತಣಿಯಲೊಲ್ಲದು. ಅರೆಹೊಟ್ಟೆ ಒಪ್ಪತ್ತು ಊಟಗಳಿಂದ ತೃಪ್ತಿಯನ್ನು ತಳೆಯಬೇಕು; ಸಾಲಿಗರ ಕಾಟಕ್ಕೆ ತಮ್ಮ ಎದೆಯನ್ನು ಒಡ್ಡಬೇಕು. ಹೀಗೇಕೆ ಎಂಬ ಪ್ರಶ್ನೆ ವೇಣುವಿನ ಚಿತ್ತದಲ್ಲಿ ತೇಲಿತು.

ವೇಣುವಿನ ಮನಃಪಟಲದಲ್ಲಿ ಕಳೆದು ಹೋದ ದಿನಗಳ ನೆನಪೊಂದು ಮೂಡಿತು. ಎಂಟು ವರುಷಗಳ ಹಿಂದಿನ ಸ್ಮರಣೆಯದು. ಅವನು ಅಂದು

ತನ್ನ ಮುದ್ದು ಮಡದಿ ರಮೆಯೊಡನೆ ದಿನಕಳೆಯುತಿದ್ದ. ಅವರ ಒಲವಿನ ಬಳ್ಳಿ ಪಲ್ಲವಿಸಿತು. ಆ ಲತೆಯು ಹೂತು, ಹೊಸದೊಂದು ಮುಗುಳನ್ನು ನೀಡಿತು. ಅವರ ಎದೆಯ ಒಲವೇ ಮೈತಳೆದಂತೆ ಮುದ್ದು ಮೋಹನ ಈ ಇಳೆಗೆ ಬಂದ. ಅವರ ಬಾಳುವೆಯಲ್ಲಿ ನಲಿವಿನ ಹೂಬಿಸಿಲನ್ನು ತುಂಬಿದ.

ಆದರೆ ಕಾಲಕ್ಕೆ ಕರುಣೆಯಿಲ್ಲ. ಮಾನವನ ಎದೆಯಲ್ಲಿ ಮೂಡಿದ ಹೊಂಗನಸನ್ನು, ಅವನ ನಲವನ್ನು ನೋಡಿ ಅದು ಅಸೂಯಾಕುಲವಾಗುತ್ತದೆ. ಆಗ ಮನುಷ್ಯನ ಎಡೆ ಕಾಲಿನ ಪದಗತಿಗೆ ಸಿಲುಕಿ ನುಚ್ಚುನೂರಾಗುತ್ತದೆ. ಮಾನವನೆಂದರೆ ವಿಧಿಯ ಕೈಯಲ್ಲಿಹ ಆಟದ ಗೊಂಬೆ. ಆರು ವರುಷಗಳ ಹಿಂದೆ ವಿಧಿಯು ರಮೆ ಮತ್ತು ಮೋಹನರನ್ನು ತನ್ನಿಂದ ಅಗಲಿಸಿತು. ಅವರ ಬಾಳುವೆಯು ಕಾಲನ ರೌದ್ರಪದಗತಿಗೆ ಸಿಲುಕಿ ನುಚ್ಚುನೂರಾಯಿತು! ಅವರನ್ನು ಸೆಳೆದೊಯ್ದು ವಿಧಿ ತನ್ನನ್ನು ಮಾತ್ರ ಉಳಿಸಿದೆ!

ವೇಣುವಿನ ಎದೆಯಿಂದ ನಿಟ್ಟುಸಿರೊಂದು ಹೊರಟಿತು. ಬೇಸರದ ಕಾರ್ಮುಗಿಲು ಅವನ ಮನವನ್ನು ಮುಸುಕಿದ್ದಿತು. ಪೇಟೆಯಲ್ಲಿ ಅಲೆದು ಮನದ ದುಗುಡವನ್ನು ಕಳೆಯುವುದು ಲೇಸು ಎಂದು ಅವನು ಆಲೋಚಿಸಿದ. ಹಾಗೆಯೇ ಕೋಟನ್ನು ತೊಟ್ಟುಕೊಂಡು ಅವನು ಪೇಟೆಯ ಕಡೆಗೆ ಹೊರಟ.

ವೇಣು ಕೋಣೆಯಿಂದ ಹೊರಬಂದಾಗ ಮಾಸ್ತರರ ಹಿರಿಯ ಮಗ ಜಗಲಿಯ ಮೇಲೆ ನಿಂತಿದ್ದ. ಅವನ ಕಣ್ಣುಗಳು ಅಚ್ಚರಿಯಿಂದ ವೇಣುವನ್ನು ನೋಡಿದವು. "ಮಾವ, ಎಲ್ಲಿಗೆ ಹೋಗುವುದು?" ಎಂದು ಪೋರ ವೇಣುವನ್ನು ಪ್ರಶ್ನಿಸಿದ.

"ಪೇಟೆಗೆ" ಎಂದು ಉತ್ತರಿಸಿದ ವೇಣು.

"ನಾನೂ ನಿನ್ಸಂಗಡ ಬತ್ತೇನೆ ಮಾವ." ಹುಡುಗ ಆಸೆ ತುಂಬಿದ ಕಣ್ಣುಗಳಿಂದ ವೇಣುವನ್ನು ನೋಡಿದ.

"ಆಗಲಿ. ಆದರೆ ಅಮ್ಮನಿಗೆ ಹೇಳಿ ಬಾ!"

ಹುಡುಗ "ಅಮ್ಮಾ, ಅಮ್ಮಾ" ಎಂದು ಕೂಗುತ್ತಾ ಮನೆಯೊಳಗೆ ಓಡಿದ. "ನಾನು ಮಾವ್ನ ಸಂಗಡ ಪೇಟೆಗೆ ಹೋಗ್ತೇನೆ."

"ಏಕೆ ಅವರಿಗೆ ತೊಂದರೆ ಕೊಡುತ್ತೀ" ಒಳಮನೆಯಲ್ಲಿದ್ದ ತಾಯಿ ನುಡಿದಳು.

"ಇಲ್ಲವಮ್ಮಾ, ನಾನು ಮಾವನ ಸಂಗಡ ಹೋಗ್ಲೇ ಬೇಕು" ಎಂದು ಹುಡುಗ ಹಟ ಹಿಡಿದ.

ತಾಯಿ ಹೊರಗೆ ಬಂದಳು. "ರಾಮು ನಿಮಗೆ ತೊಂದರೆ ಕೊಡುತಾನಲ್ಲ. ನಿಮ್ಮ ಜತೆಯಲ್ಲಿ ಪೇಟೆಗೆ ಹೋಗಬೇಕೆಂದು."

"ತೊಂದರೆಯೇನು ತಾಯಿ? ಪೇಟೇಲಿ ತಿರುಗಾಡಿ ಬರುತಾನೆ" ಎಂದು ವೇಣು ಉತ್ತರಿಸಿದ.

ವೇಣುವಿನ ಬೆನ್ನ ಹಿಂದೆ ರಾಮುವೂ ಅರಳಿದ ಮೊಗದೊಡನೆ ಪೇಟೆಗೆ ತೆರಳಿದ.

× × × ×

ಹೊರ ತೆರಳಿದ್ದ ಮಾಸ್ತರರು ಮನೆಗೆ ಬಂದರು. ಅವರ ಕೈಯಲ್ಲಿಯ ಚೀಲದಲ್ಲಿ ನಾಲ್ಕು ಸೇರು ಅಕ್ಕಿ, ತುಸ ಕಾಯಿಪಲ್ಯಗಳಿದ್ದುವು. ಅವರು ಅದನ್ನು ನೆಲದ ಮೇಲಿರಿಸಿ ಉಸ್ಸೆಂದು ನೆಲದ ಮೇಲೆ ಕುಳಿತರು. ಜೇಬಿನಿಂದ ಒಂದು ಹರುಕು ಕೈವಸ್ತ್ರವನ್ನು ತೆಗೆದು ಮೊಗದ ಮೇಲೆ ಮೂಡಿದ್ದ ಬೆವರು ಹನಿಗಳನ್ನು ಒರೆಸಿಕೊಂಡರು.

"ನಾಗಪ್ಪ ಶೆಟ್ಟಿ ಮನೆಗೆ ಬಂದಿದ್ದ." ಚೀಲದಿಂದ ಕಾಯಿಪಲ್ಯಗಳನ್ನು ತೆಗೆಯುತಿದ್ದ ಮಡದಿ ಸೀತಮ್ಮ ಉಸುರಿದಳು.

"ಏಕಂತೆ ಆತ ಬಂದುದು?"

"ಅವನ ಅಂಗಡಿ ಕಡ ತೀರಿಸಬೇಕಂತೆ." ಗೃಹಿಣಿಯ ಕೊರಳಿಂದ ಮಾರುಲಿ ಹೊರಟಿತು. "ಇಲ್ಲದಿದ್ದರೆ ಅವನು ಕೋರ್ಟಿಗೆ ಹೋಗುವನಂತೆ. ಸಾಲ ನಲವತ್ತು ರೂಪಾಯಿಗಳ ಮೇಲಿದೆಯೆಂದು ಹೇಳಿದ."

ಮಾಸ್ತರರ ಮೊಗ ಕಪ್ಪೇರಿತು. ಚಿಂತೆಯ ಗೆರೆಗಳು ಅವರ ಅಗಲವಾದ ಹಣೆಯ ಮೇಲೆ ಮೂಡಿದುವು. ಹೊಸದೊಂದು ಕುತ್ತು ತಮ್ಮನ್ನು ಇದಿರು ನೋಡುತಿದೆಯೆಂದು ಅವರು ಬಲ್ಲರು. ಎರಡು ನಿಮಿಷಗಳ ತನಕ ಅವರ ಕೊರಳಿಂದ ದನಿ ಹೊರಡಲಿಲ್ಲ. ನೀರವತೆ ಮನೆಯೊಳಗೆ ಪಸರಿಸಿತು.

"ಸೀತಾ, ಕೊನೆಗೊಳ್ಳುವುದೆಂದಿಗೆ ಇದು?"

"ಯಾವುದು?" ಎಂದು ಸೀತಮ್ಮ ಪ್ರಶ್ನಿಸಿದಳು.

"ಈ ಹೋರಾಟ. ಕೊನೆಯಿಲ್ಲದ ಈ ಹೋರಾಟ!" ನಿರಾಶೆ ತುಂಬಿದ ದನಿಯಲ್ಲಿ ಮಾಸ್ತರರು ಹೇಳಿದರು.

"ಯಾರೇನು ಮಾಡಲಾಗುತದೆ. ನಮ್ಮ ಅದೃಷ್ಟ" ಸೀತಮ್ಮ ಉಸುರಿದಳು. "ಎಲ್ಲಿಂದಲಾದರೂ ಕಡತಂದು ನಾಗಪ್ಪ ಶೆಟ್ಟಿಯ ಕಡ ತೀರಿಸಬೇಕು.

"ಸಾಲೆ ಮಾಸ್ತರರಿಗೆ ಯಾರು ಸಾಲಕೊಡುತಾರೆ. ಸೀತಾ, ಕರೆಯದ ಬರಡು ಹಸುವಿನ ಪಾಡು ಆತನದು. ಕಂಟ್ರೋಲ್ ಇನ್ಸ್‌ಪೆಕ್ಟರರಾದರೆ,- ಪೋಲೀಸು ಕಾನ್ಸ್‌ಟೇಬಲ್‌ನಾದರೆ, ಜಪ್ತಿ ವಾರಾಂಟು ತರುವ ಅಮೀನನಾದರೆ,- ವಿಪುಲ ಹಣಾ ದೊರಕುವುದು. ಸಾಲೆ ಮಾಸ್ತರರಿಗೆ ಬಿಡುಗಾಸೂ ಕಡ ಸಿಗದು."

"ನಾಳೆ ನಾಗಪ್ಪಶೆಟ್ಟಿಗೆ ಏನು ಮಾಡುವಿರಿ?" ಸೀತಮ್ಮ ಆಣ್ಮನ ಮೊಗವನ್ನು ನಿಟ್ಟಿಸಿದಳು.

"ನಾಳೆಯ ಚಿಂತೆ ನಾಳೆಗೆ. ಇಂದೇ ಅವನ್ನು ನೆನೆದು ತಲೆಗೆಡಿಸಿಕೊಳ್ಳುವುದು ಬೇಡ. ಒಂದು ಲೋಟ ನೀರನ್ನು ತಂದು ಕೊಡು. ನೀರಿಗೆ ಬೆಲೆ ಕೊಡಬೇಕಾಗಿಲ್ಲವಲ್ಲ! ನೀರಿನಿಂದಲೇ ದಿನ ಕಳೆಯುವಾ."

ಸೀತಮ್ಮ ನೀರು ತರಲೋಸುಗ ಒಳಕೋಣೆಯೊಳಗೆ ಹೆಜ್ಜೆ ಇರಿಸಿದಳು. ಕರವಸ್ತ್ರವನ್ನು ತೆಗೆದು ಅವರು ಮೊಗವನ್ನು ಉಜ್ಜಿಕೊಂಡರು. ಅವರ ಇಳಿಬಿದ್ದ ಕಣ್ಣುಗಳು ಮುಂದಿದ್ದ ಬಿಳಿಗೋಡೆಗಳನ್ನು ನೋಡುತಿದ್ದುವು. ಅವರ ಅಂತರಂಗದಲ್ಲಿ ಆಲೋಚನೆಯ ಮಹಾಪೂರವೇ ನೆರೆದಿತ್ತು. ನಾಗಪ್ಪ ಶೆಟ್ಟಿಯ ಕಡ, ಅರಿವೆ ಅಂಗಡಿಯ ಸಾಲ, ಮನೆಬಾಡಿಗೆ, ಮುಂದೊಂದು ತಿಂಗಳು ಮನೆ ಮಂದಿಗೆಲ್ಲ ಆಹಾರವನ್ನು ಒದಗಿಸುವ ಬಗೆ, ಹೀಗೆ ಹತ್ತಾರು ಪ್ರಶ್ನೆಗಳು ಅವರ ಕದಡಿದ ಚಿತ್ತದಲ್ಲಿ ಒಂದುಗೂಡಿ, ಅವರ ಮನಸ್ಸನ್ನು ಕಲಕುತ್ತಿದ್ದುವು.

ಸೀತಮ್ಮ ಒಂದು ಕಂಚಿನ ಲೋಟದಲ್ಲಿ ನೀರು ತಂದು ಪತಿಗೆ ಇತ್ತಳು. ಮಾಸ್ತರರು ನೀರನ್ನು ಈಂಟಿ ತೃಷೆಯನ್ನು ಇಲ್ಲವಾಗಿಸತೊಡಗಿದರು.

× × × ×

"ಅಣ್ಣಾ, ಇಲ್ನೋಡು ಮಾವ ಏನು ತೆಗೆದುಕೊಟ್ಟಿದಾನೆ. ನಿಂತ" ರಾಮುವಿನ ಕೂಗು, ಮಂಚದ ಮೇಲೆ ಮಲಗಿ ಆಲೋಚನೆಯಲ್ಲಿ ಮಗ್ನ ರಾಗಿದ್ದ ಮಾಸ್ತರರ ಚಿಂತೆಗೆ ಭಂಗವನ್ನೆಸಗಿತು ಅವರು ಮುಚ್ಚಿದ್ದ ರೆಪ್ಪೆ ಗಳನ್ನು ತೆರೆದರು ರಾಮು ಮನೆಯೊಳಗೆ ಬಂದಿದ್ದ. ಅವನ ಕೈಗಳಲ್ಲಿ ಎರಡು ಚಿಪ್ಪು ಬಾಳೆ ಹಣ್ಣು, ಒಂದು ಚೆಂಡು, ಎರಡು ಮೂರು ಆಟಿಗೆಗಳು ಇವೆಲ್ಲ ಇದ್ದುವು. "ಇವು ಎಲ್ಲಿಂದ ಮಗು? ಎಂದು ತಂದೆ" ಎಳೆಯನನ್ನು ಪ್ರಶ್ನಿಸಿದರು

"ಅಣ್ಣ, ನಾನು ಪಕ್ಕದ್ಮನೆ ಮಾವ್ನ ಜತೇಲಿ ಪೇಟೆಗೆ ಹೋಗಿದ್ದೆ. ಅಲ್ಲಿ ಅವ್ರು ಈ ಹಣ್ಣು ಆಟ ಎಲ್ಲಾ ತೆಗೆದುಕೊಟ್ರು." ರಾಮುವಿನ ಮೊಗವು ಹರುಷದಿಂದ ಅರಳಿದ ಗುಲಾಬಿ ಹೂವಿನಂತಾಗಿದ್ದಿತು. ಅವನ ತೊದಲು ಮಾತುಗಳು ಮುಂದುವರಿದುವು. "ಮಾವ ಬಹಳ ಒಳ್ಳೆಯವರು. ಅಣ್ಣ, ನೀನು ಒಂದು ದಿನವಾದರೂ ನನ್ನನ್ನು ಪೇಟೆಗೆ ಕರೆದುಕೊಂಡು ಹೋಗೋದಿಲ್ಲ. ಒಂದು ವಸ್ತುನಾದ್ರೂ ತಕ್ಕೊಡೋದಿಲ್ಲ."

"ಇಲ್ಲ ಮಗು, ನಾಳೆದಿನ ನಿನ್ನನ್ನು ಪೇಟೆಗೆ ಕರೆದುಕೊಂಡು ಹೋಗು ವೆನು." ಮೃದು ಸ್ವರದಲ್ಲಿ ತಂದೆ ಅಂದರು.

ಆದರೆ ತಂದೆಯ ನುಡಿಯನ್ನು ಕೇಳುವ ತಾಳ್ಮೆ ಹುಡುಗನಿಗಿರಲಿಲ್ಲ. ಮಾವ ತೆಗೆದುಕೊಟ್ಟ ಒಡವೆಗಳನ್ನು ತಾಯಿ, ತಮ್ಮ ಇವರಿಗೆ ತೋರಿಸ ಲೋಸುಗ ಅವನು ಅಡಿಗೆಕೋಣೆಗೆ ತೆರಳಿದ.

"ಟ್ರಾವಲಿಂಗ್ ಏಜೆಂಟು ಈ ರೀತಿ ನನ್ನ ಮೇಲೆ ಸಾಲದ ಹೊರೆಯ ನ್ನೇಕೆ ಹೊರಿಸುವನೋ" ಎಂದು ಮಾಸ್ತರರು ತಮ್ಮೊಳಗೇ ಹೇಳಿಕೊಂಡರು. ಒಳಮನೆಗೆ ತೆರಳಿ ರಾಮುವಿನ ಕೈಗಳಲ್ಲಿದ್ದ ಹಣ್ಣು ಮತ್ತು ಆಟಿಗೆಗಳನ್ನು ಕಿತ್ತೆಸೆದು ಕೆನ್ನೆಯ ಮೇಲೆರಡು ತಟ್ಟಬೇಕೆಂದು ಅವರಿಗನಿಸಿತು. ಮಗನ ಕಿವಿಯನ್ನು ಹಿಡಿದೆತ್ತಿ "ಇನ್ನು ವೇಣುವಿನ ಸಹವಾಸ ಮಾಡಬೇಡ" ಎಂದು ಕಿರುಚಬೇಕೆಂದು ಅವರಿಗನಿಸಿತು. ಆದರೆ ಅವರ ಅಂತರಂಗದಲ್ಲಿ ಹುದುಗಿದ್ದ ವಿವೇಕ, ಅವರ ಈ ಹುಚ್ಚು ಲಹರಿ ಕೃತಿರೂಪ ಪಡೆಯಲು ಎಡೆ ಗೊಡಲಿಲ್ಲ.

ಮಾಸ್ತರರು ಮಲಗಿದಲ್ಲಿಂದ ಎದ್ದು ನಿಂತರು. ಅವರ ಪಾದಗಳು ಪಕ್ಕದ

ಮನೆಯ ವೇಣುಗೋಪಾಲರಾಯರ ಬಳಿಗೆ ಹೆಜ್ಜೆಗಳನ್ನಿರಿಸಿದುವು. ವೇಣು ಸಿಗರೇಟು ಒಂದಕ್ಕೆ ಬೆಂಕಿಯನ್ನು ಹಚ್ಚಿ ಸೇದುತಿದ್ದ. ತನ್ನ ಕೋಣೆಗೆ ಮಾಸ್ತರರು ಬರುತಿಹುದನ್ನು ಆತ ನೋಡಿದ. ಅವನು ಕುಳಿತಲ್ಲಿಂದ ಎದ್ದು ನಿಂತು "ಬನ್ನಿ ಕುಳ್ಳಿರಿ" ಎಂದು ಅವರನ್ನು ಆದರಿಸಿದ. ಮಾಸ್ತರರು ವೇಣು ತೋರಿಸಿದ ಮುರುಕು ಕುರ್ಚಿಯ ಮೇಲೆ ಕುಳಿತರು

"ಮಾಸ್ತರ, ನೀವು ಸಿಗರೇಟು ಸೇದುವಿರಾ ?" ವೇಣು ಮೇಜದ ಮೇಲಿದ್ದ ಸಿಗರೇಟು ಪೇಕನ್ನು ಮಾಸ್ತರರ ಕಡೆಗೆ ಚಾಚಿದ.

"ಇಲ್ಲ. ನಾನು ಸಿಗರೇಟು ಸೇದುವುದಿಲ್ಲ. ಅದೊಂದು ಒಳ್ಳೆಯದು ಮಾಡಿದೆ. ಇಲ್ಲದಿದ್ದರೆ ಈ ಬರಗಾಲದಲ್ಲಿ ಹೊಗೆಬತ್ತಿಗೂ ಕಾಸು ತೆಗೆದಿಡ ಬೇಕಾಗುತಿದ್ದಿತು."

"ಅಲ್ಲ ಮಾಸ್ತರ, ನೀವು ಪಕ್ಕದ ಮನೆಯಲ್ಲಿದ್ದರೂ ನಿಮ್ಮನ್ನು ನೋಡ ಸಿಗುವುದೇ ಅಪರೂಪವಾಗಿದೆಯಲ್ಲ!"

"ತಲೆ ಮರೆಸಿಕೊಂಡು ಅಲೆಯಬೇಕಾದ ದಿನಗಳಿವು." ಮಾಸ್ತರರ ತುಟಿಗಳ ಮೇಲೆ ಕಿರುನಗೆಯೊಂದು ಮಿನುಗಿತು.

ಮಾಸ್ತರರ ನುಡಿಯನ್ನು ಆಲಿಸಿ ವೇಣುವಿನ ಮೊಗ ತುಸ ಬಿಳುಪೇರಿತು. ಅರೆಚಣ ಅವನ ಕೊರಳಿಂದ ನುಡಿ ಹೊಮ್ಮಲಿಲ್ಲ. ಕೊನೆಗೆ ಅವನು ಪ್ರಶ್ನಿಸಿದ. "ಅದೇಕೆ ಮಾಸ್ತರ ಹಾಗೆ ಹೇಳುವಿರಿ ? ತಲೆ ಮರೆಸಿಕೊಳ್ಳಬೇಕಾದ ಯಾವ ಪ್ರಸಂಗ ನಿಮಗೆ ಬಂದಿದೆ?"

"ಬೇರಿನ್ನೇನೂ ಇಲ್ಲ. ಸಾಲಿಗರ ಗೋಳನ್ನು ನಾನು ತಡೆಯಲಾರೆ. ಹೊರಗೆ ಯಾರಿಗೂ ಮೊಗ ತೋರಿಸುವಂತಿಲ್ಲ. ಅವರು ನನ್ನ ಜೀವ ಹಿಂಡು ತಾರೆ." ಮಾಸ್ತರರು ನಗುತ್ತಾ ಉತ್ತರಿಸಿದರು. "ಕೈ ಹಿಡಿದ ಮಡದಿ ಹೊಟ್ಟೆಯಲ್ಲಿ ಹುಟ್ಟಿದ ಎರಡು ಕೂಸುಗಳು ಇಲ್ಲದಿದ್ದರೆ, ನಾನು ಬೈರಾಗಿಯೋ, ಕಾಂಗ್ರೆಸು ಸತ್ಯಾಗ್ರಹಿಯೋ ಆಗಿ ಬಿಡುತಿದ್ದೆ."

"ಬಾಳುವೆಯಲ್ಲಿ ಅನಿತು ನಿರಾಶರಾಗಬಾರದು." ಸಂತಸದ ನುಡಿಗಳು ವೇಣುವಿನ ತುಟಿಗಳಿಂದ ಹೊರಟುವು. "ಕೊನೆತನಕ ಈ ಕಷ್ಟದ ದಿನಗಳು ಉಳಿಯವು."

" ಆದರೆ ಅದು ಇತರರಿಗೆ. ಆದರೆ ಅಧ್ಯಾಪಕರ ಬದುಕು ಯಾವಾಗಲೂ ಅಮವಾಸ್ಯೆಯ ರಾತ್ರಿ. ಅವರ ಬಾಳುವೆಯಲ್ಲಿ ಸುಖಸಂತೋಷಗಳ ಬೆಳದಿಂಗಳು ಸುಳಿಯದು. ನೋಡಿ, ನನ್ನ ಬಡತನವನ್ನು ಹೇಳಿಕೊಳ್ಳಲು ನನಗೇನೂ ಬೇಸರವಿಲ್ಲ. ಕಳೆದ ಒಂದು ವರುಷವನ್ನು ಅಂಬಲಿಗಂಜಿ, ಚಿಂದಿ ಅರಿವೆಗಳಿಂದ ಕಳೆದಿದೇವೆ. ಇನ್ನು ಮುಂದಿನ ವರುಷವನ್ನು ಒಪ್ಪೊತ್ತಿನೂಟ ಬರಿ ಮೈಗಳಲ್ಲಿ ಕಳೆಯಬೇಕಾದೀತು ! "

ಮಾಸ್ತರರ ನುಡಿಗೆ ವೇಣು ಮಾರ್ನುಡಿಯಲಿಲ್ಲ. ಅವನ ಮಿದುಳಿನ ಕವಾಟದಲ್ಲಿ ಮಾಸ್ತರರಿಗೆ ಕೊಡಬಹುದಾದ ಸಂತಸ ವಚನದ ಯಾವ ಗುಳಿಗೆಯೂ ಇರಲಿಲ್ಲ. ಇದ್ದುವೆಲ್ಲ ಈ ಮೊದಲೇ ಅವರು ನುಂಗಿದ ಗುಳಿಗೆಗಳ ಮಾದರಿಯವೇ ಆಗಿದ್ದುವು.

" ಮತ್ತೇನು ನನ್ನ ಬಳಿಗೆ ದಯಮಾಡಿಸಿದಿರಿ ? "

" ಬೇರೇನಿಲ್ಲ. ನೀವು ರಾಮುಗೆ ಹಣ್ಣುಗಳನ್ನೂ, ಆಟಿಗೆಗಳನ್ನೂ ತೆಗೆದುಕೊಟ್ಟಿರಂತೆ. "

" ಅಹುದು. "

" ಅಂದು ನೀವು ನಮ್ಮ ಹುಡುಗರಿಗೆ ಕಿತ್ತಳೆ ಹಣ್ಣು ನೀಡಿದಿರಿ. ಈಗ ಬಾಳೆಯ ಹಣ್ಣು ಮತ್ತು ಆಟಿಗೆಗಳು. ನೀವು ಈ ರೀತಿ ಮೊದಲೇ ಸೋತಿರುವ ನನ್ನ ಹೆಗಲ ಮೇಲೆ ಉಪಕಾರದ ಹೊರೆಯನ್ನು ಹೊರಿಸಬಾರದು. ಹಳೆಯ ರಿಣಗಳನ್ನೇ ತೀರಿಸಲಾರದೆ ನಾನು ತೊಳಲಾಡುತಿದೇನೆ. ಈ ಹೊಸ ಸಾಲದಿಂದ ನನ್ನ ಗೋಣು ಕುಸಿಯದಿರದು. "

" ನಾನು ರಾಮುಗೆ ಹಣ್ಣು ಕೊಟ್ಟುದು ನಿಮ್ಮ ಮೇಲೆ ಒಂದು ಹೊರೆಯನ್ನು ಹೊರಿಸಲೋಸುಗವಲ್ಲ. " ಮೆಲುದನಿಯಲ್ಲಿ ವೇಣು ಹೇಳಿದ " ನೋಡಿ, ನಿಮ್ಮ ರಾಮುವಿನಂತೆಯೇ ನನಗೂ ಒಬ್ಬ ಮಗನಿದ್ದ. ಆದರೆ ಈಗ ಇಲ್ಲ. ನನ್ನನ್ನು ಅಗಲಿ ಅವನು ಓ ಕೊಡದ ನಾಡಿಗೆ ತೆರಳಿದ. ನಿಮ್ಮ ಹುಡುಗನನ್ನು ನೋಡಿದೊಡನೆಯೇ ನನಗೆ ಅವನ ನೆನಪಾಗುವುದು ...."

ವೇಣುವಿನ ಬಾಯಿಯಿಂದ ಮುಂದೆ ಮಾತು ಹೊರಡಲಿಲ್ಲ. ಕಡೆಗಣ್ಣುಗಳಲ್ಲಿ ಕಂಬನಿಗಳು ತುಳುಕಿದುವು. ವೇಣುವಿನ ಈ ಇರವಿಗೆ ಹಿನ್ನೆಲೆಯಾಗಿ

ಯಾವುದೋ ಒಂದು ದುಃಖದ ಕತೆಯು ಅಡಗಿದೆಯೆಂದು ಮಾಸ್ತರರು ಊಹಿಸಿದರು.

"ಊರಲ್ಲಿ ನಿಮ್ಮ ಬಂಧುಬಳಗದವರೆಲ್ಲಾ ಹೇಗಿದಾರೆ?" ಮಾಸ್ತರರ ಮಾತು ಬೇರೆಂದು ಹಾದಿಯನ್ನು ಹಿಡಿಯಿತು

"ನೆಂಟರು ಇಷ್ಟರು ಬಂಧುಬಳಗದವರು ಎಲ್ಲಾ ಇದ್ದರು ಒಂದು ಕಾಲದಲ್ಲಿ—ಈಗ ನನ್ನವರೆಂಬುವವರು ಯಾರೂ ಇಲ್ಲ."

"ಕೈವಿಡಿವ ಮಡದಿಯೂ ಇಲ್ಲವೇ?"

"ಇದ್ದಳು ಒಂದು ಕಾಲದಲ್ಲಿ. ಆದರೆ ಆಕೆ ನನ್ನನ್ನು ಬಿಟ್ಟು ತೆರಳಿದಳು. ನನಗೆ ಹೇಳಿಕೊಳ್ಳುವಂತಹ ಬಂಧುಗಳಾರೂ ಇಲ್ಲ. ಪುನಃ ಮದುವೆಯಾಗಿ ಸಂಸಾರವನ್ನು ಹೂಡುವ ಆಸೆಯೂ ಇಲ್ಲ."

ಮಾಸ್ತರರು ವೇಣುವಿನ ಜೀವನ ಕತೆಯನ್ನು ಕುರಿತು ಹೆಚ್ಚು ಪ್ರಶ್ನಿಸಲಿಲ್ಲ. ಅವನ ಜೀವನ ಸ್ಮೃತಿಗಳು ಕಟುವಾದುವು ಎಂದು ಅವರಿಗೆ ಅರಿವಾಯಿತು. ಆದುದರಿಂದ ಆ ಕಹಿ ನೆನಪುಗಳನ್ನು ಅವನ ಮನಸ್ಸಿನ ಅಂತರಾಳದಿಂದ ಮೇಲೆತ್ತಲು ಅವರು ಹವಣಿಸಲಿಲ್ಲ.

"ರಾಯರೇ ನನ್ನದೊಂದು ಅರಿಕೆ." ಮಾಸ್ತರರು ಉಸುರಿದರು.

"ಏನದು?" ವೇಣು ಮೇಜದ ಮೇಲೆ ನೆಲಿಸಿದ್ದ ಕಣ್ಣುಗಳನ್ನು ಮೇಲಕ್ಕೆತ್ತಿದ.

"ಇಂದು ರಾತ್ರಿಯ ಊಟಕ್ಕೆ ನೀವು ನಮ್ಮಲ್ಲಿಗೆ ಬರಬೇಕು."

"ಇಲ್ಲ. ನನ್ನಿಂದಾಗಿ ನಿಮಗೇಕೆ ತೊಂದರೆ?"

"ತೊಂದರೆಯಲ್ಲ. ಅನುಗ್ರಹ."

ಮಾಸ್ತರರ ನಿರ್ಬಂಧವನ್ನು ಅಲ್ಲಗಳೆಯಲಾಗದೆ ವೇಣು ಅವರ ಅತಿಥಿಯಾಗಲೊಪ್ಪಿದ.

## ( ೩ )

ರಾತ್ರಿ ಒಂದು ತಾಸಾಗಿದ್ದಿತು. ಬಾನಿನಲ್ಲಿ ಚಿಕ್ಕೆಮೀನುಗಳು ಈಸುತಿದ್ದುವು. ಕೃಷ್ಣಪಕ್ಷದ ಚಂದಿರನು ಆಗ ತಾನೇ ಮೂಡಣದ ಬಾನಂಚಿನಿಂದ ಎರಡು ಮೊಳದಷ್ಟು ಮೇಲೇರಿದ್ದ. ಬೀದಿ ನಾಯಿಗಳ ಬೊಗುಳುವ ದನಿಯಲ್ಲದೆ ಇನ್ನಾವುದೂ ಆ ರಜನಿಯ ಶಾಂತತೆಯನ್ನು ಇಲ್ಲವಾಗಿಸುತಿರಲಿಲ್ಲ.

ರಾಧಮ್ಮನವರು ತಮ್ಮ ಮಕ್ಕಳು ಮರಿಗಳೊಡನೆ ಸಿನೇಮಾ ನೋಡಲು ಬಂದಿದ್ದರು. ಅವರು, ಹದಿನೆಂಟು ವರುಷ ಹರಯದ ಮಗಳು ಶಾಲಿನಿ, ಸೊಸೆ ಕಮಲಿ, ಇಬ್ಬರು ಹುಡುಗರು, ಹೀಗೆ ಐವರು ಚಲಚಿತ್ರ ನೋಡಲು ಥಿಯೇಟರಿಗೆ ಐತಂದಿದ್ದರು. ಚಲಚಿತ್ರವನ್ನು ನೋಡಿಯಾದನಂತರ ಅವರೆಲ್ಲ ಮನೆಗೆ ಹೊರಟರು. ಆದರೆ ಮನೆಗೆ ಹಿಂದಿರುಗಲು ಅವರಿಗೆ ಜಟ್ಕಾಗಾಡಿ ಸಿಗಲಿಲ್ಲ. ಗಾಡಿಯೊಂದನ್ನು ಅರಸುತ್ತಾ ಅವರು ತುಸು ಒದ್ದಾಡಬೇಕಾಯಿತು. ಕೊನೆಗೊಬ್ಬ ಸಾಬಿ ಅವರಿಗೆ ದೊರೆತ. ಗಾಡಿಬಾಡಿಗೆಯನ್ನು ನಿರ್ಣಯಿಸಲು ರಾಧಮ್ಮ ಅವನೊಡನೆ ಹತ್ತು ನಿಮಿಷ ಚರ್ಚಿಸಿದುರ. ಸಾಬಿ ಅವರನ್ನೆಲ್ಲಾ ಒಮ್ಮೆ ದಿಟ್ಟಿಸಿ ನೋಡಿ; ಕೊನೆಗೆ ಒಂದೂವರೆ ರೂಪಾಯಿಗೆ ಗಾಡಿ ಹೊಡೆಯ ಲೊಪ್ಪಿದ. ಎಲ್ಲರೂ ಗಾಡಿಯೊಳಗೆ ಹತ್ತಿ ಕುಳಿತರು. ಸಾಬಿ ಚಾವಟಿಗೆಯಿಂದ ಗಾಡಿಗೆ ಕಟ್ಟಿದ್ದ ಬಡಕಲು ಕುದುರೆಯನ್ನು ಥಳಿಸಿದ. ಕುದುರೆ ಗಾಡಿಯನ್ನು ಎಳೆದುಕೊಂಡು ಮುಂದೆ ಓಡಿತು.

"ನೀವು ಹೆಂಗಸರು. ಗಂಡಸರಿಲ್ಲದೆ ಎರಡನೇ ಆಟಕ್ಕೆ ನೀವೇ ಬರುವುದು ತಪ್ಪು ತಾಯಿ." ಜಟ್ಕಾ ಸಾಬಿ ಉಸುರಿದ.

"ಏಕೆ?" ಎಂದರು ರಾಧಮ್ಮ.

"ಕಳೆದ ಒಂದು ತಿಂಗಳಿಂದ ಊರಲ್ಲಿ ಕಳ್ಳರ ಕಾಟ ಹೆಚ್ಚಿದೆ." ನಿಮ್ಮನ್ನು ನೋಡುವಾಗ ಸಿರಿವಂತರಂತೆ ಕಾಣುತೀರಿ. ಮೊನ್ನೆ ನೋಡಿ ಆಚೆ ಬೀದಿಯಲ್ಲಿ ಸಿನೇಮಾ ನೋಡಿ ಮನೆಗೆ ಹೋಗುತಿದ್ದ ಒಬ್ಬ ಹೆಣ್ಣು ಮಗಳನ್ನೂ, ಹುಡುಗನನ್ನೂ ಕಳ್ಳರು ಸುಲಿದರು. ಸಾಬಿ ಎರಡು ದಿನಗಳ ಹಿಂದೆ ನಡೆದ ಒಂದು ಸಂಭವಕ್ಕೆ ಉಪ್ಪುಕಾರ ಹಚ್ಚಿ ಬಣ್ಣಿಸಿದ.

ಸಾಬಿಯ ನುಡಿಗಳನ್ನು ಕೇಳಿ ರಾಧಮ್ಮ ಹಾಗೂ ಸಂಗಡಿಗರ ಮೊಗ ಗಳು ಬಿಳುಪೇರಿದುವು. ಅವರ ಅಂತರಂಗಗಳಲ್ಲಿ ಅಂಜಿಕೆಯ ಅಲೆಗಳು ಹೊಯ್ದಾಡಿದುವು. ಆದರೆ ರಾಧಮ್ಮ ತಾವು ಭಯಗೊಂಡಿರುವೆವೆಂಬುವನ್ನು ಹೊರಗೆ ತೋರಗೊಡಲಿಲ್ಲ. "ಸಾಕೋ ಸಾಬಿ ಸುಮ್ಮನಿರು." ಬಿಗುವಿನ ದನಿಯಲ್ಲಿಯೇ ಅವರು ಹೇಳಿದರು. "ನೀನು ನಮ್ಮನ್ನು ಬೆದರಿಸಿ ಹೆಚ್ಚಿಗೆ ಬಾಡಿಗೆ ಸೆಳೆಯಲು ಸಂಚು ನಡೆಸಿದ್ದೀಯೇ. ಆದುದರಿಂದಲೇ ಈ ಕಾಗಕ್ಕ-

ಗುಬ್ಬಚ್ಚಿ ಕತೆಯನ್ನು ಹೇಳುತಿರುವೆ. ಗಾಡಿಯಲ್ಲಿ ಕುಳಿತು ಹೋಗುತಿರುವಾಗ ತುಡುಗರು ಏನು ಮಾಡುತಾರೆ ? ''

" ನನಗೆ ಗೊತ್ತಿದ್ದುದನ್ನು ಹೇಳಿದೆ. '' ಸಾಬಿ ಉಸುರಿದ. '' ನಂಬುವುದೂ ಬಿಡುವುದೂ ನಿಮ್ಮಿಷ್ಟ. "

ರಾಧಮ್ಮ ಮಾರ್ನುಡಿಯಲಿಲ್ಲ. ಚಕ್ರಗಳು ಉರುಳಿದುವು. ಗರಗರ ದನಿಯಲ್ಲಿ ಕಿವಿಗಳನ್ನು ಕೊರೆದಿತು. ಗಾಡಿ ಮುಂದೆ ಸಾಗಿತು.

ಬಳಸೊಂದು ದೊರಕಿತು ದಾರಿಯಲ್ಲಿ. ಎರಡು ವ್ಯಕ್ತಿಗಳು ದಾರಿಯನ್ನು ಅಡ್ಡಗಟ್ಟಿದುವು ಅವರ ಕೈಗಳಲ್ಲಿ ದೊಣ್ಣೆ ಮತ್ತು ಕತ್ತಿಗಳಿದ್ದುವು ಮೊಗಗಳನ್ನು ಕಪ್ಪು ಅರಿವೆ ತುಂಡುಗಳು ಮರೆಸಿದ್ದುದರಿಂದ, ಅವರ ಗುರುತು ಹಚ್ಚಲು ಬರುವಂತಿರಲಿಲ್ಲ. ಅವರಲ್ಲಿ ಒಬ್ಬನು ಬಂದು ಸಾಬಿಯ ಕೈಯಿಂದ ಲಗಾಮನ್ನು ಕಸಿದು ಕುದುರೆಯನ್ನು ನಿಲ್ಲಿಸಿದ. ಸಾಬಿ ಅಂಜಿಕೆಯಿಂದ ಗಡಗಡನೆ ನಡುಗುತ್ತಾ ಗಾಡಿಯಿಂದ ಕೆಳಕ್ಕಿಳಿದ ಅವನು ಗಾಡಿಯೊಳಗಿದ್ದ ಹೆಂಗಸರ ಕಡೆಗೆ ದೃಷ್ಟಿಯನ್ನು ಹೊರಳಿಸಿ ಹೇಳಿದ. " ನಾನು ಆಗಲೇ ನಿಮಗೆ ಎಚ್ಚರಿಕೆ ಹೇಳಿದೆ. ಆದರೆ ನನ್ನ ಮಾತನ್ನು ನೀವು ನಂಬಲಿಲ್ಲ. "

ಕಳ್ಳರ ಪೈಕಿ ಒಬ್ಬನು ಸಾಬಿಯ ಕೈಯನ್ನು ಗಟ್ಟಿಯಾಗಿ ಹಿಡಿದು ಹೇಳಿದ. '' ಏಯ್ ! ಗಟ್ಟಿಯಾಗಿ ಮಾತಾಡಬೇಡ. ನಿನ್ನ ತಲೆ ಹುಡಿಯಾದೀತು ! ಗಾಡಿಯೊಳಗೆ ಯಾರಿದಾರೆ ? "

" ಹೆಂಗಸರು. "

ಅನಿತರಲ್ಲಿ ಇನ್ನೊಬ್ಬ ಕಳ್ಳನು ಕುದುರೆಯನ್ನು ಗಾಡಿಯಿಂದ ಬಿಚ್ಚಿದ. ಅವರಲ್ಲಿ ಹಿರಿಯನು ಗಾಡಿಯೊಳಕ್ಕೆ ಹಣಿಕಿ ನೋಡಿದನು. ರಾಧಮ್ಮನವರೂ ಸಂಗಡಿಗರೂ ಅವನ ಕಣ್ಣಿಗೆ ಬಿದ್ದರು. ಆತ ತನ್ನ ಕತ್ತಿಯನ್ನು ಎತ್ತಿ ಅವರಿಗೆ ತೋರಿಸುತ್ತಾ ನುಡಿದ. '' ನಿಮ್ಮ ಆಭರಣ, ಒಡವೆಗಳನ್ನೆಲ್ಲಾ ಬಿಚ್ಚಿಕೊಡಿ. ಹಾಗಾದರೆ ನಿಮ್ಮ ಮೈಗೆ ನಾವು ಕೈ ಹಾಕುವುದಿಲ್ಲ. ಇಲ್ಲದಿದ್ದರೆ ಜೀವಕ್ಕೆ ಎರವಾಗುವಿರಿ. "

ರಾತ್ರಿ ಹೊತ್ತು ಅಬಲೆಯರನ್ನು ಬೆದರಿಸಿ ಕಸಿದುಕೊಳ್ಳುವುದು ಗಂಡಸರೆನಿಸಿದವರಿಗೆ ಮಾನತರತಕ್ಕುದಲ್ಲ ಎಂದು ಕಳ್ಳರಿಗೆ ನುಡಿಯಬೇಕೆಂಧು

ರಾಧಮ್ಮ ಹವಣಿಸಿದರು. ಆದರೆ ಅವರ ನಾಲಗೆ ಬತ್ತಿಹೋಗಿತ್ತು ಮಾತು ಹೊರಡಲಿಲ್ಲ.

"ಒಡವೆಗಳ ಮೇಲಿನ ಆಸೆಯಿಂದ ಜೀವಕ್ಕೆ ಕೇಡು ತಂದುಕೊಳ್ಳ ಬೇಡಿ. ನಿಮ್ಮ ತೊಡವುಗಳನ್ನು ಕಳಚಿಕೊಡಿ ತಾಯಿ." ಕೆಳಗೆ ನಿಂತಿದ್ದ ಸಾಬಿ ಹೆಂಗಸರಿಗೆ ಸಲಹೆಯನ್ನು ನೀಡಿದ.

ಸೊಸೆ, ಮಗಳು, ಎಲ್ಲರೂ ರಾಧಮ್ಮನ ಮೊಗವನ್ನು ನೋಡಿದರು. "ಈ ದುರುಳರ ಕೈಯಿಂದೊಮ್ಮೆ ಪಾರಾಗೋಣ. ನಿಮ್ಮ ನಗಗಳನ್ನು ಬಿಚ್ಚಿ ಕೊಡಿ" ಎಂದು ರಾಧಮ್ಮ ಆಣತಿಯಿತ್ತರು.

ಕಿವಿಗಳಿಂದ ಓಲೆಗಳನ್ನು, ಕೊರಳುಗಳಿಂದ ಸರಗಳನ್ನು, ಕೈಗಳಿಂದ ಬಳೆಗಳನ್ನು ಅವರು ಒಂದೊಂದಾಗಿ ಕಳಚಿದರು. ಹುಡುಗರು ತಮ್ಮ ಕೈ ಗಡಿಯಾರಗಳನ್ನು ಬಿಚ್ಚಿವರು. ಎಲ್ಲ ಒಡವೆಗಳನ್ನೂ ತೆಗೆದು ರಾಧಮ್ಮ ಕಳ್ಳರ ಕೈಗೆ ಒಪ್ಪಿಸಿದರು. ಕಳ್ಳರಲ್ಲಿ ಹಿರಿಯ ಅವರಿತ್ತ ಒಡವೆ ನಗಗಳನ್ನೆಲ್ಲಾ ತೆಗೆದು ತನ್ನ ಜೇಬುಗಳಲ್ಲಿ ತುಂಬಿಸಿಕೊಂಡ. ಕೊನೆಗೆ ಈ ಮಾತುಗಳು ಅವನ ಕೊರಳಿಂದ ಹೊರಟುವು. "ಒಳ್ಳೆಯದು. ನೀವು ಬುದ್ಧಿವಂತರು ತೊಂದರೆಯಿಲ್ಲದೆ ನಮ್ಮ ಕೆಲಸವನ್ನು ಸಾಗಗೊಟ್ಟುದಕ್ಕೆ ವಂದನೆಗಳು."

"ವಂದನೆಗಳು!" ರಾಧಮ್ಮ ಸಿಟ್ಟನಿಂದ ತುಟಿಕಚ್ಚಿದರು.

ಇನ್ನೊಂದು ಅರೆಚಣದಲ್ಲಿ ಆ ದುರುಳರು ಕತ್ತಲೆಯಲ್ಲಿ ಮರೆಯಾದರು.

× × × ×

ದೇವಣ್ಣ ಊರ ಕೆರೆಯ ದಂಡೆಯಲ್ಲಿ ನಿಂತು ತನ್ನ ಒಡನಾಡಿ ಕುಪ್ಪಣ್ಣನ ಬರವನ್ನು ಇದಿರು ನೋಡುತ್ತಿದ್ದ. ಸಮಯ ಮೂರುತಾಸು ಹಗಲು. ಆಗಸದಿಂದ ನೇಸರು ಕೆಳಗಿಳಿಯುತಿದ್ದ. ಅವನ ಬಿಸುಗದಿರುಗಳು ಕೆರೆಯ ನೀರನ್ನು ಮುತ್ತಿಡುತಿದ್ದುವು. ಮೆದುವಾಗಿ ಸುಳಿವ ತಂಗಾಳಿಗೆ ನೀರ ಮೇಲೆ ಕಿರು ಅಲೆಗಳು ಏಳುತಿದ್ದುವು.

ದೇವಣ್ಣ ಒಂದು ಹೊಲಸು ಪಂಚೆಯನ್ನು ಸೊಂಟಕ್ಕೆ ಸುತ್ತಿದ್ದ. ಹರಿದ ಅಂಗಿಯೊಂದು ಮೈಯನ್ನು ಮುಚ್ಚಿದ್ದಿತು. ತಲೆಯ ಮೇಲೆ ಒಂದು ಹೊಲಸು ಮುಂಡಾಸು. ಆತ ಬೀಡಿಯೊಂದನ್ನು ಹೊತ್ತಿಸಿ ಸೇದುತಿದ್ದ. ಅವನ ಕಣ್ಣುಗಳು ಕುಪ್ಪಣ್ಣನ ಹಾದಿಯನ್ನು ಇದಿರು ನೋಡುತಿದ್ದುವು.

ಕೆಲ ನಿಮಿಷಗಳಲ್ಲಿಯೇ ಕುಪ್ಪಣ್ಣನ ಆಕೃತಿಯು ಅವನ ಕಣ್ಣುಗಳಿಗೆ ಗೋಚರಿಸಿತು. ಕುಪ್ಪಣ್ಣನ ಮೈ ತೆಳ್ಳಗಿನದು. ಬೆತ್ತದಂತೆ ಸಪೂರವಾದ ತೋಳುಗಳು. ಬಿಳಿದಾದ ಒಂದು ಉದ್ದದ ಇಜಾರನ್ನು ಆತ ಧರಿಸಿದ್ದ. ಉದ್ದ ತೋಳಗಳ ಜುಬ್ಬವೊಂದು ಅವನ ಮೈಯನ್ನು ಮುಚ್ಚಿದ್ದಿತು. ತಲೆಯ ಮೇಲಿನ ನವಿರುಗಳು ಎದ್ದು ನಿಂತು ಆಗಸವನ್ನು ನಿಟ್ಟಿಸುತಿದ್ದುವು. ಆತ ಒಡನಾಡಿಯ ಸನಿಹಕ್ಕೆ ಬಂದ.

" ಹೋದ ಕೆಲಸವೇನಾಯಿತು ? " ದೇವಣ್ಣ ಉತ್ಸುಕತೆಯಿಂದ ಗೆಳೆಯನನ್ನು ಪ್ರಶ್ನಿಸಿದ.

ಕುಪ್ಪಣ್ಣ ಜತೆಗಾರನ ಪ್ರಶ್ನೆಗೆ ಒಡನೆ ಉತ್ತರಿಸಲಿಲ್ಲ. ಇಜಾರದ ಜೇಬಿನಿಂದ ಅವನು ಕರವಸ್ತ್ರವೊಂದನ್ನು ತೆಗೆದು ಹಣೆಯ ಮೇಲೆ ಮೂಡಿದ್ದ ಬೆವರು ಹನಿಗಳನ್ನು ಒರೆಸಿಕೊಂಡ. ಅವನ ಎದೆಯಿಂದ ಸೋಲನ್ನು ಅರುಹುವ ನಿಡಿದು ಉಸಿರೊಂದು ಹೊರಟಿತು. ತನ್ನ ಇಜಾರದ ಕಿಸೆಗಳಿಗೆ ಕೈಗಳನ್ನು ತೂರಿಸಿ ಮೆದು ನುಡಿಯಲ್ಲಿ ಅವನು ಉಸುರಿದ.

" ಮೊಗಕ್ಕೆ ಮಸಿ ಬಳಿದುಕೊಂಡುದಾಯಿತು ! "

" ಏನು ಮಾವಂದಿರಿಗೆ ನಮ್ಮ ಸುಳಿವು ಸಿಕ್ಕಿತೇ ? " ಅಂಜಿಕೆ ಬೆರೆತ ದನಿಯಲ್ಲಿ ದೇವಣ್ಣ ಅಂದ.

" ಚಿನಿವಾರ ಗುಂಡಯ್ಯನೇನಾದರೂ ಮೋಸಮಾಡಿದನೇ ? " ಉತ್ಸುಕತೆಯಿಂದ ದೇವಣ್ಣ ನಡುವೆ ಬಾಯಿಹಾಕಿದ.

" ಗುಂಡಯ್ಯ ನೀನಾದರೂ ಬತ್ತಿ ಕೊಡಲು ಹವಣಿಸಿದ್ದರೆ, ಅವನ ಕೊರಳನ್ನು ಹಿಚುಕಿ ಯಮಲೋಕದ ಹಾದಿಯನ್ನು ತೋರಿಸುತಿದ್ದೆ. "

" ಮತ್ತೇನಾಯಿತು ? " ದೇವಣ್ಣ ಜತೆಗಾರನ ಮಾತಿನ ಹೊಲಬನ್ನು ಅರಿಯದ ಕಣ್ಣ ಮುಂದಿನ ಶೂನ್ಯನಭವನ್ನು ನಿಟ್ಟಿಸಿದ.

" ನಿನ್ನೆ ರಾತ್ರಿ ನಾವು ಸಂಪಾದಿಸಿದುದು ಚಿನ್ನದ ಒಡವೆಗಳಲ್ಲ ! " ಕುಪ್ಪಣ್ಣ ನಿಧಾನವಾಗಿ ತನ್ನ ಎದೆಯಲ್ಲಿ ಅಡಕವಾಗಿದ್ದ ಸಂಗತಿಯನ್ನು ಉಸುರಿದ.

" ಚಿನ್ನದ ಒಡವೆಗಳಲ್ಲ ! " ಆಚ್ಚರಿಯ ಕಣಗಳು ದೇವಣ್ಣನ

ಕಣ್ಣುಗಳಲ್ಲಿ ತೇಲಿದುವು. ಒಡನಾಡಿಯ ನುಡಿ ಕೇಳಿ ಅವನ ಬುದ್ಧಿಗೆ ಮಂಕು ಕವಿದಂತಾಯಿತು.

" ಅವು ಗಿಲೀಟಿನ ಒಡವೆಗಳು. ಎಲ್ಲಾ ರೋಲ್ಡ್ ಗೋಲ್ಡ್ ಸಾಮಾನು ಗಳು ಮೂರು ನತ್ತುಗಳನ್ನು ಬಿಟ್ಟರೆ ಚಿನ್ನದ ಒಡವೆಗಳು ಯಾವವೂ ಇಲ್ಲ. " ಕುಪ್ಪಣ್ಣ ಹೇಳಿದ " ಗುಂಡಯ್ಯನಲ್ಲಿ ಒಡವೆಗಳನ್ನು ಒರೆಗೆ ಹಚ್ಚಿದಾಗ ಗೊತ್ತಾಯಿತು. "

" ಆದರೆ ಹುಡುಗರ ಕೈಗಡಿಯಾರಗಳು ? " ಆಶೆಯ ಕಿರಣವೊಂದು ದೇವಣ್ಣನ ಎದೆಯಲ್ಲಿ ಚಿಗುರಿತು.

" ಅವು ಹತ್ತು ರೂಪಾಯಿಗಳಿಗೆ ಮೂರು ಗಡಿಯಾರಗಳ ಮಾದರಿ ಯವು ! "

ದೇವಣ್ಣನ ಎದೆಯಲ್ಲಿ ಚಿಗುರಿದ್ದ ಆಶೆಯ ಕುಡಿ ಮುರುಟಿಹೋಯಿತು. ಕುಪ್ಪಣ್ಣ ಒಬ್ಬ ವೇದಾಂತಿಯಂತೆ ಆಲೋಚಿಸಿದ್ದ. ಆದರೆ ಈಗ ನಮಗಿಂತಲೂ ಜಾಣರು ! "

" ಪಕ್ಕಾ ಕೀಲಾಡಿಗಳು ! " ಅಳುವ ದನಿಯಲ್ಲಿ ದೇವಣ್ಣ ಹೇಳಿದ.

" ಜಟ್ಕಾ ಸಾಬಿಗೆ ಕೊಟ್ಟ ಹತ್ತು ರೂಪಾಯಿಗಳೂ ಹೋದುವು ! "

" ದೇವಣ್ಣ, ಚೆಲ್ಲಿದ ಹಾಲಿಗೋಸುಗ ಅತ್ತು ಪ್ರಯೋಜನವಿಲ್ಲ. " ಗೆಳೆಯನನ್ನು ಸಂತೈಸುವ ದನಿಯಾಗಿತ್ತು ಕುಪ್ಪಣ್ಣನದು. " ಇನ್ನು ಮುಂದಿನ ಕೆಲಸ. "

" ಮುಂದಿನ ಕೆಲಸ ? "

" ಅಹುದು ಹೊಟ್ಟೆಯ ಚಿಂತೆ ಯಾರನ್ನೂ ಬಿಡದು. ಅದಕ್ಕೋಸುಗ ಒಂದು ಹೊಸ ಹಂಚಿಕೆಯನ್ನು ಹಾಕಬೇಕು. "

" ಸರಿ ಇಂದು ರಾತ್ರಿ ಕೈಗೊಳ್ಳಬೇಕಾದ ಉಜ್ಜುಗ ಯಾವುದು ? " ದೇವಣ್ಣನ ದನಿ ಹುರುಪುಗೂಡಿತು. " ನೀನು ಹೇಳಿದಂತೆ ನಡೆಯುವೆನು; ನಿನ್ನನ್ನೇ ಹಿಂಬಾಲಿಸುವೆನು "

" ಇಂದಿನ ಸಾಹಸವೇನೆಂಬುದನ್ನು ನಾನು ಆಮೇಲೆ ತಿಳಿಸುತೇನೆ. ರಾತ್ರಿ ಹತ್ತು ತಾಸಿಗೆ ನೀನು ನನ್ನನ್ನು ಹನುಮನ ಗುಡಿಯ ಬಳಿ ಕಾದಿರು. "

" ಆಗಲಿ ಕುಪ್ಪಣ್ಣ. ನಿನ್ನ ಅಪ್ಪಣೆಯಂತೆ. "

" ಇಂದು ಒಂದು ದೊಡ್ಡ ಸಾಹಸಕ್ಕೇ ಕೈ ಹಾಕಬೇಕು. ನಾಳೆ ಜೆಳಗಾದರೆ, ನನಗೆ ಒಂದು ನೂರುರೂಪಾಯಿಗಳ ಅಗತ್ಯವಿದೆ "

( ೪ )

ಮಧ್ಯಾಹ್ನ ಊಟಕ್ಕೆಂದು ಮಾಸ್ತರರು ಮನೆಗೆ ಬಂದಾಗ ಅವರು ಬಹಳ ಉತ್ಸಾಹದಲ್ಲಿದ್ದರು. ಸೊರಗಿದ ಅವರ ಮೋರೆಯಿಂದ ಹರುಷದ ಕದಿರುಗಳು ಹೊಮ್ಮುತ್ತಿದ್ದು. ಕಣ್ಣುಗಳಲ್ಲಿ ಸಂತಸದ ಕಣಗಳು ತೇಲುತಿದ್ದವು. ಅವರ ಪ್ರಾಯವೇ ನಾಲ್ಕು ವರುಷಗಳಷ್ಟು ಇಳಿದಂತೆ ತೋರುತಿದ್ದಿತು. ಅವರು ನಡುಮನೆಯಲ್ಲಿ ತಮ್ಮ ಹೆಜ್ಜೆಗಳನ್ನಿರಿಸಿ, " ಸೀತಾ " ಎಂದು ತಮ್ಮ ಬಾಳುವೆಯ ಜೊತೆಗಾತಿಯನ್ನು ಕರೆದರು.

ಸೀತಮ್ಮ ಅಡಿಗೆ ಕೋಣೆಯಲ್ಲಿ ಅಡುವ ಕೆಲಸವನ್ನು ಮುಗಿಸಿದ್ದಳು. ಆಕೆಯ ಕೈಗಳು ಕಸಬರಿಗೆಯನ್ನು ತೆಗೆದುಕೊಂಡು ಕಸವನ್ನು ಉಡುಗುತಿದ್ದವು. ಗಂಡನ ಕೂಗು ಗಾಳಿಯಲ್ಲಿ ತೇಲಿಬಂದು ಅವಳ ಕಿವಿಗಳನ್ನು ಪ್ರವೇಶಿಸಿತು. ಆಕೆ ಕಸಬರಿಗೆಯನ್ನು ಮೂಲೆಯಲ್ಲಿರಿಸಿ ನಡು ಮನೆಗೆ ಬಂದಳು.

" ಏನು ಕರೆದಿರಾ ? " ಮೃದುದನಿಯು ಹೊರಟಿತು. ಸೀತಮ್ಮನ ಕೊರಳಿಂದ.

" ಅಹುದು. ಸೀತಾ ದೇವರು ಕಂದೆರೆದ. ಇದುವರೆಗೆ ನಮ್ಮ ನೋವು ನರಳಿಕೆಗಳನ್ನು ಕಂಡು ಕನಿಕರಗೊಳ್ಳದಿದ್ದ ಪರಮಾತ್ಮನ ಎದೆ ಈಗ ಮೆದುವಾಯಿತು. "

" ನಾಗಪ್ಪ ಶೆಟ್ಟಿಯ ಕಡತೀರಿಸಲು ಎಲ್ಲಿಯಾದರೂ ಸಾಲ ದೊರಕಿತಲ್ಲ. "

" ಸಾಲವಲ್ಲ, ಅದಕ್ಕಿಂತಲೂ ಹೆಚ್ಚಿನದು. ಅದಕ್ಕಿಂತಲೂ ಮಿಗಿಲಾದ ನೆರವು ಬಂದಿದೆ. ಇದು ವಾಸ್ತವವೆಂದು ನನ್ನ ಬುದ್ಧಿಯೇ ನಂಬುವುದಿಲ್ಲ. ಆದರೂ ನಿಜ. ಒಂದು ಕಾಸಿಗೋಸುಗ ಹೊಡೆದಾಡುವ ಈ ಪ್ರಪಂಚದಲ್ಲಿ ಇಂತಹ ಉದಾರಿಗಳು ಇದ್ದಾರಲ್ಲ! "

" ನೀವು ಹೇಳುವುದೊಂದೂ ನನಗೆ ಮಂದಟ್ಟಾಗುವುದಿಲ್ಲ. ಯಾರು

ನನಗೆ ನೆರವು ಗೈಯನ್ನು ಚಾಚಿದವರು " ಸೋಜಿಗ ಬೆರೆತ ದನಿಯಲ್ಲಿ ಸೀತಮ್ಮ ಉಸುರಿದಳು. "ಎಲ್ಲವನ್ನೂ ತುಸ ಬಿಚ್ಚಿ ಹೇಳಿ."

"ಇಗೋ ಇವನ್ನು ನೋಡು. ಇವೇ ಎಲ್ಲವನ್ನೂ ನಿನಗೆ ಬಿಚ್ಚಿ ಹೇಳುವುವು ಮಾಸ್ತರರು ತಮ್ಮ ಒಳಜೇಬಿನಿಂದ ಲಕ್ಕೋಟೆಯೊಂದನ್ನು ಹೊರತೆಗೆದರು. ಅದನ್ನು ಅವರು ಮಡದಿಯ ಕೈಗಳಲ್ಲಿ ಇರಿಸಿದರು.

ಸೀತಮ್ಮ ಲಕ್ಕೋಟೆಯನ್ನು ತೆರೆದಳು. ಹತ್ತು ರೂಪಾಯಿಗಳ ಕೆಲವು ನೋಟುಗಳು ಅವಳ ಬೆರಳುಗಳಿಗೆ ದೊರೆತುವು ಆಕೆ ನೋಟುಗಳನ್ನು ಎಣಿಸಿದಳು. ಹತ್ತು ರೂಪಾಯಿಗಳ ಆರು ನೋಟುಗಳಿದ್ದುವು. ಅನಂತರ ಒಂದು ಸಣ್ಣ ಚೀಟಿ. ಆ ಕಾಗದದ ತುಂಡಿನ ಮೇಲೆ ಕೆಲವು ಅಕ್ಷರಗಳು ಮೂಡಿದ್ದುವು. ಆ ಬರಹವನ್ನು ಆಕೆಯ ಕಣ್ಣುಗಳು ಓದಿದುವು.

"ನೀವು ಬಡತನದ ಬೇಗೆಗೆ ಸಿಲುಕಿ ಸಂಕಟದಲ್ಲಿರುವಿರೆಂದು ಅರಿವಾಯಿತು. ನಿಮಗೆ ನೆರವಾಗಲೆಂದು ಅರುವತ್ತು ರೂಪಾಯಿಗಳನ್ನು ಕಳುಹಿಸಿದೇನೆ. — ನಿಮ್ಮ ಹಿತಕಾಂಕ್ಷಿ"

"ನಮ್ಮ ಮೇಲೆ ಕನಿಕರದ ಮಳೆಯನ್ನು ಸುರಿಸಿದ ಹಿತಕಾಂಕ್ಷಿ ಯಾರು ?" ಸೀತಮ್ಮ ಆಣ್ಮನ ಮೊಗವನ್ನು ನೋಡಿದಳು.

"ನನಗೆ ತಿಳಿಯದು. ಯಾರಿರಬಹುದೆಂದು ಆಲೋಚಿಸುತ್ತಿದೇನೆ '

"ಎಲ್ಲಿ, ಯಾವ ಊರಿನಿಂದ ಕಳುಹಿದುದೆಂದು ನೋಡುತ್ತೇನೆ." ಸೀತಮ್ಮ ಲಕ್ಕೋಟೆಯ ಅಂಚೆ ಚೀಟಿಯ ಮೇಲೆ ಬಿದ್ದ ಅಂಚೆಮನೆಯ ಮುದ್ರೆಯನ್ನು ನೋಡಿದಳು. ಆ ಮುದ್ರೆಯಾದರೂ ಅದೇ ಊರಿನದೇ.

"ಈ ಊರಿನವರೇ ಕಳುಹಿಸಿದಾರೆ"

"ನಿಜ ಆದರೆ ಯಾರು ?" ಎಂದು ಮರಳಿ ಪ್ರಶ್ನಿಸಿದರು ಮಾಸ್ತರರು.

"ಹಣ ಕಳುಹಿದವರು ಯಾರೇ ಇರಲಿ. ಬಟ್ಟೆ ಬಿಚ್ಚಿ ಕೈಕಾಲುಗಳನ್ನು ತೊಳೆದುಕೊಳ್ಳಿ. ಊಟಕ್ಕೆ ಹೊತ್ತಾಯಿತು."

ಮಾಸ್ತರರು ತಮ್ಮ ಕೋಟು ರುಮಾಲುಗಳನ್ನು ಬಿಚ್ಚಿ ಗೂಟದ ಮೇಲೆ ನೇತು ಹಾಕಿದರು. ನೀರುಮನೆಗೆ ಹೋಗಿ ಅವರು ಕೈಕಾಲು ಮೋರೆಗಳನ್ನು ತೊಳೆದುಕೊಂಡರು. ಅವರು ಅಡಿಗೆ ಕೋಣೆಗೆ ಬಂದಾಗ ಸೀತಮ್ಮ ತಟ್ಟೆ

ಹಾಕಿದ್ದಳು. ಮಾಸ್ತರರು ತಟ್ಟೆಯ ಮುಂದೆ ಕುಳಿತರು. ಅವರ ಎಡಬಲ ಗಳಲ್ಲಿ ಹಸುಳೆಯರಿಬ್ಬರು ಮಂಡಿಸಿದ್ದರು. ಸೀತಮ್ಮ ಅನ್ನ ಬಡಿಸಿದಳು.

"ರಾಮು, ನಿನ್ನ ಜುಬ್ಬವೆಲ್ಲ ಹರಿದು ಹೋಗಿದೆಯಲ್ಲವೇನೋ?" ಸಾರು ಅನ್ನವನ್ನು ಕಲೆಸುತಿದ್ದ ಮಾಸ್ತರರು ನುಡಿದರು.

"ಅಹುದುಣ್ಣ, ನೀನು ಒಂದೇ ಒಂದು ಅಂಗಿಯಾದರೂ ಹೊಲಿಸಿ ಕೊಡಲಿಲ್ಲ." ರಾಮು ಅಳು ಮೋರೆಯನ್ನು ಮಾಡಿದ.

"ಅಳಬೇಡ ಕಂದ." ಮಾಸ್ತರರ ಕೊರಳಿಂದ ಸಂತೈಸುವ ನುಡಿ ಹೊರಟಿತು. "ಇಂದು ಸಂಜೆಗೆ ನಾವು ಪೇಟೆಗೆ ಹೋಗುವಾ. ಬಟ್ಟೆ ತೆಗೆದು ನಿನಗೊಂದು ಅಂಗಿಯನ್ನು ಹೊಲಿಯಲು ಹಾಕುತೇನೆ."

"ಅಣ್ಣಾ, ನನಗೂ ಒಂದು ಅಂಗಿ." ಈತನಕ ಮಾತಾಡದೆ ಉಣುವುದ ರಲ್ಲಿ ಆಸಕ್ತನಾಗಿದ್ದ ದಾಮು ನಡುವೆ ಬಾಯಿ ಹಾಕಿದ.

"ಅಹುದು. ನಿನಗೂ ಒಂದು ಅಂಗಿ ಹೊಲಿಸುತ್ತೇನೆ."

ಆದರೆ ಕಿರಿಯನ ಬೇಡಿಕೆ ಅಲ್ಲಿಗೇ ಕೊನೆಗೊಳ್ಳಲಿಲ್ಲ. ಅವನ ನುಡಿಗಳು ಮುಂದುವರಿದುವು. "ಅಣ್ಣ, ನನಗೊಂದು ಪೀಪಿ ಬೇಕು."

"ಆಗಲಿ. ಪೀಪಿಯನ್ನು ತರುವಾ."

"ಅಣ್ಣಾ, ನನಗೊಂದು ಚೆಂಡು." ಎಂದು ದನಿತೆಗೆದ ರಾಮು.

"ಆಗಲಿ–" ಎಂದರು ಮಾಸ್ತರರು.

"ನಿಮಗೆ ಬೇಕಾದುವನ್ನು ಆ ಮೇಲೆ ಹೇಳಿ. ಈಗ ಅಣ್ಣ ಊಟ ಮಾಡಲಿ." ಒಲೆಯ ಮುಂದೆ ಕುಳಿತು ಮಕ್ಕಳ ಮಾತುಕತೆಗಳನ್ನು ಆಲಿಸು ತಿದ್ದ ಸೀತಮ್ಮ ನುಡಿದಳು.

ಮಾಸ್ತರರ ತಟ್ಟೆಯಲ್ಲಿ ಸಾರು ಅನ್ನ ಮುಗಿದಿತ್ತು. ಸಾರಿನ ಸೌಟನ್ನು ಕೈಯಲ್ಲಿ ಹಿಡಿದು ಸೀತಮ್ಮ ಅಂದಳು. "ತುಸ ಸಾರು ಬಡಿಸಲೇ?"

"ಬಡಿಸು" ಮಾಸ್ತರರು ಮಾರ್ನುಡಿದರು. "ಇಂದಿನ ಸಾರು ಬಹಳ ಸೊಗಸಾಗಿದೆ!"

ಸೀತಮ್ಮ ಸಾರು ಬಡಿಸಿದಳು. ಮಾಸ್ತರರ ಊಟ ಮುಂದುವರಿದಿತು.

ಅಂದು ಉಣುತಿದ್ದಾಗ ಮಾಸ್ತರರು ಹುಡುಗರ ಸಂಗಡ ಬಾಯಿ ತುಂಬಾ ಮಾತಾಡಿದರು. ಒಂದೆರಡು ನಗು ಮಾತುಗಳಿಂದ ಮಡದಿಯ

ಮೊಗ ಮಲ್ಲಿಗೆಯನ್ನು ಅರಳಿಸಿದರು. ಇಂದು ತಾವು ಎಂದಿಗಿಂತಲೂ ಹೆಚ್ಚಾಗಿ ನಾಲ್ಕು ತುತ್ತು ಅವರು ಊಟಮಾಡಿರುವೆವೆಂಬುದು ಮಾಸ್ತರರಿಗೆ ತಿಳಿಯಲೇ ಇಲ್ಲ.

ಮಾಸ್ತರರ ಊಟ ಮುಗಿದ ಅನಂತರ ಸೀತಮ್ಮ ಅನ್ನದ ಪಾತ್ರೆಯನ್ನು ನೋಡಿದಳು. ನಾಲ್ಕು ತುತ್ತು ಕೂಳು ಮಾತ್ರ ಅಲ್ಲಿ ಉಳಿದಿತ್ತು. "ಇಂದಾದರೂ ನಾಲ್ಕು ತುತ್ತು ಅನ್ನವನ್ನು ಅವರು ಬೇಸರವಿಲ್ಲದೆ ಉಂಡರಲ್ಲ!" ಎಂಬ ಸಂತಸದ ಉದ್ಗಾರ ಅವಳ ಎದೆಯಿಂದ ಮೂಡಿತು!

( ೫ )

ನೇಸರು ಪಡುವಣದ ಬಾನಂಚನ್ನು ಸೇರುತಿದ್ದಾಗ ಶಾಲೆಯ ವಿದ್ಯಾರ್ಥಿಗಳು ಕಾಲ್ಚೆಂಡಿನ ಆಟವನ್ನು ಮುಗಿಸಿಕೊಂಡು ತಮ್ಮ ವಸತಿಗಳಿಗೆ ಹಿಂದಿರುಗುತಿದ್ದರು. ಅವರ ಕೊರಳುಗಳಿಂದ ಮೂಡಿದ ನಗೆ ಮಾತುಗಳು ಬಾನಿನಲ್ಲಿ ಹಾರುವ ಹಕ್ಕಿಗಳ ಕೊರಳುಲಿಗಳೊಡನೆ ಒಂದುಗೂಡುತಿದ್ದುವು. ಆದರೆ ವಸಂತ ಮಾತ್ರ ಎಲ್ಲರಿಗಿಂತಲೂ ಹಿಂದೆ ಒಬ್ಬಂಟಿಗನಾಗಿ ತಲೆಯನ್ನು ತಗ್ಗಿಸಿಕೊಂಡು ಬರುತಿದ್ದ. ಅವನ ಎಳೆ ಮೊಗದಲ್ಲಿ ಚಿಂತೆಯ ಕಾರ್ಮೋಡವು ಸುಳಿದಾಡುತಿದ್ದಿತು. ಆಗಾಗ ಎದೆಯಿಂದ ಹೊರಟ ನಿಟ್ಟುಸಿರುಗಳು ಗಾಳಿಯಲ್ಲಿ ಬೆರೆಯುತಿದ್ದುವು.

ವಸಂತ ಹಿಂದುಳಿದುದನ್ನು ಕಂಡು ಅವನ ಗೆಳೆಯ ತಿಮ್ಮಯ್ಯ ನಿಂತ. ತನ್ನ ಗೆಳೆಯ ಎಂದಿನಂತಿಲ್ಲ ಎಂಬುದು ತಿಮ್ಮಯ್ಯನಿಗೆ ಅರಿವಾಯಿತು. ಅವುದೋ ಒಂದು ಚಿಂತೆಯ ಹುಳು ಅವನ ಮಿದುಳನ್ನು ತಿನ್ನುತ್ತಲಿದೆ ಎಂದು ಅವನು ಊಹಿಸಿದ. ಆದರೆ ಅದೇನೆಂಬುದು ತಿಮ್ಮಯ್ಯನಿಗೆ ತಿಳಿಯದು.

ಈಗ ವಸಂತ ತಿಮ್ಮಯ್ಯನ ಸನಿಹಕ್ಕೆ ಬಂದಿದ್ದ. ತಿಮ್ಮಯ್ಯ ಗೆಳೆಯನ ಹೆಗಲ ಮೇಲೆ ಕೈಹಾಕಿ ನುಡಿದ. "ಏನು ವಸಂತು! ಈ ದಿನ ನಗೆಯಿಲ್ಲ; ಮಾತಿಲ್ಲ ದೆವ್ವ ಹಿಡಿದವರಂತೆ ಗುರುಗುಮ್ಮನೆ ಇದ್ದಿಯಲ್ಲ!"

"ಏನೂ ಇಲ್ಲ ತಿಮ್ಮ" ವಸಂತನ ಕೊರಳಿಂದ ಮಾರುಲಿ ಬಂತು. "ಮನಸ್ಸಿಗೆ ನೆಮ್ಮದಿಯಿಲ್ಲ."

"ಅಂತಹ ಚಿಂತೆ ಯಾವುದೋ? ಲೆಕ್ಕದ ಮಾಸ್ತರರ ಬೈಗಳನ್ನು ಮನಸ್ಸಿಗೆ ಹಚ್ಚಿಕೊಂಡಿದ್ದಿಯಾ?"

"ತಪ್ಪು ಮಾಡಿದ ಹುಡುಗರನ್ನು ಬೈವುದು ಮಾಸ್ತರರ ಹುಟ್ಟುಗುಣ. ಅದನ್ನೇಕೆ ನಾನು ಮನಸ್ಸಿಗೆ ಹಚ್ಚಿಕೊಳ್ಳಬೇಕು."

"ಹಾಗಾದರೆ ನಿನ್ನ ಬೆಸನದ ಕಾರಣ?" ತಿಮ್ಮಯ್ಯನ ಕಣ್ಣುಗಳಲ್ಲಿ ಅಚ್ಚರಿ ನೆಲೆಸಿತು.

"ನಾನು ಶಾಲೆಯನ್ನು, ನಿಮ್ಮೆಲ್ಲರ ಒಡನಾಟವನ್ನು ಬಿಟ್ಟು ಹೋಗುವ ಕಾಲ ಬಂದಿದೆ." ವ್ಯಸನ ತುಂಬಿದ ಎದೆಯಿಂದ ವಸಂತ ನುಡಿದ.

"ನೀನು ತಮಾಷೆ ಮಾಡುತ್ತಿರುವೆ. ಇನ್ನೂ ನೀನು ಮೆಟ್ರಿಕ್ಕಿಗೆ ತಲುಪಿಲ್ಲ. ಶಾಲೆ ಬಿಡುವುದೇಕೆ? ಎಲ್ಲಿಗೆ ಹೋಗುವೆ?"

"ಊರಿಗೆ."

"ತಂದೆಯಂತೆ ಗುಡಿಗುಂಡಾರಗಳಲ್ಲಿ ಅರ್ಚಕ ವೃತ್ತಿಯನ್ನು ಕೈಗೊಳ್ಳುವುದೇ?"

"ಅರ್ಚಕ ವೃತ್ತಿಯಾದರೆ ಅದನ್ನೇ. ಹೊಟ್ಟೆ ಪಾಡಿಗೆ ಏನಾದರೂ ಒಂದು ಕಸುಬು ಬೇಕಲ್ಲ!"

"ಆದರೆ ನೀನೇಕೆ ಶಾಲೆ ಬಿಡುವುದು?"

"ತಂದೆಯಿಂದ ಕಾಗದ ಬಂದಿದೆ. ಶಾಲೆಯನ್ನು ಬಿಟ್ಟು ಮನೆಗೆ ಬಾ" ಎಂದು ಬರೆದಿದ್ದಾರೆ.

"ವಸಂತ, ಒಲ್ಲೆನೆಂದು ಹೇಳು. ಮೆಟ್ರಿಕ್ ತನಕ ಓದಬೇಕೆಂದು ಹಟ ಹಿಡಿ." ತಿಮ್ಮಯ್ಯ ಗೆಳೆಯನಿಗೆ ಸಲಹೆ ನೀಡಿದ. "ಶಾಲೆಯಿಂದ ಬಿಡಿಸಿದರೆ ಉಪವಾಸ ಗೈವೆನೆಂದು ಸತ್ಯಾಗ್ರಹ ಹೂಡು."

"ತಿಮ್ಮ, ನಿನ್ನ ತಂದೆಯಂತೆ ನನ್ನ ಅಪ್ಪ ಹಣಗಾರನಲ್ಲ." ಸಾವಧಾನವಾಗಿ ವಸಂತ ನುಡಿದ. "ಧನಿಕನಾದರೆ ಸತ್ಯಾಗ್ರಹ ಹೂಡಬಹುದಿತ್ತು. ಆತ ಊರ ಗುಡಿಯ ಪೂಜೆಯಿಂದ ಏಳು ಒಡಲುಗಳನ್ನು ಹೊರೆಯಬೇಕು. ಈ ತನಕ ನನಗೆ ವಿದ್ಯೆ ಕಲಿಸಿದುದೆಂದರೆ ತುಂಬಾ ಸಾಹಸದ ಕೆಲಸ!"

"ಹಾಗಾದರೆ ಏನು ಮಾಡಬೇಕೆಂದಿರುವೆ?" ತಿಮ್ಮಯ್ಯ ಗೆಳೆಯನ ಮೊಗವನ್ನು ನೋಡಿದ.

"ಏನು ಗೈಯ ಬೇಕೆಂಬುದು ನನಗೆ ತಿಳಿಯದಾಗಿದೆ. ತಂದೆಯ ಬದುಕೇ ಆತನಿಗೆ ಹೊರಲಾರದ ಒಂದು ಹೊರೆಯಾಗಿದೆ. ನೋಡು, ನನ್ನ

ಅಪ್ಪನ ಕಾಗದವನ್ನು. ” ವಸಂತ ಜೇಬಿನಿಂದ ತಂದೆಯ ಕಾಗದನನ್ನು ಹೊರ ತೆಗೆದ. ತಿಮ್ಮಯ್ಯ ಅವನಿಂದ ಪತ್ರವನ್ನು ತೆಗೆದು ಓದಿದ.

“ ವಸಂತ,

ನನ್ನ ಸ್ಥಿತಿಯನ್ನು ನೀನು ಬಲ್ಲೆ. ನೀನು ವಿದ್ಯೆ ಕಲಿತು ಬುದ್ಧಿವಂತನಾಗ ಬೇಕೆಂದು ಶಕ್ತಿಮೀರಿ ನಾನು ಸಾಹಸಗೈದೆ. ಕಳೆದ ತಿಂಗಳಿನಿಂದ ದೇವನ ಹಳ್ಳಿಯ ಶಾಂತಿಗೆ ಸೊನ್ನೆ ಬಿತ್ತು. ಪೂಜೆ ಪುನಸ್ಕಾರಗಳಿಗೆ ಮೊದಲಿನಂತೆ ಆಮಂತ್ರಣ ಸಿಗುತ ಲಿಲ್ಲ. ಇನ್ನು ಮುಂದೆ ನಿನ್ನ ವಿದ್ಯೆಗೋಸುಗ ತಿಂಗಳಿಗೆ ಇಪ್ಪತ್ತೈದು ರೂಪಾಯಿ ಗಳನ್ನು ತೆರಲು ನನಗೆ ಅಸದಳ. ಆದುದರಿಂದ ಶಾಲೆಯನ್ನು ಬಿಟ್ಟು ಮನೆಗೆ ಬಂದು ಬಿಡು. ಊರ ಜಮೀನ್ದಾರ ಕಾಳಿಂಗ ಗೌಡರು ನಿನಗೆ ಒಂದು ನೌಕರಿಯನ್ನು ಕೊಡಲು ಒಪ್ಪಿದಾರೆ.

ಇಂತೀ ಆಶೀರ್ವಾದಗಳು.

“ ಇನ್ನೇನು ತಂದೆಯ ಹೇಳಿಕೆಯಂತೆ ಊರಿಗೆ ತೆರಳಿ ಜಮೀನ್ದಾರನ ನೌಕರನಾಗಿ ಬಿಡು. ” ಕಾಗದವನ್ನು ಓದಿ ಮುಗಿಸಿದ ಅನಂತರ ತಿಮ್ಮಯ್ಯ ಉಸುರಿದ. “ ಆದರೆ ನೀನು ಹೋಗುವುದೆಂದರೆ ಇಡೀ ಶಾಲೆಗೇ ಬೇಸರ. ಕಾಲ್ಚೆಂಡು ಟೀಮಿನಲ್ಲಿ ಒಳ್ಳೆಯ ಆಟಗಾರನೊಬ್ಬನು ಇಲ್ಲವಾಗುವನು; ಚರ್ಚಾಕೂಟದಲ್ಲಿ ಒಬ್ಬ ಒಳ್ಳೆಯ ಮಾತುಗಾರನು ಇಲ್ಲವಾಗುವನು. ಎಲ್ಲದ ಕ್ಕಿಂತಲೂ ಹೆಚ್ಚಾಗಿ ನನಗೊಬ್ಬ ಗೆಳೆಯನು ಇಲ್ಲವಾಗುವನು. ಇಡೀ ಶಾಲೆ ಯಲ್ಲಿ ನಿನ್ನಷ್ಟು ಹತ್ತಿರದ ಸ್ನೇಹಿತನು ನನಗೆ ಬೇರೆ ಇಲ್ಲ. ನೀನು ಶಾಲೆಯನ್ನು ಬಿಟ್ಟು ಹೋಗಬಾರದು. ಏನಾದರೂ ಒಂದು ಪ್ರಯತ್ನ ಮಾಡಬೇಕು. ”

“ ಯಾವ ಪ್ರಯತ್ನ ? ” ವಸಂತನ ನಿರಾಸೆ ತುಂಬಿದ ನೋಟ ತಿಮ್ಮಯ್ಯನ ಮೊಗದ ಮೇಲೆ ಪಸರಿಸಿತು.

“ ನೀನು ವಾರಾನ್ನವನ್ನು ಮಾಡಿಕೊಂಡಿರಬಹುದು. ಪುಸ್ತಕ ಫೀಸು ಗಳಿಗೋಸುಗ ಜನರಿಂದ ಚಂದಾ ಎತ್ತಬಹುದು. ” ತಿಮ್ಮಯ್ಯ ಉತ್ಸಾಹ ತುಂಬಿದ ದನಿಯಲ್ಲಿ ಹೇಳಿದ.

“ ತಿಮ್ಮು ನಿನಗೆ ಹುಚ್ಚು. ಈ ರೇಷನ್ ಯುಗದಲ್ಲಿ ಯಾರು ತಾನೇ ವಾರಾನ್ನ ಹಾಕುತಾರೆ ? ವಾರನ್ನದ ದಿನಗಳೆಲ್ಲ ಹೋದುವು. ”

“ ಆದರೂ ನಿರಾಶೆಪಡಬೇಡ ವಸಂತು. ” ತಿಮ್ಮಯ್ಯ ಹೇಳಿದ. “ ಈ

ತಿಂಗಳು ಮುಗಿಯಲು ಇನ್ನೂ ನಾಲ್ಕಾರು ದಿನಗಳಿವೆ ಈ ಅವಧಿಯಲ್ಲಿ ಏನಾದರೂ ಮಾಡುವಾ. ”

ತಿಮ್ಮಯ್ಯನ ಮಾತು ಮುಗಿದಾಗ ಅವರು ಶಾಲೆಯ ಹಾಸ್ಟೆಲು ಬಳಿಗೆ ತಲುಪಿದ್ದರು. ಇಬ್ಬರೂ ಹಾಸ್ಟೆಲಿನೊಳಗೆ ಪ್ರವೇಶಿಸಿದರು.

× × × ×

ಆನಂದ ಬೋಧರಾಯರು ಹಿರಿಯ ವ್ಯಾಪಾರಿಗಳಲ್ಲಿ ಒಬ್ಬರು. ಆದರೆ ಯುದ್ಧ ಆರಂಭವಾಗುವ ಮುನ್ನ ಅವರ ಆರ್ಥಿಕ ಪರಿಸ್ಥಿತಿ ತುಸ ಚಿಂತಾ ಜನಕವಾದುದಾಗಿದ್ದಿತು. ಸಾಲದ ಭಾರವು ಅವರ ಹೆಗಲ ಮೇಲೇರಿ ಕುಳಿತಿದ್ದಿತು. ದವಸ ಧಾನ್ಯಗಳು ಪೇಟೆಯಲ್ಲಿ ಸಮೃದ್ಧವಾಗಿದ್ದುದರಿಂದ ಅವರ ವ್ಯವಹಾರವಾದರೂ ಮಂದಗತಿಯಲ್ಲಿ ನಡೆದಿತ್ತು. ತಮ್ಮ ಭಂಡಸಾಲೆಯನ್ನು ಮುಚ್ಚಿ ತಾವೆಲ್ಲಿ ದಿವಾಳಿಯಾಗಬೇಕಾಗುವುದೋ ಎಂದು ಹಿಂದೆ ಹಲವು ಸಲ ಅವರು ಆಲೋಚಿಸಿದ್ದರು.

ಆದರೆ ಅಂತಹ ದಾರುಣ ಪರಿಸ್ಥಿತಿಯು ಒದಗುವ ಮುನ್ನ ಯುದ್ಧ ಬಂದು ರಾಯರಿಗೆ ತನ್ನ ನೆರವು ಗೈಯನ್ನು ಚಾಚಿತು. ಯುದ್ಧದೊಡನೆಯೇ ರಾಯರ ಭಾಗ್ಯಚಕ್ರವಾದರೂ ಉರುಳಿತು. ಕಾಳು ಕಡ್ಡಿಗಳಿಗೆ, ಅರಿವೆ ಹಚ್ಚಡಗಳಿಗೆ, ಬೆಲೆ ಒಂದೇ ಸಮನೆ ಪೇಟೆಯಲ್ಲಿ ಏರತೊಡಗಿತು. ರಾಯರು ಸಂದರ್ಭವನ್ನು ನೋಡಿದರು. ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು, ತಮ್ಮ ಬೊಕ್ಕಸದಲ್ಲಿ ನಾಲ್ಕು ಕಾಸುಗಳನ್ನು ತುಂಬಿಕೊಳ್ಳಲು ಇದು ಸುವರ್ಣಾವಸರವೆಂಬುದು ರಾಯರಿಗೆ ಅರಿವಾಯಿತು. ಅವರು ತಮ್ಮ ಹೊಲಗದ್ದೆಗಳನ್ನು ಮಾರಿ ವ್ಯವಹಾರಕ್ಕೆ ಅಗತ್ಯವೆನಿಸಿದ ಭಂಡವಾಳವನ್ನು ಕಲೆ ಹಾಕಿದರು; ಹಣದ ಬೇಟೆಗೆ ಅವರು ಅಣಿಯಾದರು.

ಆನಂದ ಬೋಧರಾಯರು ಕಾಳು ಕಡ್ಡಿಗಳನ್ನು ಅರಿವೆ ಹಚ್ಚಡಗಳನ್ನು ಕೊಂಡು ಸೇಖರಿಸಿದರು. ಯುದ್ಧದ ಬೇಗೆ ನಾಡಿನ ಉದ್ದಗಲಕ್ಕೂ ಪಸರಿಸಿತು. ಅದರೊಡನೆಯೇ ಸರಕುಗಳ ಬೆಲೆಯಾದರೂ ಮುಗಿಲ ಮಂಡಲಕ್ಕೇರಿತು. ಸರಕಾರದ ನಿಯಂತ್ರಣ ಕಾಯಿದೆಗಳು ಸರಕುಗಳ ಬೆಲೆಯನ್ನು ತಡೆಯಲು ಹವಣಿಸಿದಾಗ, ಕಾಳಸಂತೆಯಲ್ಲಿ ರಾಯರು ತಮ್ಮ ಕೈಯನ್ನು ಚಾಚಿದರು.

ವ್ಯವಹಾರ ಚತುರರಾದ ಅವರ ಕೈವಾಡ, ಸರಕಾರದ ಬೆಲೆ ನಿಯಂತ್ರಣ ಕಾಯಿದೆಗಳನ್ನು ಗೆದ್ದಿತು

ಭಾಗ್ಯಲಕ್ಷ್ಮಿ ಆನಂದಬೋಧರಾಯರಿಗೆ ಒಲಿದಳು. ಹೊನ್ನಿನ ಹೊಳೆ ರಾಯರ ಮನೆ ಬಾಗಿಲಲ್ಲಿ ಹರಿದಿತು. ಬೇಂಕಿನಲ್ಲಿ ಅವರ ಲೆಕ್ಕ ಐದು ಅಂಕೆಗಳ ಸಾಲಿನಿಂದ ಆರು, ಏಳು ಅಂಕೆಗಳ ಸಾಲಿಗೇರಿತು. ರಾಯರ ಕಪಾಟ ವನ್ನು ನೋಟುಗಳ ಕಟ್ಟುಗಳು ತುಂಬ ತೊಡಗಿದುವು. ರಾಯರ ಮಡದಿ ಮತ್ತು ಹೆಣ್ಣುಮಕ್ಕಳ ಕೈ ಮೈಗಳಲ್ಲಿ ಬಂಗಾರದ ಒಡವೆಗಳು ಕಂಗೊಳಿಸಿ ದುವು. ಅಂತೂ ಅವರು ಬಾಳುವೆಯ ಹೋರಾಟದಲ್ಲಿ ಗೆಲುವನ್ನು ಪಡೆದರು. ಗೌರವ ಠೀವಿಗಳು ಬಂದು ಅವರಲ್ಲಿ ನೆಲಸಿದುವು. ಸಮಾಜದಲ್ಲಿ ಅವರು ಒಂದನೆಯ ಸ್ಥಿತಿಯನ್ನು ಪಡೆದರು.

ಅಂದು ರಾಯರು ಉಪ್ಪರಿಗೆಯಲ್ಲಿ ಪವಡಿಸಿದ್ದರು. ಅವರ ಜೀವ ಕನಸಿನ ನಾಡಿನಲ್ಲಿ ವಿಹರಿಸುತಿದ್ದಿತು. ಎಂತಹ ಭಯಂಕರ ಕನಸು ಅದು! ಪರವೂರಿನ ಕಾಳಸಂತೆಯಲ್ಲಿ ವಿಕ್ರಯಿಸಲೋಸುಗ ಇನ್ನೂರು ಚೀಲ ಧಾನ್ಯವನ್ನು ಸಾಗಿಸು ತಿದ್ದಾಗ ಅವರು ಕಂಟ್ರೋಲ್ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದರು. ನೂರರ ಐದು ನೋಟುಗಳನ್ನು ನೀಡಿ ಈ ಕುತ್ತದಿಂದ ಪಾರಾಗ ಬಹುದು ಎಂದು ರಾಯರು ಎಣಿಸಿದ್ದರು. ಆದರೆ ಆ ನಿಯಂತ್ರಣಾಧಿಕಾರಿ ಇತರರಂತಲ್ಲ. ಆತ ತುಂಬಾ ಹಟಮಾರಿ. ಇತರ ಅಧಿಕಾರಿಗಳು ಕಾಳಸಂತೆಯ ಒಡೆಯರ ಕೈ ನೆರಳಿನಲ್ಲಿ ತಮ್ಮ ಬದುಕುಗಳನ್ನು ಉತ್ತಮಗೊಳಿಸುತಿದ್ದಾಗ, ಈ ಘಟಿಂಗನು ತನ್ನನ್ನು ಅಪಮಾನಿಸಬೇಕೆಂದೇ ಪಣ ತೊಟ್ಟಿದಾನೆ. ನೂರರ ಐದು ನೋಟು ಗಳನ್ನು ಕೈಮೇಲಿರಿಸಿದರೂ ಆತ ಮೊಗದಿರುಗಿದ! ಎಂತಹ ಉದ್ಧತ ಪ್ರವೃತ್ತಿ ಆತನದು.

ಪೋಲೀಸು ಸಿಪಾಯಿಗಳು ತಮ್ಮ ಕೈಗಳಿಗೆ, ಸಾಹುಕಾರ ಆನಂದ ಬೋಧರಾಯರ ಕೈಗಳಿಗೆ ಸಂಕಲೆಗಳನ್ನು ತೊಡಿಸಲು ಹವಣಿಸುತಿದ್ದರು. ಉಕ್ಕಿ ಬಂದ ವ್ಯಸನವನ್ನು ರಾಯರಿಗೆ ತಡೆಯಲಾಗಲಿಲ್ಲ. ಅವರು ಕೈಗಳನ್ನು ಕೊಡಹಿ ಚೀರಿದರು!

ಕನಸಿನ ನಾಡಿನಿಂದ ರಾಯರ ಜೀವ ಮರಳಿತು. ನಿಯಂತ್ರಣಾಧಿಕಾರಿ ಯಾಗಲೀ, ಪೋಲಿಸು ಸಿಪಾಯಿಗಳಾಗಲೀ ಅವರ ಕಣ್ಣ ಮುಂದೆ ಇರಲಿಲ್ಲ.

ಆದರೆ ಅವರ ಮೊಗದ ಮೇಲೆ ಟಾರ್ಚ್‍ಲ್ಯಾಟಿನ ಹೊನಲು ಬೀಳುತ್ತಿದ್ದಿತು. “ಯಾರದು?” ಎಂಬ ತೊದಲು ನುಡಿ ಅವರ ಕೊರಳಿಂದ ಹೊರಟಿತು.

“ಮಾತಾಡಿದರೆ ಪ್ರಾಣ ತೆಗೆದೇನು!” ಎಂಬ ಉತ್ತರ ಅವರ ಕಿವಿಗಳಲ್ಲಿ ಮಾರುಲಿಗೊಂಡಿತು. ಟಾರ್ಚ್ ಬೆಳಕಿನ ಪ್ರವಾಹ ನಿಂತಿತು. ತಮ್ಮ ಮಂಚದ ಕಡೆಗೆ ಬರುತ್ತಿದ್ದ ಹೆಜ್ಜೆಗಳ ಸದ್ದನ್ನು ಅವರ ಕಿವಿಗಳು ಆಲಿಸಿದುವು. ಮನೆಯೊಳಗೆ ಕಳ್ಳರು ನುಗ್ಗಿದಾರೆಂಬುದು ರಾಯರಿಗೆ ಅರಿವಾಯಿತು. ಅವರ ಮೈನವಿರುಗಳೆಲ್ಲ ಕಂಪಿಸಿದುವು. ದೇಹ ಬೆವತು ಹೋಯಿತು.

ಈಗ ಆತ ರಾಯರ ಸನಿಹಕ್ಕೆ ಬಂದಿದ್ದ. ಕತ್ತಲೆಯಲ್ಲಿಯೇ ಅವರ ಕಣ್ಣುಗಳು ಅವನನ್ನು ನೋಡಿದುವು. ತಲೆಯ ಮೇಲೊಂದು ದೊಡ್ಡ ಮುಂಡಾಸು. ಹುಲುಸಾಗಿ ಬೆಳೆದ ಗಡ್ಡ ಮೊಗದ ಆಕೃತಿಯನ್ನು ಮರೆಸಿದ್ದಿತು. ಪಠಾಣರಂತೆ ಸಡಿಲವಾದ ಇಜಾರು ದೇಹದ ಕೆಳಭಾಗವನ್ನು ಮುಚ್ಚಿದ್ದಿತು. ಮೈಮೇಲೆ ಉದ್ದ ತೋಳುಗಳ ಶರಟು. ಎಡಗೈಯಲ್ಲಿ ಹಿಡಿದಿದ್ದ ಕಠಾರಿ ರಾಯರ ಎದೆಯನ್ನು ನಡುಗಿಸಿತು. ಬಲಗೈಯನ್ನು ಒಂದು ಸಣ್ಣ ಪಿಸ್ತೂಲು ಅಲಂಕರಿಸಿತ್ತು.

“ನೀವು ಇಲ್ಲಿಂದ ಅಲುಗಿದರೆ, ಮಾತಾಡಿದರೆ,” ಕಳ್ಳ ರಾಯರ ಎದೆಗೆ ಕಠಾರಿಯನ್ನು ಗುರಿಯಿಡುತ್ತಾ ಉಸುರಿದ. “ನನ್ನ ಈ ಕಠಾರಿ ನಿಮ್ಮ ಎದೆಗುಂಡಿಗೆಯನ್ನು ಬಗೆಯುವುದು.”

ರಾಯರ ತುಟಿಗಳಿಂದ ನುಡಿಗಳು ಹೊರಡದಾದುವು.

“ಕೆಳಮನೆಯಿಂದ ಆಳುಗಳು ಯಾರೂ ನಿಮ್ಮ ನೆರವಿಗೆ ಬರಲಾರರು.” ಕಳ್ಳನ ಮೊಗದ ಮೇಲೆ ಗೆಲುವಿನ ಬಣ್ಣ ಮಿನುಗಿತು. “ನೀವು ಗುಲ್ಲೆಬ್ಬಿಸಲು ಹವಣಿಸಿದರೆ ನನ್ನ ಎಡಗೈಯಲ್ಲಿ ಕಠಾರಿಯಿದೆ. ನನ್ನನ್ನು ಎದುರಿಸಲು ಪ್ರಯತ್ನಿಸಿದರೆ, ಬಲಗೈಯಲ್ಲಿ ಪಿಸ್ತೂಲಿದೆ. ಇವೆರಡೂ ನಿಮ್ಮ ಆಯುಸ್ಸನ್ನು ಕೊನೆಗೊಳಿಸುವುವು.”

“ನಿನಗೇನು ಬೇಕು?” ರಾಯರು ತಮ್ಮ ಮುಂದಿದ್ದ ದುರುಳನ ಮೊಗವನ್ನು ನೋಡಿದರು.

“ನಿಮ್ಮ ತಿಜೋರಿಯ ಕೀಲಿ ಗೊಂಚಲಿಯನ್ನು ಇತ್ತ ದಯಪಾಲಿಸಿ” ಕಳ್ಳ ರಾಯರಿಗೆ ಆಣತಿಗೈದ.

ರಾಯರು ತಲೆ ದಿಂಬಿನಡಿಗೆ ಕೈಹಾಕಿದರು. ಬೆರಳುಗಳಿಗೆ ಸಿಕ್ಕಿದ ಕೀಲಿ ಗೊಂಚಲಿಯನ್ನು ತೆಗೆದು ಕಳ್ಳನ ಕಡೆಗೆ ಚಾಚಿದರು. ಅವನು ಅದನ್ನು ಈಸಿಕೊಂಡ.

"ಎದ್ದು ನಿಲ್ಲಿ" ತಸ್ಕರನು ಡ್ರಿಲ್ ಮಾಸ್ತರರಂತೆ ರಾಯರಿಗೆ ಆಜ್ಞೆ ಮಾಡಿದ.

ರಾಯರು ಎದ್ದು ನಿಂತರು. ಕಳ್ಳ ಕಠಾರಿಯನ್ನು ಅಂಗಿಯ ಒಳಜೇಬಿಗೆ ಸೇರಿಸಿದ. ಆತನ ಕೈಯಲ್ಲಿದ್ದ ಪಿಸ್ತೂಲು ಮಾತ್ರ ರಾಯರ ಎದೆಯನ್ನೇ ನಿಟ್ಟಿಸುತಿದ್ದಿತು. ಅವನ ಕೈ ಒಳಜೇಬಿನಿಂದ ಎರಡು ಮೂರು ನೂಲು ಹಗ್ಗವನ್ನು ತೆಗೆದಿತು.

"ಕೈಗಳೆರಡನ್ನೂ ಬೆನ್ನ ಹಿಂದೆ ಜೋಡಿಸಿ."

ರಾಯರು ಮರುಮಾತು ಇಲ್ಲದೆ ನಾಲ್ಕನೆಯ ತರಗತಿಯ ವಿದ್ಯಾರ್ಥಿ ಮಾಸ್ತರರ ಹುಕುಮನ್ನು ನೆರವೇರಿಸುವಂತೆ ಕಳ್ಳನ ಆಜ್ಞೆಯನ್ನು ಅನುಸರಿಸಿದರು. ಅವನು ಹಗ್ಗದಿಂದ ಅವರ ಕೈಗಳೆರಡನ್ನೂ ಬೆನ್ನ ಹಿಂದೆ ಬಿಗಿದ. "ದಯವಿಟ್ಟು ಮಂಚದ ಮೇಲೆ ಮಲಗಿ" ಕಳ್ಳನ ಮುಂದಿನ ಅಣತಿ ತುಟಿಗಳನ್ನು ಬಿರಿದುಬಂತು.

ರಾಯರು ಮರಳಿ ಹಾಸಿಗೆಯ ಮೇಲೆ ಪವಡಿಸಿದರು. ಚೋರನು ಜೇಬಿನಿಂದ ಬೇರೊಂದು ಹಗ್ಗವನ್ನು ತೆಗೆದು ಅವರ ಕಾಲುಗಳೆರಡನ್ನೂ ಕಟ್ಟಿದ. "ರಾಯರೇ, ನನ್ನ ಹೊಲಸು ಕೈವಸ್ತ್ರವನ್ನು ನಿಮ್ಮ ಬಾಯೊಳಗೆ ತುರುಕಬೇಕೆಂದಿದ್ದೆ. ಆದರೆ ನೀವು ಸಾವುಕಾರರು. ದೊಡ್ಡವರು ಆದುದರಿಂದ ಆ ಅವಮಾನ ಬೇಡ." ಎಂದು ಅವನು ನುಡಿದ. ಅವನ ಕೈಗಳು ಹಾಸಿಗೆಯ ಹೊದಿಕೆಯೊಂದನ್ನು ಹರಿದುವು. ಆ ಅರಿವೆ ತುಂಡನ್ನು ಅವನು ರಾಯರ ಬಾಯೊಳಗೆ ತುರುಕಿದ.

ಕಳ್ಳ ಗೋಡೆಗೆ ಆನಿಸಿದ್ದ ತಿಜೋರಿಯ ಬಳಿಗೆ ಹೆಜ್ಜೆಹಾಕಿದ. ಆತ ಕಿಸೆಯಿಂದ ಕೀಲಿ ಗೊಂಚಲಿಯನ್ನು ತೆಗೆದು ತಿಜೋರಿಯ ಬಾಗಿಲನ್ನು ತೆರೆದ. ಟಾರ್ಚಿನ ಬೆಳಕನ್ನು ಅವನು ತಿಜೋರಿಯ ಒಳಕ್ಕೆ ಹರಿಯಿಸಿದ. ಒಳಗೆ ನೋಟುಗಳ ಕಟ್ಟುಗಳು ಸಾಲಾಗಿ ಕುಳಿತಿದ್ದುವು. ಅವನು ನೋಟುಗಳ ಕಟ್ಟುಗಳನ್ನು ಎಳೆದು ನೋಡಿದ. ಕೆಲವು ನೂರರವು; ಹಲವು ಐವತ್ತರವು.

ಇನ್ನುಳಿದುವು ಐದು ಮತ್ತು ಹತ್ತರವು. ಹತ್ತು ಮತ್ತು ಐದುರ ನೋಟುಗಳ ಕಟ್ಟುಗಳನ್ನು ಮಾತ್ರ ತೆಗೆದು ತನ್ನ ಇಜಾರದ ಜೇಬಿನೊಳಗೆ ಸೇರಿಸಿದ. ಐವತ್ತು ಮತ್ತು ನೂರರ ನೋಟುಗಳನ್ನು ಮಾತ್ರ ಆತ ತಿಜೋರಿಯಲ್ಲಿಯೇ ಮಡಗಿದ ಆತನ ಈ ಎಸಕವನ್ನು ರಾಯರ ಕಣ್ಣುಗಳು ಪಿಳಪಿಳನೆ ನೋಡುತಿದ್ದುವು.

ಕಳ್ಳ ತಿಜೋರಿಯ ಕೀಲಿಗೊಂಚಲನ್ನು ರಾಯರ ತಲೆ ದಿಂಬಿನಡಿಯಲ್ಲಿಯೇ ಮಡಗಿದ. "ರಾಯರೇ, ನನ್ನ ಕೆಲಸ ಮುಗಿದಿತು. ನೀವು ಸದ್ದು ಮಾಡದಿದ್ದುದು ಬಹಳ ಉಪಕಾರವಾಯಿತು. ನಿಮ್ಮ ಬದುಕನ್ನೆಲ್ಲಾ ನಾನು ಸೂರೆಗೈದಿಲ್ಲ. ಐವತ್ತು ಮತ್ತು ನೂರರ ನೋಟುಗಳನ್ನು ನಿಮಗೋಸ್ಕರ ಬಿಟ್ಟಿದೇನೆ. ಐದು ಮತ್ತು ಹತ್ತರ ಕಂತೆಗಳನ್ನು ಮಾತ್ರ ತೆಗೆದುಕೊಂಡಿದೇನೆ." ಕಳ್ಳನ ಕೊರಳಿಂದ ನುಡಿಗಳು ಹೊಮ್ಮುತಿದ್ದುವು. "ನಿಮ್ಮ ಕಾಲುಗಳ ಕಟ್ಟನ್ನು ಮಾತ್ರ ಬಿಚ್ಚುತ್ತೇನೆ. ಆದರೆ ಕೈಗಳ ಕಟ್ಟನ್ನೂ, ಬಾಯಿಯೊಳಗಿನ ವಸ್ತ್ರವನ್ನೂ ನೀವೇ ಸಾವಕಾಶವಾಗಿ ಕಳಚಿಕೊಳ್ಳಿರಿ."

ಮಾತು ಮುಗಿಯುವ ಮುನ್ನ ಕಳ್ಳ ರಾಯರ ಕಾಲುಗಳ ಕಟ್ಟನ್ನು ಬಿಚ್ಚಿ ಮುಗಿಸಿದ್ದ. "ನಿಮ್ಮ ಸಂಪತ್ತನ್ನು ಸೂರೆಗೈದವರು ಯಾರೆಂದು ಅರಿಯಲು ನಿಮಗೆ ಉತ್ಸುಕತೆಯಿರಬಹುದು. ನನ್ನ ಹೆಸರು ಕುಪ್ಪಣ್ಣ!"

ಕುಪ್ಪಣ್ಣ ಕೋಣೆಯಿಂದ ಹೊರತೆರಳಿದ. ಮಹಡಿಗೆ ಏರುವ ಏಣಿಯ ಬಳಿ ಅವನ ಸಂಗಡಿಗ ದೇವಣ್ಣ ಕಾದಿದ್ದ. ತನ್ನ ಒಡನಾಡಿಯ ನಗು ಮೊಗವನ್ನು ಕಾಣಲು ಆಪತ್ತೇನೂ ಇಲ್ಲದೆ ಕಾರ್ಯ ಸಾಧಿಸಿತೆಂದು ದೇವಣ್ಣ ಊಹಿಸಿದ. "ಹೇಗಾಯಿತು ಕೆಲಸ ಕುಪ್ಪಣ್ಣ?" ಎಂದು ಅವನು ಪ್ರಶ್ನಿಸಿದ.

"ಜಯ. ಸಂಪೂರ್ಣ ಜಯ." ಕುಪ್ಪಣ್ಣ ಉಸುರಿದ. "ನೂರು ಮತ್ತು ಐವತ್ತರ ನೋಟುಗಳನ್ನು ಮಾತ್ರ ಬಿಟ್ಟು ಬಂದೆ.

"ಏಕೆ?"

"ದೊಡ್ಡ ನೋಟುಗಳ ಮೇಲಿನ ನಂಬರುಗಳನ್ನು ಆ ಸಾಹುಕಾರರು ಬರೆದಿಟ್ಟಿರಬಹುದು. ಆನಂತರ ತೊಂದರೆಗೆ ಬಲಿಯಾಗುವುದು ಬೇಡ. ಹತ್ತು ಮತ್ತು ಐದರ ನೋಟುಗಳ ಕಂತೆಯೇ ನಮಗೆ ಸಾಕು"

ಆನಂದಬೋಧರಾಯರು ತಮ್ಮ ಕೈಗಳ ಕಟ್ಟನ್ನು ಬಿಚ್ಚಿದರು. ಬಾಯೊಳಗಿನ ಅರಿವೆಯನ್ನು ತೆಗೆದೆಸೆದು ಟೆಲಿಫೋನಿನ ಬಳಿಗೆ ಓಡಿದರು. ಗಂಟೆಯನ್ನು ಬಾರಿಸಿ, ಪೋಲೀಸು ಸ್ಟೇಶನ್ನಿಗೆ ಕೂಗಿದರು. ಆದರೆ ಮಾರು ಬರಲಿಲ್ಲ. ಟೆಲಿಫೋನಿನ ಮುಂದೆ ನಿಂತು ಅವರೆಷ್ಟು ಕಿರುಚಿಕೊಂಡರೂ, ಪೋಲೀಸು ಸ್ಟೇಶನ್ನಿನವರು ಅವರ ಕರೆಯನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಕಳ್ಳರು ಟೆಲಿಫೋನು ತಂತಿಗಳನ್ನು ಕಡಿದು ಹಾಕಿದಾರೆಂಬುದು ಮರುದಿನ ಮುಂಜಾನೆ ರಾಯರಿಗೆ ತಿಳಿವಾಯಿತು.

× × × ×

ಮುಗಿಲ ದೋಣಿಗಳು ಬಾನ್ನಡಲಲ್ಲಿ ತೇಲುತಿದ್ದುವು. ಮೋಡಗಳಿಂದ ಉದುರುತಿದ್ದ ತುಂತುರ್ವನಿಗಳು ಬಾನ್ದೇವಿಯೆರಚಿದ ಪುಷ್ಪಾಂಜಲಿಗಳಂತೆ ಇಳೆಯ ಮೇಲೆ ಬೀಳುತಿದ್ದುವು. ಇರುಳ ರಾಣಿಯ ಆಗಮನಕ್ಕೋಸುಗ ಮೂಡಣದಲ್ಲಿ ಬಾನ್ದೇವಿ ಮಳೆಬಿಲ್ಲಿನ ತೋರಣವನ್ನು ಕಟ್ಟಿದ್ದಳು.

ಈ ವೇಳೆಯಲ್ಲಿ ವಸಂತ ಒಬ್ಬಂಟಿಗನಾಗಿ, ಒಂದು ಹೊಳೆಯ ಸೇತುವೆಯ ಮೇಲೆ ಕುಳಿತಿದ್ದ. ಅವನ ಸಂಗಡ ತಿಮ್ಮಯ್ಯನಾಗಲಿ, ಇತರ ಗೆಳೆಯರಾಗಲೀ ಇರಲಿಲ್ಲ. ಚಿಂತೆಯಿಂದ ಬಾಡಿದ ಮೊಗವು ಹೊಳೆಯ ನೀರನ್ನು ನೋಡುತಿದ್ದಿತು. ಬೇಸರಿಕೆ ಚಿಂತೆಗಳ ನೆಲೆವನೆಯಾಗಿದ್ದ ಅವನ ಮೊಗವು ಮುಗಿಲುತುಂಬಿದ ಬಾಂದಳಕ್ಕೆಣೆಯಾಗಿದ್ದಿತು. ವಸಂತನ ಪಕ್ಕದಲ್ಲಿಯೇ ಶಾಲಾ ಪುಸ್ತಕಗಳನ್ನು ತುಂಬಿದ ಚೀಲವಿದ್ದಿತು. ಅವನೊಮ್ಮೆ ಹೊಳೆ ನೀರನ್ನು ನಿಟ್ಟಿಸಿದ. ಮುಗಿಲರಾಣಿ ಕಳುಹಿದ ತುಂತುರ್ವನಿಗಳು ಜಲದೇವಿಯನ್ನು ಮುತ್ತಿಡುತಿದ್ದುವು. ಇನ್ನೊಮ್ಮೆ ಅವನ ನೋಟ ಬಾಂದಳದ ಕಡೆಗೆ ಹೊರಳಿತು. ಕರಿಯ ಮುಗಿಲುಗಳ ತಂಡ ಮೂಡಣವನ್ನು ಗುರಿಹಿಡಿದು ಸಾಗುತಿದ್ದಿತು.

ಊರು, ಶಾಲೆ, ಗೆಳೆಯರು. ಇವರೆಲ್ಲರನ್ನೂ ತೊರೆದು ತನ್ನ ಹಳ್ಳಿಗೆ ಹೋಗಬೇಕೆಂದು ವಸಂತ ಎರಡು ದಿನಗಳ ಹಿಂದೆಯೇ ತೀರ್ಮಾನಿಸಿದ್ದ. ಆದರೆ ಕಾಲುಗಳು ಬರಲೊಲ್ಲವು. ಮನಸ್ಸು ಹಿಂಜರಿದಿತು. ಆವುದಾದರೂ ಒಂದು ನೆರವು ಬಂದು, ತನ್ನ ವ್ಯಾಸಂಗವನ್ನು ಮುಂದುವರಿಸಲು ಎಡೆಮಾಡಿ ಕೊಡುವುದೆಂಬ ಆಶೆಯು ಮಿಂಚು ಹುಳದಂತೆ ಅವನ ಬಗೆಯಲ್ಲಿ ಸುಳಿ

ಮಾಡುತ್ತಿದ್ದಿತು. ಈ ಆಶೆಯಿಂದಲೇ ಎರಡು ದಿನಗಳಿಂದ ವಾರಾನ್ನಗಳನ್ನು ಹುಡುಕಿಕೊಂಡು ಊರು ಪೇಟೆಗಳಲ್ಲಿ ಅಲೆದ. ಆದರೆ ಈ ರೇಷನ್ ಯುಗದಲ್ಲಿ ಮನೆಯಲ್ಲಿ ಸಾಕಿದ ನಾಯಿ ಬೆಕ್ಕುಗಳನ್ನೇ ಮನೆಯಿಂದ ಅಟ್ಟುತ್ತಿದ್ದ ದಿನಗಳಲ್ಲಿ ವಾರಾನ್ನವನ್ನು ಹಾಕುವ ಪುಣ್ಯಾತ್ಮರು ಯಾರೂ ಇರಲಿಲ್ಲ. ಮನೆ ಮನೆ ಅಲೆದು ದಣಿದುದೇ ವಸಂತನಿಗೆ ಲಾಭ. ಆರಾದರೂ ದ್ರವ್ಯಸಹಾಯ ಮಾಡಬಹುದೆಂಬ ಹೊಸ ಆಶೆಯನ್ನು ತಿಮ್ಮಯ್ಯ ಗೆಳೆಯನ ಎದೆಯಲ್ಲಿ ತುಂಬಿಸಿದ. ಚಂದಾ ಪಟ್ಟಿಯೊಂದನ್ನು ತಯಾರಿಸಿ ಪುನಃ ಒಂದು ಸಲ ನಗರಸಂಚಾರವನ್ನು ಕೈಗೊಂಡುದಾಯಿತು. ನಾಲ್ಕು ರೂಪಾಯಿ ಹನ್ನೆರಡಾಣೆ ಚಂದಾ ದೊರಕಿತು ವಸಂತನಿಗೆ. ಅದರೊಡನೆಯೇ ತನ್ನ ಕಲಿಕೆಯನ್ನು ಮುಂದುವರಿಸಬೇಕೆಂಬ ಅವನ ಆಸೆಯೂ ಕಮರಿಹೋಯಿತು.

ಸಂಕದ ಮೇಲೆ ಕುಳಿತಿದ್ದ ವಸಂತನ ಕೈ ಚೀಲದೊಳಗಿಂದ ಒಂದು ಪುಸ್ತಕವನ್ನು ತೆಗೆದುಕೊಂಡಿತು. ಅವನು ಪುಸ್ತಕವನ್ನು ಬಿಚ್ಚಿದ. ಕಣ್ಣುಗಳಿಂದ ಉದುರಿದ ಬಾಷ್ಪಕಣಗಳು ಹೊಳೆ ನೀರಲ್ಲಿ ಬೆರೆತುವು. ಅವನು ಪುಸ್ತಕದಿಂದ ಒಂದು ಹಾಳೆಯನ್ನು ಕಿತ್ತ. ಆ ಹಾಳೆಯನ್ನು ಅವನು ಹೊಳೆಗೆ ಎಸೆದ. ಅದು ನೀರಿನಲ್ಲಿ ಬಿದ್ದಿತು. ಅದು ನೀರಿನಲ್ಲಿ ತೇಲಿ ದೃಷ್ಟಿಯಿಂದ ಮರೆಯಾಗುವನಕ ಆ ಹಾಳೆಯನ್ನೇ ಅವನ ಕಣ್ಣುಗಳು ನೋಡಿದುವು. ಅದು ಮರೆಯಾಗಲು ಅವನು ಪುಸ್ತಕದಿಂದ ಎರಡನೆಯ ಹಾಳೆಯನ್ನು ಕಿತ್ತ. ಅದೂ ಮೊದಲಿನ ಹಾಳೆಯನ್ನೇ ಹಿಂಬಾಲಿಸಿತು. ಹೀಗೆ ಮೂರು, ನಾಲ್ಕು ಐದು ಹಾಳೆಗಳು ಕೆಲ ನಿಮಿಷಗಳಲ್ಲಿ ಇಡೀ ಪುಸ್ತಕವೇ ಮುಗಿದು ಹೋಯಿತು.

ಎರಡನೆಯ ಪುಸ್ತಕವನ್ನು ತೆಗೆದುಕೊಂಡ. ಅದರ ಹಾಳೆಗಳನ್ನೂ ಕಿತ್ತು ನೀರಿನಲ್ಲಿ ಎಸೆಯುವುದರಲ್ಲಿ ಅವನಿದ್ದ. ಆದರೆ ಯಾರೋ ಹಿಂದಿನಿಂದ ಬಂದು ಅವನ ಬೆನ್ನ ಮೇಲೆ ಕೈಮುಡಗಿ ವಸಂತನನ್ನು ಎಚ್ಚರಿಸಿದರು. ವಸಂತ ತನ್ನ ಕಣ್ಣುಗಳನ್ನು ಪುಸ್ತಕದಿಂದ ಮೇಲಕ್ಕೆತ್ತಿದ. ಅವನು ಹಿಂದಿರುಗಿ ನೋಡಿದ. ತೆಳ್ಳಗಿನ ಉದ್ದನ್ನ ವ್ಯಕ್ತಿ ಅವನ ಬೆನ್ನ ಹಿಂದೆ ನಿಂತಿದ್ದಿತು ಬಿಳಿಯ ಮೊಗ. ಎಳನಗೆಯನ್ನು ಬೀರುವ ತುಟಿಗಳು. ಆತ ಶುಭ್ರವಾದ ಬಿಳಿ ಪಂಚೆಯನ್ನು ಉಟ್ಟಿದ್ದ. ಬಿಳಿ ಬಣ್ಣದ ಶರ್ಟು ಮೈಯನ್ನು ಮುಚ್ಚಿದ್ದಿತು.

ಬಲಗೈಯ ಬೆರಳುಗಳ ಸಂದಿನಲ್ಲಿ ಹೊಗೆಯಾಡುತಿದ್ದ ಸಿಗರೇಟು ಇದ್ದಿತು. ವಸಂತ ತುಟಿ ಬಿಚ್ಚದೇ ಈ ಅಪರಿಚಿತ ಮನುಷ್ಯನನ್ನೇ ನಿಟ್ಟಿಸಿದ.

"ಮಗೂ ಇದೇಕೆ ಪುಸ್ತಕದ ಹಾಳೆಗಳನ್ನು ಕಿತ್ತು ಹೊಳೆಗೆ ಎಸೆಯುತ್ತಿರುವೆ? ಕಳೆದ ಹದಿನೈದು ನಿಮಿಷಗಳಿಂದ ನಾನು ನಿನ್ನನ್ನೇ ನೋಡುತಿದೇನೆ." ಅಪರಿಚಿತ ಮೃದು ಸ್ವರದಲ್ಲಿ ನುಡಿದ.

ವಸಂತ ಮಾರುಕೊಡಲಿಲ್ಲ. ಅಪರಿಚಿತನ ಪ್ರಶ್ನೆ ಅವನ ಎದೆಯಲ್ಲಿ ಹುದುಗಿದ್ದ ದುಃಖವನ್ನು ಉದ್ರೇಕಗೊಳಿಸಿತು. ಕಟ್ಟಿ ನಿಂತಿದ್ದ ನೀರಿಗೆ ಹರಿಯಲು ಒಂದು ಕಾಲುವೆಯನ್ನು ಮಾಡಿಕೊಟ್ಟಂತಾಯಿತು. ಅವನ ಕಣ್ಣುಗಳಿಂದ ಕಂಬನಿಗಳು ಒಂದೇ ಸವನೆ ಹರಿದುವು. ಅವನ ಕೆನ್ನೆಗಳನ್ನು ನಾದಿದುವು.

ವಸಂತನ ಕಣ್ಣೀರು ಅಪರಿಚಿತನ ಎದೆಯನ್ನು ಕರಗಿಸಿತು. ಆತ ಸ್ನೇಹ ತುಂಬಿದ ದನಿಯಲ್ಲಿ ಹೇಳಿದ. "ಮಗೂ, ನೀನು ಯಾವುದೋ ಒಂದು ಹಿರಿಯ ಬೆಸನದಲ್ಲಿರುವೆ! ನೀನಾರು?"

"ನಾನೊಬ್ಬ ಬಡ ವಿದ್ಯಾರ್ಥಿ. ವಸಂತನೆಂದು ನನ್ನ ಹೆಸರು." ಗದ್ಗದ ಕಂಠದಲ್ಲಿ ವಸಂತ ಉತ್ತರಿಸಿದ.

"ನಿನಗೇನು ಆಪತ್ತು ಬಂದಿದೆ?"

"ನನ್ನನ್ನು ನನ್ನ ಪಾಡಿಗೆ ಬಿಡಿ!" ವಸಂತ ಹೇಳಿದ. "ನಿಮ್ಮೊಡನೆ ಹೇಳಿಕೊಳ್ಳುವುದರಿಂದ ಅದು ಕಡಿಮೆಯಾಗದು."

"ಒಂದು ವೇಳೆ ನಿನ್ನ ಬೆಸನವನ್ನು ಇಲ್ಲವಾಗಿಸಲು ನನ್ನಿಂದ ಸಾಧ್ಯವಾಗುವಂತಿದ್ದರೆ?"

"ನಿಜವಾಗಿಯೂ! ನನಗೆ ಬಂದ ಸಂಕಟವನ್ನು ನಿವಾರಿಸುವಿರಾ?" ಆಶೆಯ ಹೊಂಬೆಳಕು ವಸಂತನ ಕಣ್ಣುಗಳಿಂದ ಹೊರಚೆಲ್ಲಿತು.

"ಹೇಳು. ನನ್ನಿಂದ ಶಕ್ಯವೆನಿಸಿದರೆ ಪರಿಹರಿಸುವೆನು" ಭರವಸೆಯ ನುಡಿಯೊಂದನ್ನು ಅಪರಿಚಿತ ನೀಡಿದ.

ವಸಂತ ತನ್ನ ಬಡತನದ ಹೊತ್ತಿಗೆಯನ್ನು ಬಿಚ್ಚಿದ. ಅದನ್ನು ಅಪರಿಚಿತನ ಮುಂದೆ ಓದಿ ಮುಗಿಸಿದುದೂ ಆಯಿತು ಅಪರಿಚಿತ ಮನಸ್ಸಿಟ್ಟು ವಸಂತನ ಕರುಣೆಯ ಕತೆಯನ್ನು ಕೇಳಿದ. ಹುಡುಗನ ಮಾತುಗಳು

ಮುಂದುವರಿದಂತೆಯೇ, ಅಪರಿಚಿತನ ಕಣ್ಣುಗಳಲ್ಲಿ ಸಹಾನುಭೂತಿಯ ಕಣಗಳು ನೆರೆದುವು.

ಕೊನೆಗೊಂಡುವು ವಸಂತನ ಮಾತುಗಳು. ಒಂದೆರಡು ನಿಮಿಷಗಳತನಕ ಅಲ್ಲಿ ನೀರವತೆ ಪಸರಿಸಿದ್ದಿತು. "ನಿನ್ನ ಅಭ್ಯಾಸವನ್ನು ಮುಂದುವರಿಸಬೇಕೆಂಬ ಅಪೇಕ್ಷೆ ಇದೆಯೇ ?" ಅಪರಿಚಿತ ಪ್ರಶ್ನಿಸಿದ.

"ಅಹುದು. ಕೊನೆಯತನಕ ಮೆಟ್ರಿಕ್ ವರೆಗಾದರೂ ಕಲಿಯಬೇಕೆಂದು ನನ್ನ ಹಂಬಲ." ವಸಂತ ಮಾರ್ನುಡಿದ.

"ಊರ ಪ್ರಮುಖರಾರೂ ನಿನಗೆ ಹಣ ಸಹಾಯಮಾಡಲಿಲ್ಲವೇ ?

"ಅವರನ್ನು ಬೇಡಿದೆ. ಒಂದೆರಡು ರೂಪಾಯಿಗಳನ್ನು ನನ್ನ ಕೈ ಮೇಲಿರಿಸಿ ನನಗೆ ಹೊರಗಿನ ಹಾದಿಯನ್ನು ತೋರಿಸಿದರು. ಒಂದೆರಡು ರೂಪಾಯಿಗಳಿಂದ ನನ್ನ ವ್ಯಾಸಂಗ ಮುಂದುವರಿವುದೆಂತು ?"

"ವ್ಯಾಸಂಗವನ್ನು ಪೂರ್ತಿಗೊಳಿಸಲು ಹಾದಿಯಿಲ್ಲವೆಂದು ಕೊರಗಬೇಡ." ಅಪರಿಚಿತ ನುಡಿದ. "ನಿನ್ನ ಶಿಕ್ಷಣದ ವೆಚ್ಚವನ್ನು ನಾನು ನೋಡಿಕೊಳ್ಳುವೆನು."

"ಬಹಳ ಉಪಕಾರವಾಯಿತು. ಈ ಋಣವನ್ನು ಎಂದಾದರೂ ತೀರಿಸುವೆನು." ಕೃತಜ್ಞತೆಯಿಂದ ತುಂಬಿದ ವಸಂತನ ಕಣ್ಣುಗಳು ಅಪರಿಚಿತನ ಮೊಗದತ್ತ ಹೊರಳಿದುವು.

"ಉಪಕಾರದ ಮಾತುಬೇಡ." ಅರಿಯದ ಹಿತಚಿಂತಕ ಉಸುರಿದ. "ಯಾವ ಬೇಸರವೂ ಇಲ್ಲದೆ ನೀನು ಹಾಸ್ಟೆಲಿಗೆ ಹೋಗು. ನಿನ್ನ ಶಿಕ್ಷಣದ ಬಗ್ಗೆ ಇಪ್ಪತ್ತು ರೂಪಾಯಿಗಳನ್ನು ಶಾಲೆಯ ಹೆಡ್ಮಾಸ್ತರರಿಗೆ ಕಳುಹುವೆನು."

"ನೀವು ಯಾರು ? ನನ್ನ ಬದುಕನ್ನು ಮೇಲಕ್ಕೆತ್ತಲು ಹೊರಟ ನೀವು ಯಾರು ?" ಉಪಕಾರಿಯ ಪರಿಚಯವನ್ನು ಸಂಪಾದಿಸಬೇಕೆಂಬ ಬಯಕೆ ವಸಂತನ ಎದೆಯಲ್ಲಿ ಹುಟ್ಟಿತು.

"ನಾನು ಯಾರೆಂಬುದು ತಿಳಿಯಬೇಕಾದ ಅಗತ್ಯ ನಿನಗಿಲ್ಲ. ಆ ವೇಳೆ ಬಂದಾಗ ಅದು ತಾನಾಗಿಯೇ ನಿನಗೆ ತಿಳಿಯುವುದು. ನೋಡು, ನಾಳೆ ಹತ್ತು ತಾಸಿಗೆ ನಿನ್ನ ಮುಖ್ಯೋಪಾಧ್ಯಾಯರಿಗೆ ಹಣ ಕಳುಹಿಸುವೆನು."

ಎಂದು ಉಸುರಿದ ಅಪರಿಚಿತನು ವಸಂತನ ಮಾರಿಗೋಸುಗ ಕಾಯಲಿಲ್ಲ.

ಅವನ ಪಾದಗಳು ಮುಂದೆ ಅಡಿಗಳನ್ನಿರಿಸಿದುವು. ಈ ರೀತಿ ಅನಿರೀಕ್ಷಿತವಾಗಿ ತನ್ನ ನೆರವುಗ್ಕೈಯನ್ನು ಚಾಚಿದ ವ್ಯಕ್ತಿಯಾರೆಂದು ವಸಂತನ ಬುದ್ಧಿ ಆಲೋಚಿಸಿತು. ತನಗೊದಗಿದ ಸಂಕಟ ಪರಿಹಾರವಾಯಿತಲ್ಲ ಎಂಬ ಹರುಷದಿಂದ ಅವನ ಎದೆ ಅರಳಿತು. ಕೈ ಪುಸ್ತಕದ ಚೀಲವನ್ನು ತೆಗೆದುಕೊಂಡಿತು; ಹಾಸ್ಟೆಲು ಕಡೆಗೆ ಕಾಲುಗಳು ಹೆಜ್ಜೆ ಹಾಕಿದುವು.

ಮರುದಿನ ಹನ್ನೊಂದು ತಾಸಿಗೆ ಮುಖ್ಯೋಪಾಧ್ಯಾಯರಿಂದ ವಸಂತನಿಗೆ ಕರೆ ಬಂತು ಆವನು ತರಗತಿಯಿಂದ ಹೆಡ್ಮಾಸ್ತರರ ಆಫೀಸಿಗೆ ತೆರಳಿದ. ವಸಂತನನ್ನು ಕಾಣಲು ಅವರ ತುಟಿಗಳ ಮೇಲೆ ಕಿರುನಗೆಯೊಂದು ಮಿನುಗಿತು. ಅವರು ನುಡಿದರು "ನಿನ್ನ ಹಿತಚಿಂತಕರು ನಿನಗೆ ಇಪ್ಪತ್ತು ರೂಪಾಯಿಗಳನ್ನು ಕಳುಹಿಸಿದಾರೆ. ಪ್ರತಿ ತಿಂಗಳೂ ಕಳುಹಿಸುವೆನೆಂದು ಬರೆದಿದಾರೆ. ಇವನ್ನು ತೆಗೆದುಕೋ."

ನೋಟುಗಳನ್ನು ಎಣಿಸಿ ಮುಖ್ಯೋಪಾಧ್ಯಾಯರು ವಸಂತನ ಕೈಗಳಲ್ಲಿ ಇರಿಸಿದರು.

"ನನಗೆ ಸಹಾಯ ಮಾಡಿದವರು ಯಾರು ?" ಎಂದು ವಿನೀತ ಸ್ವರದಲ್ಲಿ ಮುಖ್ಯಾಧ್ಯಾಪಕರನ್ನು ವಸಂತ ಕೇಳಿದ.

"ಯಾರೆಂಬುದು, ತಿಳಿಯದು." ಅವರು ಉತ್ತರಿಸಿದರು. "ಹೆಸರು ವೇಣುವೆಂದು. ಈ ಹಣವನ್ನು ನಿನಗೆ ತಲುಪಿಸಬೇಕೆಂದು ಒಂದು ಚೀಟಿ ಕಳುಹಿಸಿದಾರೆ.

( ೬ )

ನಾಲ್ಕಾರು ದಿನಗಳಿಂದ ಮಾಸ್ತರರಿಗೆ ವೇಣುವಿನ ದರ್ಶನವಾಗಲಿಲ್ಲ. ಈ ದಿನಗಳಲ್ಲಿ ಅಪರಿಚಿತನೆನಿಸಿದ ವೇಣುವಿನೊಡನೆ ಅವರಿಗೆ ಸ್ನೇಹ ಆಸ್ಥೆಗಳು ತೋರತೊಡಗಿದ್ದುವು ಅವರ ಎದೆಯು ವೇಣುವಿನೊಡನೆ ಗೆಳೆತನವನ್ನು ಬಯಸಿತ್ತು. ವೇಣುವಿಲ್ಲದುದು ಅವರಿಗೆ ತುಂಬಾ ಬೇಸರ. ಅವನೆತ್ತ ತೆರಳಿದನೆಂದು ಅವರು ಹಲವು ಸಲ ಆಲೋಚಿಸುವರು. ಹುಡುಗರಿಗೂ ಸಹ ಮಾವನನ್ನು ಕಾಣದುದರಿಂದ ಬೇಸರಿಕೆ. ಪ್ರತಿ ದಿನ ಬೆಳಿಗ್ಗೆ ಅವರು ಮಾವನ ಮನೆಗೆ ಹೋಗಿ ನೋಡುವರು. ಬಾಗಿಲಿಗೆ ಬಡಿದಿದ್ದ ಬೀಗವನ್ನು ಕಂಡು ಮೊಗವನ್ನು ಸಪ್ಪಗೆ ಮಾಡಿಕೊಂಡು ಮರಳಿ ಬರುವರು. ಆಗಾಗ "ಮಾವ,

ಎಲ್ಲಮ್ಮಾ ?" ಎಂದು ಅವರು ತಾಯಿಯನ್ನು ಪ್ರಶ್ನಿಸುವರು. "ಎಲ್ಲೋ ಹೋಗಿದಾರೆ. ನಾಳೆ ಬಂದಾರು." ಎಂಬ ಉತ್ತರ ಸೀತಮ್ಮನ ಕೊರಳಿಂದ ಅವರಿಗೆ ದೊರಕುವುದು. ಒಂದು ದಿನ ಸೀತಮ್ಮನೇ ಮಾಸ್ತರರನ್ನು ಪ್ರಶ್ನಿಸಿದಳು. "ವೇಣುರಾಯರನ್ನು ಬಹು ದಿನಗಳಿಂದ ಕಾಣುವುದೇ ಇಲ್ಲವಲ್ಲ. ಎತ್ತ ಹೋದರು ಎಂಬುದಾಗಿ."

"ಆತ ಒಬ್ಬ ಟ್ರಾವಲಿಂಗ್ ಏಜೆಂಟು." ಮಾಸ್ತರರು ಮಡದಿಗೆ ಉತ್ತರಿಸಿದರು. "ತನ್ನ ಕಂಪನಿಯ ಮಾಲುಗಳಿಗೆ ಗಿರಾಕಿಗಳನ್ನು ದೊರಕಿಸಲು ಪರವೂರಿಗೆ ಹೋಗಿರಬಹುದು."

ಕೊನೆಗೊಂದು ದಿನ ವೇಣು ತನ್ನ ವಸತಿಗೆ ಮರಳಿದ ವೇಣುವನ್ನು ಕಾಣಲು ಎಳೆಯರ ಮೊಗಮಲ್ಲಿಗೆಗಳು ಹೂತುವು. ವೇಣು ಮರಳಿದಾಗ ತನ್ನ ಕೈಚೀಲ ತುಂಬಾ ಮಾವಿನ ಹಣ್ಣು, ಬಿಸ್ಕತ್ತುಗಳನ್ನು ತಂದಿದ್ದ. ವೇಣು ಜಗಲಿಯ ಮೇಲೇರಿದುದೇ ತಡ, ಎಳೆಯರು ಬಂದು ಅವನನ್ನು ಸುತ್ತುಗಟ್ಟಿದರು. ಕಿರಿಯ ದಾಮು ಮಾವನನ್ನು ಪ್ರಶ್ನಿಸಿದ. "ಚೀಲದಲ್ಲೇನು ಮಾವ ತಂದಿದ್ದೀ ?"

"ಈಸು ದಿನ ನೀನೆಲ್ಲಿ ಫರಾರಿಯಾಗಿದ್ದಿ ?" ಹಿರಿಯ ರಾಮು ಮಾವನ ಕೈ ಹಿಡಿದು ಜಗ್ಗಿದ.

"ದೂರದ ಕೊಯಮುತ್ತೂರಿಗೆ ಹೋಗಿದ್ದೆ. ನೀವೆಲ್ಲಾ ಹೇಗಿರುವಿರಿ?" ವೇಣು ಕುಶಲವನ್ನು ಕೇಳಿದ. ಆತ ಚೀಲವನ್ನು ಜಗಲಿಯ ಮೇಲಿರಿಸಿ ಮನೆಯ ಬೀಗವನ್ನು ತೆರೆದ.

"ಚೀಲದಲ್ಲೇನಿದೆ ಮಾವ ?" ವೇಣುವಿನ ಕೋಟಿನ ತುದಿಯನ್ನು ಹಿಡಿದಿದ್ದ ದಾಮು ಮರಳಿ ಪ್ರಶ್ನಿಸಿದ.

ಹಿರಿಯ ಹುಡುಗ ಮಾವ ಬಂದ ಸುದ್ದಿಯನ್ನು ತಾಯಿಗೆ ಅರುಹಲು ಮನೆಯೊಳಗೆ ಓಡಿದ. "ಅಮ್ಮಾ. ಮಾವ ಬಂದಿದಾನೆ." ಎಂಬ ಅವನ ಕೊರಳುಲಿ ಕೋಣೆಯ ನಾಲ್ಕು ಗೋಡೆಗಳಲ್ಲಿ ಮಾರುಲಿಗೊಂಡಿತು.

"ನೀನು ಮಾವಿನ ಹಣ್ಣು ತಂದಿದ್ದೀ ಮಾವ" ಚೀಲದಿಂದ ಒಂದು ಹಣ್ಣನ್ನು ತೆಗೆದು ಕೈಯಲ್ಲಿ ಹಿಡಿದು ನೋಡುತ್ತಾ ದಾಮು ನುಡಿದ. ಅವನ ಕಣ್ಣುಗಳು ಆಸೆಯಿಂದ ಹಣ್ಣನ್ನು ನೋಡಿದುವು.

"ನಿಮ್ಮ ಸಲುವಾಗಿಯೇ ತಂದಿದ್ದೇನೆ." ಪ್ರೀತಿಯ ನುಡಿ ವೇಣುವಿನ ಕೊರಳಿಂದ ಹೊರಟಿತು. ವೇಣು ಚೀಲಕ್ಕೆ ಕೈಹಾಕಿ ಹಣ್ಣುಗಳನ್ನು ತೆಗೆದ. ಈ ಹಣ್ಣುಗಳನ್ನು ನೀವು ಹಂಚಿಕೊಳ್ಳಿ. ವೇಣು ಚೀಲದಿಂದ ಹತ್ತಾರು ಮಾವಿನ ಹಣ್ಣುಗಳನ್ನು ಹೊರತೆಗೆದ. ಎರಡು ಬಿಸ್ಕೆಟ್ಟು ಪೊಟ್ಟಣಗಳು ಹೊರಬಂದುವು. ಹಣ್ಣುಗಳನ್ನೂ, ಬಿಸ್ಕೆಟ್ಟುಗಳನ್ನೂ ಕಂಡ ಎಳೆಯನ ಕಣ್ಣುಗಳು ಹರುಷದಿಂದ ಅಗಲವಾದುವು. ಅವನು ಕೈಯಲ್ಲಿ ನಾಲ್ಕಾರು ಹಣ್ಣುಗಳನ್ನು ಹಿಡಿದುಕೊಂಡು ಮನೆಯೊಳಗೆ ಓಡಿದ. "ಅಮ್ಮಾ ಮಾವಿನ ಹಣ್ಣುಗಳು! ಮಾವ ತಂದದ್ದು!" ಎಂಬ ನುಡಿಗಳು ಅವನ ಕೊರಳಿಂದ ಬಿರಿದು ಬರುತಿದ್ದುವು

ಮಗನ ಕೂಗು ಸೀತಮ್ಮನನ್ನು ಮನೆ ಬಾಗಿಲಿಗೆ ಎಳೆತಂದಿತು. ಆಕೆ ಹಣ್ಣುಗಳನ್ನು ಕೈಯಲ್ಲಿ ಹಿಡಿದಿದ್ದ ಎಳೆಯನನ್ನು ನೋಡಿದಳು. ಜಗಲಿಯ ಮೇಲೆ ನಿಂತಿದ್ದ ವೇಣುವಿನ ಕಡೆಗೆ ಆವಳ ದೃಷ್ಟಿ ಹೊರಳಿತು.

"ಯಾವಾಗ ಬಂದಿರಿ?" ಎಂದು ಸೀತಮ್ಮ ಕೇಳಿದಳು.

"ಈಗ ತಾನೇ ಬಂದೆ" ಅಕ್ಕ ವೇಣು ಉತ್ತರಿಸಿದ. "ಅಲೆದಾಟದ ಜೀವನ ನನ್ನದು. ಸುಖವಿಲ್ಲ. ಹೊತ್ತಿಗೆ ಸರಿಯಾಗಿ ಆಹಾರವಿಲ್ಲ."

"ಇದೇನು ಮಕ್ಕಳಿಗೆ ಹಣ್ಣು ತಂದು ಕೊಟ್ಟಿರುವಿರಲ್ಲ!"

"ಪರವೂರಿಂದ ಮಾವ ಬರುವಾಗ ಅಳಿಯಂದಿರಿಗೆ ಏನಾದರೂ ಹಣ್ಣು ತಿಂಡಿಗಳನ್ನು ತರಬೇಡವೇ?" ನಗೆಯೊಂದು ವೇಣುವಿನ ಮೊಗದಲ್ಲಿ ಮಿನುಗಿತು.

ಸೀತಮ್ಮ ಮಾರು ಕೊಡಲಿಲ್ಲ ಆಕೆಯ ತುಟಿಗಳ ಮೇಲೆ ಮಂದಸ್ಮಿತವೊಂದು ಕಳೆಯಾಡಿತು.

"ಮಾಸ್ತರರು ಇನ್ನೂ ಬಂದಿಲ್ಲವೇ?" ಎಂದು ವೇಣು.

"ಇಲ್ಲ. ಅವರು ಶಾಲೆಯಿಂದ ಇನ್ನೂ ಬಂದಿಲ್ಲ." ಸೀತಮ್ಮ ಉತ್ತರಿಸಿದಳು.

ಸೀತಮ್ಮ ಹೆಚ್ಚು ಮಾತಾಡಲು ಅಲ್ಲಿ ನಿಲ್ಲಲಿಲ್ಲ. ಒಳಮನೆಯಲ್ಲಿ ಕೆಲಸಗಳು ಆಕೆಯನ್ನು ಇದಿರು ನೋಡುತ್ತಿದ್ದುವು. ಆದುದರಿಂದ ಅವಳು ಒಳ ತೆರಳಿದಳು. ವೇಣುವಾದರೂ ತನ್ನ ವಸತಿಯೊಳಗೆ ಹೆಜ್ಜೆ ಹಾಕಿದ. ಕೋಣೆ

ಯೊಳಗೆ ವಸ್ತ್ರಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ಆತ ಅವುಗಳನ್ನು ಹೆಕ್ಕಿ ಮಡಚಿ ಮಡಗುವುದರಲ್ಲಿ ನಿರತನಾದ. ಅನಿತರಲ್ಲಿ ಮಾಸ್ತರರ ಹಿರಿಯ ಹುಡುಗ ರಾಮುವಿನ ಸವಾರಿ ಅಲ್ಲಿಗೆ ಚಿತ್ತೈಸಿತು. ಅವನು ಬಂದು ಕೋಣೆಯೊಳಗೆ ಇಣಿಕಿ ನೋಡುತ್ತಾ ಉಸುರಿದ "ಮಾವ, ಏನು ಮಾಡುತ್ತೀ ?"

"ಏಕೋ ರಾಮು ?" ಅರಿವೆಗಳನ್ನು ಮಡಚುತಿದ್ದ ವೇಣು ಮೊಗವನ್ನು ಮೇಲಕ್ಕೆತ್ತಿದ

"ನೋಡು ಮಾವ, ನಾಲ್ಕು ಗಂಟೆ ಕಾಫಿಗೆ ನೀನು ಬೇರೆಲ್ಲಿಯೂ ಹೋಗಬೇಡ. ನೀನು ಕಾಫಿಗೆ ನಮ್ಮ ಮನೆಗೆ ಬರಬೇಕು. ಅಮ್ಮ ಹೇಳಿದಾಳೆ."

"ಇಲ್ಲ. ರಾಮು ಕಾಫಿ ಕುಡಿಯಲು ನಾನು ಹೋಟೆಲಿಗೆ ಹೋಗುತೇನೆ."

"ಕೂಡದು ಮಾವ ನೀನು ನಮಗೆ ಹಣ್ಣು ತಂದು ಕೊಡುತ್ತೀ. ಬಿಸ್ಕತ್ತು ತರುತ್ತೀ. ಆಟಿಗೆಗಳನ್ನು ಕೊಡುತ್ತೀ. ಅದರೆ ಒಂದು ದಿವಸ ನಮ್ಮ ಮನೆಯಲ್ಲಿ ಕಾಫಿ ತಿಂಡಿ ತಕ್ಕೊಂಬಾರದೇ ?"

ವೇಣು ಹುಡುಗನ ಮೊಗವನ್ನು ನೋಡಿದ. ಅದು ಕಿರಿದಾಗಿದ್ದಿತು ಕಣ್ಣುಗಳಲ್ಲಿ ಹನಿಗಳು ನೆರೆದಿದ್ದುವು. ಬಾಲಕನ ಉತ್ಸಾಹ ಇಂಗಿಹೋಗಿತ್ತು. ಕಣ್ಣೀರು ನೆರೆದ ಆ ಕಣ್ಣುಗಳ ಮರೆಯಲ್ಲಿ ಆವುದೋ ಒಂದು ಅವ್ಯಕ್ತ ಚಿತ್ರವನ್ನು ವೇಣು ನೋಡಿದ. ಅವನ ಹೃದಯವನ್ನು ಮಮತೆಯ ಕುಳಿರ್ಗಾಳಿ ತೀಡಿತು. ಎದೆಯಿಂದ ಹೊರಟ ನಿಡಿದುಸಿರು ಹೊರಗಿನ ಗಾಳಿಯಲ್ಲಿ ಬೆರೆತಿತು.

ವೇಣು ಮಾತಾಡದಿಹುದನ್ನು ಕಂಡು ರಾಮು ಮರಳಿ ನುಡಿದ. "ನೀನು ಕಾಫಿಗೆ ನಮ್ಮಲ್ಲಿಗೆ ಬರುವುದಿಲ್ಲವೇ ? ನೋಡು, ನೀನು ಬರದಿದ್ದರೆ ನಾವು ಕಾಫಿ ಕುಡಿವುದೇ ಇಲ್ಲ."

"ಮಗೂ, ಅಳಬೇಡ. ಇಂದು ನಿಮ್ಮ ಮನೆಯಲ್ಲಿಯೇ ಕಾಫಿಯನ್ನು ಕುಡಿಯುತೇನೆ." ಎಂದು ವೇಣು ಹುಡುಗನನ್ನು ಸಂತೈಸಿದ.

ಆ ನುಡಿಗಳನ್ನು ಕೇಳಿ ಎಳೆಯನ ಮೊಗ ಅರಳಿದ ಗುಲಾಬಿಯಾಯಿತು. ಮಾವ ಕಾಫಿಗೆ ಬರುವನೆಂಬ ಸುದ್ದಿಯನ್ನು ತಾಯಿಗೆ ಅರುಹಲು ಅವನ ಕಾಲುಗಳು ಮನೆಯ ಕಡೆಗೆ ಹೆಜ್ಜೆಗಳನ್ನಿರಿಸಿದುವು.

ನಾಲ್ಕುವರೆ ತಾಸಿಗೆ ಮಾಸ್ತರರು ಶಾಲೆಯ ಕೆಲಸವನ್ನು ಮುಗಿಸಿಕೊಂಡು ಮನೆಗೆ ಬಂದರು. ಪರವೂರಿಗೆ ತೆರಳಿದ್ದ ವೇಣು ಮರಳಿ

ಬಂದಿದಾನೆಂಬುದನ್ನು ಅವರು ಮಡದಿಯ ಮೂಲಕ ಅರಿತರು. ಅವರು ಕೋಟು ಮುಂಡಾಸಗಳನ್ನು ಗೂಟದ ಮೇಲೆ ನೇತುಹಾಕಿದರು. ವೇಣುವನ್ನು ಕಾಣಲೋಸುಗ ಆತನ ವಸತಿಯ ಕಡೆಗೆ ಅವರು ಅಡಿಗಳನ್ನಿರಿಸಿದರು.

ವೇಣು ಕಸಬರಿಕೆಯನ್ನು ಕೈಯಲ್ಲಿ ಹಿಡಿದು ಕೋಣೆಯ ಕಸವನ್ನು ಉಡುಗುತಿದ್ದ. ಮಾಸ್ತರರನ್ನು ಕಾಣಲು ಅವನ ಮೊಗದಲ್ಲಿ ಎಳೆ ನಗೆಯ ಮಗ್ಗೊಂದು ಅಲರಿತು. "ಹೇಗಿದ್ದೀರಿ ಮಾಸ್ತರ?" ಅವನು ಕುಶಲವನ್ನು ಪ್ರಶ್ನಿಸಿದ. ಎಲ್ಲರೂ ಸುಖ ತಾನೇ. ಬನ್ನಿ, ಕುಳಿತುಕೊಳ್ಳಿ.

ವೇಣು ತೋರಿಸಿದ ಕುರ್ಚಿಯ ಮೇಲೆ ಮಾಸ್ತರರು ಮಂಡಿಸಿದರು. "ನಿಮಗೆ ಕ್ಷೇಮವಷ್ಟೆ. ನೀವಿಲ್ಲದುದರಿಂದ ನಮಗೆಲ್ಲಾ ತುಂಬಾ ಬೇಸರ. ಹುಡುಗರಂತೂ ಮಾವ ಯಾವಾಗ ಬರುತಾರೆಂದು ದಿನಕ್ಕೆ ಹತ್ತು ಸಲ ಕೇಳುತಿದ್ದರು."

"ಈಗ ಮಾವ ಬಂದಿದಾನಲ್ಲ." ವೇಣು ನಗುತ್ತಾ ನುಡಿದ. "ಇನ್ನು ಅವರಿಗೆ ಬೇಸರಕ್ಕೆ ಕಾರಣವಿಲ್ಲ."

"ಎಳೆಯರ ಬೇಸರವನ್ನು ಮಾತ್ರವಲ್ಲ; ನಮ್ಮೆಲ್ಲರ ಬೇಸರವೂ ನಿಮ್ಮ ಬರವಿನಿಂದ ಇಲ್ಲವಾದಂತಾಯಿತು. ಬನ್ನಿ. ನಮ್ಮ ಮನೆಯಲ್ಲಿ ಒಂದಿಷ್ಟು ಕಾಫಿ ಉಪ್ಪಿಟ್ಟುಗಳನ್ನು ತೆಗೆದುಕೊಳ್ಳಿ."

"ನೀವು ಹೇಳದಿದ್ದರೂ ನಾನಾಗಿಯೇ ಬರುತಿದ್ದೆ. ಕಾಫಿ ತಿಂಡಿಗಳಿಗೆ ಬರಲೇಬೇಕೆಂದು ನಿಮ್ಮ ಪೋರ ನನ್ನಿಂದ ಭಾಷೆ ತೆಗೆದುಕೊಂಡು ಹೋಗಿದಾನೆ."

ಕೈಕಾಲುಗಳನ್ನು ತೊಳೆದುಕೊಳ್ಳಲು ಸೀತಮ್ಮ ತಂಬಿಗೆಯಲ್ಲಿ ನೀರನ್ನು ಅಣಿಗೊಳಿಸಿದ್ದಳು. ವೇಣು ಕೈಕಾಲುಗಳನ್ನು ತೊಳೆದುಕೊಂಡ. ಒಳಗೆ ಸೀತಮ್ಮ ಮಣೆ ಹಾಕಿದ್ದಳು. ವೇಣು ಮತ್ತು ಮಾಸ್ತರರು ಮಣೆಗಳ ಮೇಲೆ ಕುಳಿತರು. ಮಾವನ ಪಕ್ಕದಲ್ಲಿಯೇ ಎಳೆಯರೂ ಸ್ಥಳ ಹಿಡಿದಿದ್ದರು. ಸೀತಮ್ಮ ತಟ್ಟೆಗಳಲ್ಲಿ ಉಪ್ಪಿಟ್ಟನ್ನು ತಂದು ಎಲ್ಲರ ಮುಂದೆ ಇರಿಸಿದಳು. ಇನ್ನೊಂದು ಚಣದಲ್ಲಿ ಕಾಫಿಯ ಲೋಟಗಳೂ ಬಂದುವು.

ಒಂದು ತುತ್ತು ಉಪ್ಪಿಟ್ಟನ್ನು ತೆಗೆದುಕೊಳ್ಳುತ್ತಾ ಮಾಸ್ತರರು ಉಸುರಿದರು. "ನೋಡಿ ವೇಣು ಗೋಪಾಲರಾಯರೇ, ನಿಮಗೆ ಒಂದು ಸೋಜಿಗದ ಸುದ್ದಿಯನ್ನು ಅರುಹಲಿರುವೆ."

ಬರುವುದು. ಕಳ್ಳರ ಪ್ರತಿಯೊಂದು ಚೌರ್ಯವೂ ಯಶಸ್ವಿಯಾಗಿದೆ. ಅವರ ಗೈಮೆಗಳನ್ನು ತಡೆಗಟ್ಟದಿರುವುದು ಅಧಿಕಾರಿಗಳ ದಕ್ಷತೆಯಲ್ಲಿ ಕೊರತೆಯನ್ನು ಸೂಚಿಸುತ್ತದೆ. ಇನ್ನಾದರೂ ಸಮಯ ವಿಳಂಬಿಸಿಲ್ಲ. ಅಧಿಕಾರಿಗಳು ಕಣ್ತೆರೆದು ತಮ್ಮ ಕರ್ತವ್ಯವನ್ನು ಪಾಲಿಸುವರೆಂದು ನಮ್ಮ ನಂಬಿಕೆ. "

" ಈ ಪತ್ರಿಕೆಗಳಿಗೆ ಬೇರೇನೂ ಕೆಲಸವಿಲ್ಲ. " ಕುಪ್ಪಣ್ಣ ತನ್ನೊಳಗೇ ಗೊಣಗಿದ. " ಈ ಸಂಪಾದಕರ ಮನೆಯೊಳಗೆ ನಾವು ಇನ್ನೂ ನುಗ್ಗಿಲ್ಲ. ಆದುದರಿಂದಲೇ ಅವರಿಗೆ ಈ ಕಣ್ಣುರಿ. "

ಅಷ್ಟರಲ್ಲಿ ಮೇಜದ ಮೇಲೆ ನೆಲಸಿದ್ದ ಪೂರಿಪಲ್ಯಗಳ ತಟ್ಟೆ ಕುಪ್ಪಣ್ಣನ ಮೊಗವನ್ನು ನೋಡುತಿದ್ದಿತು. ಅವನು ಹಣೆಯ ಮೇಲೆ ಮೂಡಿದ್ದ ಬೆವರು ಹನಿಗಳನ್ನು ಎಡಗೈಯಿಂದ ಒರೆಸಿಕೊಳ್ಳುತ್ತಾ ತಟ್ಟೆಗೆ ಕೈಹಾಕಿದ ತಟ್ಟೆಯಲ್ಲಿದ್ದ ತಿನಸು ಕುಪ್ಪಣ್ಣನ ತುತ್ತಿನ ಚೀಲದ ಹಾದಿಯನ್ನು ಹಿಡಿದಿತು.

" ಏನೋ ನೀನೊಬ್ಬನೇ ಉದರ ಪೂಜೆಯನ್ನು ಕೈಗೊಂಡಿದ್ದೀಯೆ " ಎಂಬ ನುಡಿಗಳು ಪೂರಿಗಳನ್ನು ಮೆಲ್ಲುವುದರಲ್ಲಿ ಮಗ್ನನಾಗಿದ್ದ ಕುಪ್ಪಣ್ಣನನ್ನು ಎಚ್ಚರಿಸಿದುವು. ಆತ ಮುಂದಿದ್ದ ತಟ್ಟೆಯಿಂದ ಕಣ್ಣುಗಳನ್ನು ಮೇಲಕ್ಕೆತ್ತಿದ ದೇವಣ್ಣನ ನಗುಮೊಗವನ್ನು ಅವನು ನೋಡಿದ. "ಬಾ; ಕುಳ್ಳಿರು" ಕುಪ್ಪಣ್ಣ ತನ್ನ ಗೆಳೆಯನಿಗೆ ಪಕ್ಕದ ಕುರ್ಚಿಯನ್ನು ತೋರಿಸಿದ. " ಇವರಿಗೆ ಒಂದು ತಟ್ಟೆ ಪೂರಿಪಲ್ಯವನ್ನು ತಾ. " ಎಂದು ಹೋಟೆಲಿನ ಮಾಣಿಗೆ ಆಣತಿ ಗೈದುದಾಯಿತು.

ದೇವಣ್ಣ ತನ್ನ ವ್ಯಾನಿಟಿ... 

ದೇವಣ್ಣ ತನ್ನ ವ್ಯೈಯನ್ನು ಕುರ್ಚಿಯೊಂದರ ಮೇಲಿರಿಸಿದ. ಕುಪ್ಪಣ್ಣನ ತುಟಿಗಳು ಅಲುಗಿದುವು. " ಈ ದಿನದ ನಗರ ದುಂದುಭಿಯನ್ನು ನೋಡಿದೆಯಾ ? "

" ಇಲ್ಲ " ದೇವಣ್ಣ ತಲೆಯನ್ನು ಅಲುಗಿಸಿದ.

" ಇಗೋ. ಇಂದಿನ ಸಂಚಿಕೆಯನ್ನು ನಾವು ಓದಬೇಕಾದುದು. " ಕುಪ್ಪಣ್ಣ ತೊಡೆಯ ಮೇಲಿದ್ದ ಪತ್ರಿಕೆಯನ್ನು ದೇವಣ್ಣನ ಕಡೆಗೆ ಚಾಚಿದ.

" ಏನು ವಿಶೇಷ ? " ದೇವಣ್ಣನ ಹುಬ್ಬುಗಳನ್ನು ಕೊಂಕಿಸಿದ.

" ಸಂಪಾದಕರು ನಮ್ಮನ್ನೇ ಗುರಿಯಿಟ್ಟು ತಮ್ಮ ಬಾಣವನ್ನು ಎಚ್ಚಿದಾರೆ. " ಪಿಸುಮಾತಿನಲ್ಲಿ ನಿಧಾನವಾಗಿ ಕುಪ್ಪಣ್ಣ ಉಸುರಿದ. "ಬೆಳಗಿನ

ನಿದ್ದೆಯ ಮಂಕು ಅವರ ಮೆದುಳನ್ನು ಬಿಡಲಿಲ್ಲವೆಂದು ತೋರುತದೆ. ಅರೆ ನಿದ್ದೆಯಲ್ಲಿ ತಮ್ಮ ಕೈಯಗಡಿಯನ್ನು ನಮ್ಮ ಕಡೆಗೆ ಬೀಸಿದರು. ''

'' ಅಂದರೆ ? '' ಪತ್ರಿಕೆ ಬಿಚ್ಚುತಿದ್ದ ದೇವಣ್ಣ ಅಂದ.

'' ಇಂದಿನ ಪತ್ರಿಕೆಯ ಅಗ್ರಲೇಖವನ್ನು ಓದಿನೋಡು. ಎಲ್ಲಾ ತಿಳಿವುದು. ''

ದೇವಣ್ಣ ಪತ್ರಿಕೆಯ ಅಗ್ರಲೇಖನವನ್ನು ನೋಡಿದ. ಅದನ್ನು ಓದಿ ಮುಗಿಸಲು ಭೀತಿಯ ಕಣಗಳು ಆವನ ಕಣ್ಣುಗಳಲ್ಲಿ ನೆರೆದುವು. ಅವನು ಕುಪ್ಪಣ್ಣನನ್ನೇ ಒಂದು ಚಣ ನೋಡಿ ಹೇಳಿದ. '' ಇನ್ನು ಅಧಿಕಾರಿಗಳು ತಮ್ಮ ನಿದ್ದೆಯಿಂದ ಎಚ್ಚರಗೊಳ್ಳುವರು. ನಾವಿನ್ನು ತುಸ ಎಚ್ಚರದಿಂದ ಕೈಯಾಡಿಸಬೇಕು. ''

ಪೂರಿಪಲ್ಯಗಳ ತಟ್ಟೆ ಬಂದು ದೇವಣ್ಣನ ಮುಂದೆ ನೆಲೆಸಿತು. ಪತ್ರಿಕೆಯಲ್ಲಿದ್ದ ಬರಹ ಅವನ ವಿಚಾರಗಳನ್ನು ಕೆರಳಿಸಿದ್ದುದರಿಂದ ಅವನು ಅದನ್ನು ನೋಡಲೇ ಇಲ್ಲ ಆದುದರಿಂದ ಕುಪ್ಪಣ್ಣ ಅವನನ್ನು ಎಚ್ಚರಿಸಿದ. '' ಮೊದಲು ಉದರ ಪೂಜೆಯನ್ನು ಮಾಡು. ಉಳಿದ ಮಾತು ಅನಂತರ. ''

ದೇವಣ್ಣ ತನ್ನ ಮುಂದಿದ್ದ ತಟ್ಟೆಗೆ ಕೈಹಚ್ಚಿದ. ಕುಪ್ಪಣ್ಣನ ಕೈ ಕಾಫಿಯ ಕಪ್ಪನ್ನು ತೆಗೆದುಕೊಂಡಿತು. ಕೆಲನಿಮಿಷಗಳನಕ ಅವರು ತುಟಿ ಬಿಚ್ಚಿಲಿಲ್ಲ.

ಕಾಫಿ ಕುಡಿದಾಯಿತು. ದುಡ್ಡು ಕೊಟ್ಟು ಇಬ್ಬರೂ ಹೋಟೆಲಿನಿಂದ ಹೊರಬಿದ್ದರು. ರಾಜಮಾರ್ಗವನ್ನು ಹಿಡಿದುವು ಅವರ ಪಾದಗಳು. ದೇವಣ್ಣ ಗೆಳೆಯನೊಡನೆ ಉಸುರಿದ. '' ಆ ಸಂಪಾದಕರಿಗೆ ನಾವು ಬುದ್ಧಿಯನ್ನು ಕಲಿಸಬೇಕು. ''

'' ಹೇಗೆ ? '' ಎಂದು ಕುಪ್ಪಣ್ಣ ಬಾಯ್ದೆರೆದ.

'' ಸಂಪಾದಕರ ಮನೆಬಾಗಿಲು ಮುರಿದು ಸೂರೆಗೊಂಡರಾಯಿತು. ''

'' ಏನನ್ನು ಸೂರೆಗೊಳ್ಳುವುದು ? ಸಂಪಾದಕರ ಶಾಯಿಬುಡ್ಡಿ ಲೇಖನಿಗಳನ್ನು ಎತ್ತಿ ಹಾಕುವುದೇ ? ಅಲ್ಲ ಅವರು ಗೀಚಿದ ಹಾಳೆಗಳನ್ನು ಹೊತ್ತು ತರುವುದೇ ? ''

ದೇವಣ್ಣ ಬಾಯ್ದೆರೆಯಲಿಲ್ಲ. ಒಂದು ಚಣದ ಅನಂತರ ಅವನು

ಉಸುರಿದ. “ ನೀನೇನು ಹೇಳುತ್ತಿ ? ನನಗಂತೂ ಆ ಸಂಪಾದಕರ ಹಲ್ಲು ಮುರಿಯಬೇಕೆಂದೆನಿಸುತ್ತದೆ. ”

“ ಸುಮ್ಮನಿರುವುದು ಲೇಸು ದೇವಣ್ಣ. ” ನಿಧಾನವಾಗಿ ಕುಪ್ಪಣ್ಣ ಗೆಳೆಯನಿಗೆ ಬುದ್ಧಿ ಹೇಳಿದ. “ ಸಂಪಾದಕರ ಹಲ್ಲು ಮುರಿಯಲು ಹೋಗಿ ನಮ್ಮ ಹಲ್ಲುಗಳು ಕಳಚಿ ಬಿದ್ದಾವು ! ಅವರು ಪತ್ರಿಕೆ ತುಂಬಾ ಬರೆದು ಶಾಯಿ ಮತ್ತು ಕಾಗದಗಳ ಬೆಲೆ ಏರಿಸಲಿ ! ”

“ ಕುಪ್ಪಣ್ಣ, ಈ ಊರು ನಮಗೆ ಬಹಳ ಬಿಸಿಯಾಗಿದೆ. ” ಬೀಡಿಯೊಂದನ್ನು ತುಟಿಯ ಮೇಲಿರಿಸಿ ದೇವಣ್ಣ ಜೇಬಿನಿಂದ ಕಡ್ಡಿಪೆಟ್ಟಿಗೆಯನ್ನು ತೆಗೆದ. “ ಪತ್ರಿಕೆಗಳೂ ಕೂಗ ತೊಡಗಿವೆ. ಪೋಲೀಸರೂ ನಿದ್ದೆ ಬಿಡ ತೊಡಗಿದಾರೆ. ನಾವು ಇಲ್ಲಿಂದ ಕಂಬಿ ಕೀಳುವುದು ಲೇಸು. ಬೇರೊಂದು ಊರಿಗೆ ಹೋಗಿ ನಮ್ಮ ವ್ಯವಹಾರವನ್ನು ಆರಂಭಿಸುವ. ”

“ ಈ ಊರಿನಂತೆ ಬೇರಿನ್ನಾವುದೂ ನನಗೆ ಒಗ್ಗುವುದಿಲ್ಲ. ” ಕುಪ್ಪಣ್ಣ ನಿಧಾನವಾಗಿ ಮಾರ್ನುಡಿದ. “ ಬೇರೊಂದು ಊರಿನಲ್ಲಿ ನನಗೆ ಎರಡು ದಿನ ಇದ್ದರೆ ಬೇಸರ ಬರುತದೆ. ”

“ ಅದೇನು ನಿನಗೆ ಈ ಊರಲ್ಲಿ ಇನಿತೊಂದು ಸ್ನೇಹ ” ದೇವಣ್ಣನ ತುಟಿಗಳು ಅರೆ ಬಿರಿದುವು. ಕನ್ನೆಯೊಬ್ಬಳು ನಿನ್ನ ಮನಸ್ಸನ್ನು ಕದ್ದಿರಬಹುದು. ”

“ ದೇವಣ್ಣ ” ಕುಪ್ಪಣ್ಣನ ಕೊರಳ ದನಿಯು ತುಸ ತೀಕ್ಷ್ಣವಾಯಿತು. “ ಹಾಸ್ಯಕ್ಕಾದರೂ ಆ ಮಾತು ಎತ್ತಬೇಡ. ಕನ್ನೆಯೊಬ್ಬಳು ನನ್ನ ಪಾಲಿಗಿದ್ದಿದ್ದರೆ ಈ ವ್ಯವಹಾರಕ್ಕೆ ಕೈ ಹಚ್ಚುತ್ತಿರಲಿಲ್ಲ. ”

“ ಹಾಗಾದರೆ ಈ ಊರಲ್ಲಿ ನಿನಗೇಕೆ ಈ ಮಮತೆ ” ದೇವಣ್ಣ ಗೆಳೆಯನ ಮೊಗವನ್ನು ನೋಡಿದ.

“ ಅದು ನನಗೆ ತಿಳಿಯದು. ಅಂದು ನಾಲ್ಕು ದಿನ ಈ ಊರಿನಿಂದ ಕಂಬಿ ಕಿತ್ತಿದ್ದಾಗ, ನನ್ನ ಜೀವವು ಕೊಳದಿಂದ ತೆಗೆದ ಮೀನಿನಂತೆ ಒದ್ದಾಡಿತು. ಊರಿಗೆ ಬಂದ ಅನಂತರ ಅದು ತುಸ ನೆಮ್ಮದಿಯನ್ನು ಹೊಂದಿತು. ”

“ ಇನ್ನು ಈ ಊರಲ್ಲಿ ನೆಲಸಲು ನನಗೆ ಇಷ್ಟವಿಲ್ಲ. ನಾವು ಬೆಂಗಳೂರಿಗೋ ಮದ್ರಾಸಿಗೋ ತೆರಳುವಾ. ಅಲ್ಲಿನ ಮಹಾ ಸಮುದ್ರದಲ್ಲಿ ಈ ಎರಡು

ಹೊಸ ಹನಿಗಳು ಸೇರಿದರೆ ಯಾರೂ ಅರಿಯರು. ಈ ಪುಟ್ಟ ಕೆರೆಯಲ್ಲಿ ನಾವಿನ್ನು ಇರುವುದು ಬೇಡ. ಆಗಸವನ್ನು ಮುಗಿಲು ಮುಚ್ಚಿದೆ; ಸಿಡಿಲು ಗುಡುಗುಗಳ ಗರ್ಜನೆಗಳು ಕೇಳುತಲಿವೆ.

" ನಿನಗೆ ಇನಿತು ಅಂಜಿಕೆಯಿದ್ದರೆ, ನಾಲ್ಕು ದಿನಗಳ ಮಟ್ಟಿಗೆ ನೀನು ರಜ ತೆಗೆದುಕೋ. ನನಗೆ ಈ ಊರಲ್ಲಿ ಇನ್ನೂ ತುಸು ಕೆಲಸಗಳಿವೆ" ಕುಪ್ಪಣ್ಣ ಉಸುರಿದ. " ಮದ್ರಾಸಿಗೆ ಬಂದು ನಿನ್ನ ಜತೆಗೂಡುವೆನು."

" ಏನಯ್ಯಾ ನಿನ್ನ ಆ ಕೆಲಸ ? "

" ಬಹು ಗುಟ್ಟಾದುದು. "

" ನಿನಗೆ ಸಂಸಾರವಿಲ್ಲ. ಜೀವವನ್ನು ರಮಿಸಬಲ್ಲ ರನ್ನೆಯಿಲ್ಲವೆಂದು ಹೇಳುತ್ತೀಯೆ. ಇನ್ನಾವುದು ಅದು ? ನನ್ನ ಸಂಗಡವೂ ಹೇಳಬಾರದೇ ? "

" ಯಾರೊಡನೆಯೂ ಹೇಳಬಾರದು. "

" ನಿನ್ನ ಇಷ್ಟ."

ಇಬ್ಬರೂ ರಾಜಮಾರ್ಗದಲ್ಲಿ ತಮ್ಮ ನಡಿಗೆಯನ್ನು ಮುಂದುವರಿಸಿದರು.

× × × ×

ಅಂದು ಬಾಂದಳವನ್ನು ಮುಗಿಲುಗಳು ಮುಸುಕಿದ್ದುವು. ಮೋಡಗಳ ಕರಿ ಪರದೆಯ ಹಿಂದೆ ನೇಸರು ಮರೆಯಾಗಿದ್ದ. ಮುಗಿಲರಾಯ ಆಗಸದಲ್ಲಿ ನಿಂತು ಮಳೆಗರೆಯುತಿದ್ದ. ನೀರಹನಿಗಳು ಎಡೆಬಿಡದೆ ಜಿನುಗುತಿದ್ದುವು. ರಸ್ತೆಯ ಚರಂಡಿಗಳಲ್ಲಿ ನೆರೆದ ಕೆನ್ನೀರಲ್ಲಿ ನೆಲದವ್ವ ಜಳಕವಾಡುತಿದ್ದಳು. ಬೀದಿಯಲ್ಲಿ ಜನವಿಲ್ಲ. ಮಳೆಗಂಜಿ ಎಲ್ಲರೂ ತಮ್ಮ ಮನೆಗಳೊಳಗೆ ಸೇರಿದ್ದರು.

ಬಡಮಂದಿ, ಕೂಲಿನಾಲಿ ಮಾಡಿ ಜೀವಿಸುವ ಜನ ವಾಸಗೈವ ಮನೆಗಳ ನಾಲದು. ಅಲ್ಲಿ ಮುಗಿಲನಾಡನ್ನು ಸೇರಲು ಎಣಿಕೆಗೈಯುತಿಹ ಉಪ್ಪರಿಗೆಗಳು ನೋಡಸಿಗವು. ಎಲ್ಲವೂ ಮುರುಕು ಮನೆಗಳು; ಕತ್ತಲೆಯ ಗವಿಗಳು. ಮನೆಗಳ ಒಳಗೂ ಹೊರಗೂ ಹೊಲಸುಗಳು. ಈ ಬಿಲಗಳಲ್ಲಿ ಬಡಜೀವಿಗಳು ಬದುಕುತಿದ್ದರು; ಬಾಳುತಿದ್ದರು. ಅವರ ಸುಖಸಂತೋಷಗಳನ್ನು, ನೋವು ಬೇವುಗಳನ್ನು ಆ ಮನೆಗಳ ಗೋಡೆಗಳು ನೋಡುತಿದ್ದುವು. ಪ್ರತಿಯೊಂದು ಮನೆಯ ಅಂತರಂಗದಲ್ಲಿಯೂ ಹತ್ತಾರು, ಅಲ್ಲ ನೂರಾರು ಕರುಣೆಯ

ಕತೆಗಳು ಅಡಕವಾಗಿದ್ದುವು. ಗೋಡೆಗಳಿಗೆ ಮಾತು ಬರುತಿದ್ದರೆ, ಅವುಗಳ ಹೇಳಿಕೆಗಳೇ ಒಂದೊಂದು ಬೃಹತ್ಕಾದಂಬರಿಗಳಾಗುತಿದ್ದುವು.

ಇಂತಹ ಮುರುಕು ಮನೆಗಳ ಸಾಲಿನಲ್ಲಿ ಒಂದು ಗುಡಿಸಿಲು. ಮುದುಕಿಯೊಬ್ಬಳು ಬಾಗಿಲಲ್ಲಿ ನಿಂತು ನೆಲವನ್ನು ನೋಡುತಿದ್ದಳು. ಆಕೆಯ ಕಣ್ಣುಗಳಿಂದ ಉದುರಿದ ಅಶ್ರುಕಣಗಳು ಹೊರಗಿನ ನೀರ ಹನಿಗಳೊಡನೆ ಒಂದುಗೂಡುತಿದ್ದುವು. ಎದೆಯಿಂದ ಹೊಮ್ಮಿದ ಬಿಸಿಯುಸಿರುಗಳು ಸುತ್ತಲಿನ ಕುಳಿರ್ಗಾಳಿಯಲ್ಲಿ ಬೆರೆಯುತಿದ್ದುವು.

ಮನೆಯ ಹೊರಗೆ ಒಬ್ಬ ನಿಂತಿದ್ದ. ಕೊಡೆಯೊಂದು ಅವನ ಕೈಯನ್ನು ಅಲಂಕರಿಸಿದ್ದಿತು. ತಲೆಯ ಮೇಲೆ ಒಂದು ರುಮಾಲಿದ್ದಿತು. ಒಂದು ಬೆಳ್ಳಗಿನ ಧೋತರವನ್ನು ಸೊಂಟಕ್ಕೆ ಸುತ್ತಿದ್ದ. ಬಿಳಿಯ ಶರ್ಟೊಂದು ಮೈಯನ್ನು ಮುಚ್ಚಿದ್ದಿತು. ಹೆಗಲಮೇಲೆ ಒಂದು ಶಾಲಿದ್ದಿತು. ಅವನು ಆ ಸಾಲು ಮನೆಗಳಲ್ಲಿ ಜೀವಿಸತಕ್ಕವನಲ್ಲ. ಬೇರೊಂದು ಲೋಕದಿಂದ ಇಳಿದು ಅಲ್ಲಿಗೆ ಐತಂದವನು. ಆತ ಬೇರಿನ್ನಾರೂ ಅಲ್ಲ; ಮನೆಗಳೊಡೆಯ, ಸಾಹುಕಾರ ಮುದುಕಿಯಿಂದ ಮನೆ ಬಾಡಿಗೆಯನ್ನು ವಸೂಲಿ ಮಾಡಲು ಐತಂದಿದ್ದ ಅವನ ನುಡಿಗಳಲ್ಲಿ ಒಡೆತನದ ಅಧಿಕಾರವಿತ್ತು; ದರ್ಪವಿತ್ತು.

ಮುದುಕಿ ತುಟಿಗಳನ್ನು ಬಿಚ್ಚದೆ, ಚರಂಡಿಯಲ್ಲಿ ಹರಿಯುತಿಹ ಮಳೆ ನೀರನ್ನು ನೋಡುತ್ತಾ ಕಂಬನಿಗರೆವುದನ್ನು ಕಂಡು ಸಾಹುಕಾರ ಹೇಳಿದ. "ಏಕೆ ಮುದುಕಿ ಮಾತಾಡಲೊಲ್ಲಿ? ಬಾಡಿಗೆ ಹಣವೆಲ್ಲಿ?"

"ಏನು ಹೇಳಲಿ ಸಾಹುಕಾರರೇ" ಬಿಕ್ಕುತ್ತಾ ಮುದುಕಿ ಅಂದಳು. "ನಿಮಗೆ ಹೇಳಬೇಕಾದುದನ್ನೆಲ್ಲಾ ಮೊನ್ನೆ ದಿನ ಹೇಳಿದ್ದೇನೆ."

"ಇತರರೆಲ್ಲರಿಗಿಂತಲೂ ಹೆಚ್ಚು ವೇಳೆಯನ್ನು ನಿನಗೆ ಕೊಟ್ಟಿದೇನೆ." ಬಹಳ ಔದಾರ್ಯವನ್ನು ತೋರಿಸಿದವನಂತೆ ನಟಿಸುತ್ತಾ ಮನೆಯೊಡೆಯನು ಉಸುರಿದ. "ಬೇರೆಯವರಾಗಿದ್ದರೆ ಅವರನ್ನು ಈ ವೇಳೆಯಲ್ಲಿ ಮನೆಯಿಂದ ಅಟ್ಟಿಬಿಡುತಿದ್ದೆ. ನೀನು ಬಾಡಿಗೆ ಕೊಡದೆ ಎರಡು ತಿಂಗಳಾಯಿತು."

"ನಿಜ ಒಡೆಯರೇ. ನೀವು ತೋರಿಸಿದ ದಯೆಯನ್ನು ನಾವು ಮರೆಯಲಾರೆವು." ಮುದುಕಿ ಎದೆಗರಗುವದನಿಯಲ್ಲಿ ಬಿನ್ನವಿಸಿದಳು. "ಆದರೆ ನೋಡಿ, ಸೊಸೆ ನಮ್ಮೆಲ್ಲರನ್ನೂ ಬಿಟ್ಟು ಮಸಣದ ಹಾದಿಯನ್ನು ಹಿಡಿದಳು.

ಮಗ ಆಸ್ಪತ್ರೆಯಿಂದ ಮರಳಿ ಬಂದು ಒಂದು ವಾರವೂ ಆಗಿಲ್ಲ. ಈ ಎರಡು ಮಕ್ಕಳನ್ನು ನೋಡಿಕೊಂಡು, ಕೂಲಿ ಮಾಡಿ ನಾನು ಈಸು ದಿನಗಳನ್ನು ಕಳೆದೆ. ಹೇಗೂ ಇಷ್ಟು ದಿನ ನೀವು ತಡೆದಿದ್ದೀರಿ. ಇನ್ನು ಒಂದು ಹದಿನೈದು ದಿನ ನಮಗೆ ಸಮಯ ಕೊಡಿ. ಆಗ ಮಗ ಚೆನ್ನನಿಗೆ ಸಂಬಳ ಸಿಗುತ್ತದೆ. ”

“ ಅಜ್ಜೀ, ಈ ನಿನ್ನ ಪುರಾಣವನ್ನೆಲ್ಲಾ ಕೇಳಲು ನನಗೆ ಬಿಡುವಿಲ್ಲ. ” ಸಾಹುಕಾರನ ದನಿಯಲ್ಲಿ ದರ್ಪ ಬೆರೆತಿದ್ದಿತು. “ ಪ್ರತಿಯೊಬ್ಬರಿಗೂ ಅವರವರ ಸಂಕಟಗಳು ಇದ್ದೇ ಇವೆ ನೀನು ಎರಡು ತಿಂಗಳ ಬಾಡಿಗೆ ಎಂಟು ರೂಪಾಯಿ ಗಳನ್ನು ಕೊಡು. ಇಲ್ಲದಿದ್ದರೆ ಮನೆಬಿಟ್ಟು ಹೊರಡು. ”

“ ಈ ಮಳೆಗಾಲದಲ್ಲಿ ನೀವು ಹೀಗೆ ಹಟಹಿಡಿದರೆ, ನಾವು ಎಲ್ಲಿಗೆ ಹೋಗುವುದು ? ”

“ ಎಲ್ಲಿಗೆ ಬೇಕಾದರೂ ಹೋಗಬಹುದು. ನನ್ನ ಅಡ್ಡಿಯಿಲ್ಲ. ಆದರೆ ನೀವು ಮನೆಯೊಳಗಿರಬೇಕಾದರೆ ಬಾಡಿಗೆ ಕೊಡಬೇಕು. ” ಸಾಹುಕಾರನ ಕೊರಳಿಂದ ನಿಷ್ಠುರ ವಚನ ಹೊಮ್ಮಿತು.

“ ಇಲ್ಲ. ನಿಮ್ಮ ಕಾಲಿಗೆ ಬೀಳುತೇವೆ. ” ಅಜ್ಜಿ ಗೋಳಾಡಿದಳು.

“ ಚೆನ್ನ ಕೆಲಸಕ್ಕೆ ಹೋದವನು ಬರಲಿಲ್ಲ. ಆತ ಬರಲಿ. ಒಂದು ವಾರದಲ್ಲಿ ಎಲ್ಲಿಂದಲಾದರೂ ಎರವು ತಂದು ನಿಮ್ಮ ಬಾಡಿಗೆಯನ್ನು ಸಲ್ಲಿಸುವೆವು. ”

“ ಹೀಗೆ ವಾರಗಳು ಎಂಟು ಉರುಳಿದುವು. ಆದರೆ ಬರಬೇಕಾದ ಹಣ ಮಾತ್ರ ಇಲ್ಲ. ” ಮನೆಯೊಡೆಯನ ಸ್ವರ ತಿರಸ್ಕಾರದಿಂದ ತುಂಬಿತ್ತು. “ ಇನ್ನು ನಾನು ವಾರಗಳನ್ನು ಇದಿರು ನೋಡೆನು. ”

ಬರೀ ಮಾತುಗಳಿಂದಲೇ ಸಾಹುಕಾರ ತೃಪ್ತಿಯನ್ನು ತಳೆಯಲಿಲ್ಲ. ನುಡಿಯನ್ನು ಕೃತಿಯಾಗಿ ರೂಪಾಂತರಗೊಳಿಸುವ ಸಾಹಸ ಅವನದಾಗಿತ್ತು. ಮಾತು ಮುಗಿದೊಡನೆಯೇ ಅವನು ಎರಡು ಕಾಲುಗಳನ್ನೂ ಮನೆಯೊಳಗೆ ಇರಿಸಿದ.

“ ಅಜ್ಜೀ, ಒಂದು ಚೂರು ರೊಟ್ಟಿಯನ್ನು ನಮಗೆ ಕೊಡು. ಹಸಿವು ” ಎಂದು ಅಳುತ್ತಾ ಹಸುಳೆಗಳೆರಡು ಮನೆಯೊಳಗಿನಿಂದ ಓಡಿ ಬಂದುವು. ಸೊರಗಿ ಕಡ್ಡಿಗಳಂತಾದ ಶಿಶುಗಳವು. ಬತ್ತಿದ ಮೊಗಗಳಲ್ಲಿ ರಕ್ತದ ಛಾಯೆ

ಇಲ್ಲ. ಮೈ ಎಲುಬುಗಳನ್ನು ಪ್ರಯಾಸವಿಲ್ಲದೆ ಎಣಿಸಬಹುದು. ಹರಿದು ಚಿಂದಿ ಚಿಂದಿಯಾದ ಅಂಗಿಗಳು ಮೈಗಳನ್ನು ಮುಚ್ಚಿದ್ದುವು.

"ಹಸುಳೆಗಳ ಮೊಗ ನೋಡಿಯಾದರೂ, ನಾಲ್ಕುದಿನ ಬಿಡುವು ಕೊಡಿ ಧನಿಗಳೇ" ಎಂದಳು ಮುದುಕಿ. "ಈ ಮಳೆಗಾಲದಲ್ಲಿ ನೀವು ಮನೆ ಬಿಡಿಸಿದರೆ ನಾವು ಎಲ್ಲಿಗೆ ಹೋಗಬೇಕು ?"

"ಎಲ್ಲಿಗೆ ಬೇಕಾದರೂ ಬಿಜಯಂಗೈಯಿರಿ" ಹಸುಳೆಗಳ ಒಣಕಲು ಮೈಗಳನ್ನು ನೋಡಿಯಾದರೂ ಸಾಹುಕಾರನ ಎದೆ ಮಿದುವಾಗಲಿಲ್ಲ.

ಮುದುಕಿ ಮಾರ್ನುಡಿಯಲಿಲ್ಲ ಅವಳ ಸುಕ್ಕು ಹಿಡಿದ ಕೆನ್ನೆಗಳನ್ನು ಕಂಬನಿಗಳು ತೊಯ್ಸಿದುವು. ಸಾಹುಕಾರ ಮನೆಯೊಳಗೆ ಹೆಜ್ಜೆ ಹಾಕಿದ.

"ಬೇಡ ದನಿಗಳೇ ಬೇಡ. ಮನಸ್ಸನ್ನು ಕಲ್ಲು ಮಾಡದಿರಿ" ಎಂದು ಮುದುಕಿ ಚೀರಿದಳು.

ಆದರೆ ಮುದುಕಿಯ ಕೊರಳಿಂದ ಹೊರಟ ಉದ್ಗಾರ ಸಾಹುಕಾರನ ಎದೆಯನ್ನು ಸೇರಲಿಲ್ಲ. ಆತ ಮನೆಯೊಳಗೆ ನುಗ್ಗಿದ. ಮೂಲೆಯಲ್ಲಿದ್ದ ಹರುಕು ಚಾಪೆ, ಕಂಬಳಿಗಳನ್ನು ಅವನ ಕಣ್ಣುಗಳು ನೋಡಿದುವು. ಆತ ಆ ಹೊಲಸು ಚಾಪೆಗಳನ್ನು ಎತ್ತಿಕೊಂಡ. ಇನ್ನೊಂದು ಅರೆ ಚಣದಲ್ಲಿ ಅವುಗಳನ್ನು ಬೀದಿಗೆ ಎಸೆದುದಾಯಿತು. ಕಂಬಳಿ ಚರಂಡಿಯ ನೀರಿನಲ್ಲಿ ಬಿದ್ದಿತು. ಅದು ನಾಲ್ಕುಮಾರು ದೂರ ತೇಲಿಕೊಂಡು ಹೋಯಿತು. ಸಾಹುಕಾರ ಅನಿತರಿಂದ ತೃಪ್ತಿ ತಳೆಯಲಿಲ್ಲ. ಆತ ಮಡಿಕೆ ಕುಡಿಕೆಗಳಿಗೆ, ಪಾತ್ರೆ ಪದಾರ್ಥಗಳಿಗೆ ಕೈ ಹಚ್ಚಲು ಹವಣಿಸಿದ. ಮುದುಕಿ ಅಸಹಾಯಳಾಗಿ ಗೋಳಾಡುತಿದ್ದಳು. ಹುಡುಗರಿಬ್ಬರೂ ಅಳಲನ್ನು ನಿಲ್ಲಿಸಿ ಸಾಹುಕಾರನ ಎಸಕಗಳನ್ನು ನಿಟ್ಟಿಸುತಿದ್ದರು. ಆ ಬೀದಿಯಲ್ಲಿ ಇಂತಹ ಘಟನೆಗಳು ಸರ್ವ ಸಾಧಾರಣವಾಗಿದ್ದುವು. ಆದುದರಿಂದ ಈ ಸಂಭವಕ್ಕೆ ಯಾರೂ ಹೆಚ್ಚಿನ ಗಮನವನ್ನು ಕೊಡಲಿಲ್ಲ. ಅವರು ತಮ್ಮ ತಮ್ಮ ಕೆಲಸಗಳಲ್ಲಿಯೇ ನಿರತರಾಗಿದ್ದರು.

"ಏಕಜ್ಜೀ ಅಳುತ್ತೀಯೇ ?" ಎಂಬ ಕೊರಳುಲಿ ತಲೆ ತಗ್ಗಿಸಿ, ಮಳೆ ನೀರಲ್ಲಿ ಕಣ್ಣೀರನ್ನು ಬೆರಸುತಿದ್ದ ಮುದುಕಿಯನ್ನು ಎಚ್ಚರಿಸಿತು. ಅವಳು ಮೊಗವೆತ್ತಿ ನೋಡಿದಳು. ಮಾರ್ಗದ ಬದಿಯಲ್ಲಿ ತೆಳ್ಳಗಿನ ಒಬ್ಬ ತರುಣ ನಿಂತಿದ್ದ. ಆತನ ಕೈಯಲ್ಲಿ ಒಂದು ಕೊಡೆ ಇತ್ತು. ಬಿಳಿ ಪಂಚೆ, ಬಿಳಿ

ಶರ್ಟುಗಳು ಅವನ ಮೈಯನ್ನು ಮುಚ್ಚಿದ್ದುವು. ಆತನ ಕಣ್ಣುಗಳಲ್ಲಿ ಮರುಕದ ತಿಳಿಬೆಳಗು ಪ್ರಕಾಶಿಸುತಿದ್ದಿತು. ತರುಣನ ಪ್ರಶ್ನೆಗೆ ಮುದುಕಿ ಮಾರುಲಿಯು ಲಿಲ್ಲ. ಎದೆಯಿಂದ ಹೊಮ್ಮಿದ ಬಿಸಿಯುಸಿರೇ ಅವಳ ಬಗೆಯಿಂದ ಹೊರಟ ನುಡಿಯಾಯಿತು.

"ಏಕಜ್ಜೀ ಅಳುತ್ತಿರುವೆ?" ತರುಣ ಮರಳಿ ಮುದುಕಿಯನ್ನ ಪ್ರಶ್ನಿಸಿದ. "ಏನಾಯಿತು, ಹೇಳು?"

ಅಜ್ಜಿ ಮರಳಿ ತರುಣನನ್ನು ನೋಡಿದಳು. ಮಡಿಯಾದ ಉಡುಪು ಆತನದು. ಈ ಭಾಗದವನು ಆತನಲ್ಲ ಎಂಬುದನ್ನು ಆತನ ಉಡುಪುಗಳೇ ಮುದುಕಿಗೆ ಅರುಹಿದುವು. "ನಮ್ಮ ಗೋಳನ್ನು ಹೇಳಿಕೊಂಡು ಪ್ರಯೋಜನ ವೇನು? ತಾರಗೆಗಳೂ ಚಂದಿರನೂ ಇರುವ ತನಕ ನಮ್ಮ ಗೋಳು ಕೊನೆ ಗೊಳ್ಳದು."

"ಆದರೂ ಹೇಳಜ್ಜಿ." ಮಿದು ನುಡಿಯಲ್ಲಿ ಅಪರಿಚಿತ ಉಸುರಿದ "ಯಾವ ಪರಿಯಲ್ಲಾದರೂ ನಿಮ್ಮ ಸಂಕಟ ಇಲ್ಲವಾಗುತಿದ್ದರೆ ನನ್ನ ನೆರವನ್ನು ಕೊಡುವೆ."

ಮನೆಯೊಳಗೆ ನುಗ್ಗಿದ್ದ ಸಾಹುಕಾರ ಎರಡು ಮಡಕೆಗಳನ್ನು ಕೈಯಲ್ಲಿ ಹಿಡಿದುಕೊಂಡು ಹೊರಗೆ ಬಂದ. ಇನ್ನೊಂದು ಕ್ಷಣದಲ್ಲಿಯೇ ಮಡಿಕೆಗಳು ನೆಲದ ಮೇಲೆ ಬಿದ್ದು ನೂರು ಚೂರಾದುವು. ಮನೆಯೊಳಗೆ ಸಾಹುಕಾರನ ಇರವು, ಮಡಿಕೆಗಳು ಚೂರಾದುದು, ಇವು ಮುದುಕಿಯ ಅಳಲಿನ ಹಿಂದೆ ಹುದುಗಿದ್ದ ಕತೆಯನ್ನು ಅಪರಿಚಿತನಿಗೆ ಅರುಹಿದುವು. ಆತ ಒಂದು ಸಲ ಅಂಗುಟದಿಂದ ಹಿಡಿದು ಮುಡಿಯ ತನಕ ಸಾಹುಕಾರನನ್ನು ದಿಟ್ಟಿಸಿದ. "ಅಜ್ಜೀ, ನೀನು ಮನೆ ಬಾಡಿಗೆ ಕೊಡಲಿಲ್ಲವೇ?" ಎಂಬ ನುಡಿ ಅವನ ಕೊರಳಿಂದ ಹೊರಟಿತು.

"ಇಲ್ಲಪ್ಪ. ಅದಕ್ಕೋಸುಗವೇ ಯಜಮಾನರು ನಮ್ಮನ್ನು ಮನೆಯಿಂದ ಹೊರಡಿಸುತಿದಾರೆ." ಗದ್ಗದ ಸ್ವರದಲ್ಲಿ ಮುದುಕಿ ನುಡಿದಳು.

ಅಪರಿಚಿತನೊಬ್ಬನು ಮುದುಕಿಯ ಇರವಿನಲ್ಲಿ ಆಸಕ್ತಿ ವಹಿಸಿದುದನ್ನು ಕಂಡು ಧನಿಯ ಬಗೆಯಲ್ಲಿ ಕೌತುಕ ಮೂಡಿತು. ಆತ ತನ್ನ ಎಸಕವನ್ನು ಮುಂದುವರಿಸದೆ ಆ ತರುಣನನ್ನೇ ನೋಡಿದ. ತನ್ನ ಗೈಮೆ ಅಕ್ರಮವಾದುದು

ಎಂಬ ನೆನಪು ಆತನಿಗುಂಟಾಯಿತು. ನಾಚಿಕೆಯಿಂದ ಅವನ ಮೊಗ ಕೆಂಪಡರಿತು. ಅಪರಿಚಿತನು ಸಾಹುಕಾರನನ್ನು ಪ್ರಶ್ನಿಸದಿದ್ದರೂ, ಅವನು ತನ್ನ ಕೃತ್ಯವನ್ನು ಸಮರ್ಥಿಸಿಕೊಳ್ಳತೊಡಗಿದ. "ನೋಡಿ ಸ್ವಾಮಿ, ಉಪ ಕಾರದ ನೆನಪಿಲ್ಲದ ಜಾತಿ ಇದು. ಕಳೆದ ಎರಡು ತಿಂಗಳ ಬಾಡಿಗೆ ಸಲ್ಲಿಸಲಿಲ್ಲ. ಅಯ್ಯೋ ಪಾಪ! ಇಂದಲ್ಲದಿದ್ದರೆ ನಾಳೆ ಕೊಟ್ಟಾರು ಎಂದು ನಾನು ಎರಡು ತಿಂಗಳು ತಳ್ಳಿದೆ. ಆದರೆ ಇವರಿಂದ ಒಂದು ದಮ್ಮಡಿಯೂ ಬರುವಂತಿಲ್ಲ. ಎಷ್ಟು ದಿನಗಳನಕ ಕಾದಿರಲಿ? ಕೊನೆಗೆ ಇವರನ್ನು ಮನೆಯಿಂದ ಹೊರಡಿಸ ಬೇಕಾಯಿತು"

"ಈ ಜನರ ಬೆವರು ನೆತ್ತರುಗಳಿಂದ ಬದುಕುವ ಮಂದಿ ನೀವು. ನೀವಾದರೂ ಏನು ಮಾಡೀರಿ?" ತರುಣನ ಕೊರಳಿಂದ ನುಡಿ ಹೊಮ್ಮಿತು. "ನೀವಾದರೂ ದಿನ ಕಳೆಯಬೇಕಲ್ಲವೇ?" ಈ ಅಜ್ಜಿ ನಿಮಗೆ ಎಷ್ಟು ಹಣ ಕೊಡಲಿದೆ?"

"ಎಂಟು ರೂಪಾಯಿಗಳು. ಬೀದಿಯಲ್ಲಿ ಹೋಗುವ ನಿಮಗೇಕೆ ಈ ಪುರಾಣ?" ತುಸ ಬಿರುಸು ಮಾತಿನಲ್ಲಿಯೇ ಸಾಹುಕಾರ ಅಂದ. "ನೀವೇನಾ ದರು ಕೊಡುವಿರಾ?"

"ಆ ಆಲೋಚನೆಯಿಂದಲೇ ಕೇಳಿದೆ." ಗಂಭೀರ ಸ್ವರದಲ್ಲಿ ಅಪರಿಚಿತ ಮಾರ್ನುಡಿದ.

ತನ್ನನ್ನು ಪರಿಹಾಸ ಗೈಯಬೇಕೆಂದೇ ಈತ ಈ ಪರಿ ನುಡಿಯುತ್ತಿರುವ ನೆಂದು ಸಾಹುಕಾರ ಭಾವಿಸಿದ. ಆದರೆ ಅವನ ಎಣಿಕೆ ಹುಸಿಯಾಯಿತು. ತರುಣ ಮಾತೆತ್ತದೆ ತನ್ನ ಶರ್ಟಿನ ಒಳಜೇಬಿಗೆ ಕೈಹಾಕಿದ. ಇನ್ನೊಂದು ಚಣದಲ್ಲಿ ಅವನ ಕೈ ಜೇಬಿನಿಂದ ಪಾಕೀಟನ್ನು ಹೊರತೆಗೆದಿತು. ಅವನು ಅದನ್ನು ಬಿಚ್ಚಿ ಐದು ರೂಪಾಯಿಗಳ ನೋಟು ಒಂದು, ಒಂದು ರೂಪಾಯಿ ಗಳ ನೋಟು ಮೂರು ಹೀಗೆ ಎಂಟು ರೂಪಾಯಿಗಳನ್ನು ಸಾಹುಕಾರನ ಕಡೆಗೆ ಚಾಚಿದ. ಯಜಮಾನನ ಕಣ್ಣುಗಳಲ್ಲಿ ಸೋಜಿಗ ಮತ್ತು ವಿಸ್ಮಯಗಳು ನೆರೆದುವು. ಆ ನೋಟುಗಳನ್ನು ತೆಗೆದು ಅವನು ತನ್ನ ಕಿಸೆಯೊಳಗೆ ಸೇರಿಸಿದ. "ಇದೇನು ನೀವು ಕೊಡುವಿರಿ?" ಎಂದು ಅವನು ತರುಣನನ್ನು ಪ್ರಶ್ನಿಸಿದ.

"ಯಾರೂ ಬಾಡಿಗೆ ಕೊಡದಿದ್ದರೆ ಈ ಅಜ್ಜಿ ಆಗಸದ ನೆರಳನ್ನು

ಆಶ್ರಯಿಸ ಬೇಕಾಗುತಿದ್ದಿತು. ಹೇಗೂ ನಿಮಗೆ ಹಣ ಸಂದಿತಲ್ಲ. ಇನ್ನು ಮುದುಕಿಯನ್ನು ಗೋಳು ಹುಯ್ಯ ಬೇಡಿ. "

ಸಾಹುಕಾರ ಮಾರುಗೊಡಲಿಲ್ಲ. ತನ್ನ ಕೊಡೆಯನ್ನು ಹಿಡಿದು ಆತ ಆ ರಂಗದಿಂದ ಕಾಲ್ದೆಗೆದ.

ತನ್ನ ಇರವಿನ ಬಗ್ಗೆ ಕನಿಕರವನ್ನು ತೋರಿ ನೆರವಿಗೆ ಬಂದ ತರುಣನ ಗೈಮೆ ಮುದುಕಿಯನ್ನು ಅಚ್ಚರಿಯ ಕಡಲಲ್ಲಿ ತೇಲಿಸಿತು. ಹರುಷ ಆಕೆಯ ಎದೆಯಲ್ಲಿ ಉಕ್ಕಿ ಬಂತು. ಸಾಹುಕಾರನು ಹೋದ ಅನಂತರ ಅವಳು ನುಡಿದಳು. " ನಮ್ಮ ಪಾಲಿನ ದೇವರು ನೀನು. ಬೀದಿಯ ಪಾಲಾಗಿ ಮಂದಿಯ ಜಗಲಿಗಳಲ್ಲಿ ದಿನ ಕಳೆಯಬೇಕಾಗಿದ್ದ ಕಂದಗಳನ್ನು ನೀನು ಕಾಪಾಡಿದೆಯಪ್ಪ "

" ಈ ಹೊಗಳಿಕೆ ಬೇಡ ಅಜ್ಜಿ. ಅದೇಕೆ ಎರಡು ತಿಂಗಳಿಂದ ಸಾಹುಕಾರನಿಗೆ ನೀನು ಬಾಡಿಗೆ ಕೊಡಲಿಲ್ಲ.

" ನನ್ನ ಚಿಂತೆಯನ್ನು ಏನೆಂದು ಹೇಳಲಪ್ಪ. ನಾನು ನನ್ಮಗ, ಸೊಸೆ ಎರಡು ಗಂಡು ಕೂಸುಗಳು ಹಸನಾಗಿ ಬಾಳುತಿದ್ದೆವು. " ಮುದುಕಿ ತನ್ನ ದುಃಖದ ಹೊತ್ತುಗೆಯನ್ನು ಬಿಚ್ಚಿದಳು. " ಎರಡು ತಿಂಗಳ ಹಿಂದೆ ಮಗನಿಗೂ ಸೊಸೆಗೂ ಸನ್ನಿ ಹಿಡಿಯಿತು. ದುಡಿದು ತಂದು ನಮ್ಮನ್ನೆಲ್ಲಾ ಸಾಕುತಿದ್ದ ಮಗ ಕಾಯ್ಲೆ ಹಿಡಿದು ಮಲಗಿದ. ಅರುವತ್ತು ವರುಷದ ಮುದುಕಿ ಕೂಲಿ ನಾಲಿ ಮಾಡಿ ಈ ಹೈಕಳನ್ನು ಸಾಕಬೇಕಾಗಿ ಬಂತು. ಆ ಸೊಸೆ ಮಾರಾಯ ಗಿತ್ತಿ ಹಾಸಿಗೆ ಹಿಡಿದು ಮಲಗಿದವಳು ಏಳಲೇ ಇಲ್ಲ. ಅವಳು ನೆಟ್ಟಗೆ ದೈವದ ತಾವು ಹೊರಟು ಹೋದಳು. ಮಗ ಕಾಯ್ಲೆ ವಾಸಿಯಾಗಿ ಆಸ್ಪತ್ರೆಯಿಂದ ಬಂದು ಇನ್ನೂ ಹತ್ತು ದಿನ ಆಗಿಲ್ಲ. ಸಂಪಾದನೆ ಇಲ್ಲದೆ ಎರಡು ತಿಂಗಳು ಬಾಡಿಗೆ ಹಾಗೇ ನಿಂತಿತು. ಯಜಮಾನ ಮಾರಾಯನಿಗೆ ಒಂದು ತಿಂಗಳು ವಾಯಿದೆ ಹೇಳಿದೆ. ಆದರೆ ಅವ್ನಗೆ ವಯಬರಲಿಲ್ಲ. ನಮ್ಮನ್ನು ಮನೆಯಿಂದ ಹೊರಡಿಸೋಕೆ ಹೊಂಟಿದ್ದ. ಅಷ್ಟರಲ್ಲಿ ನೀನು ಬಂದು ಕಾಪಾಡಿದೆ. "

" ನಿನ್ನ ಮಗನಿಗೆ ಕೆಲಸವೇನು ? " ತರುಣ ಮಾತನ್ನು ಬೇರೆ ಕಡೆಗೆ ತಿರುಗಿಸಿದ.

" ಏನು ಕೆಲಸ ? ಜೀತ ಮಾಡುವುದು. " ಮುದುಕಿ ನುಡಿದಳು.

"ಅವ ಮರ ಸಿಗಿವ ಕಾರ್ಖಾನೇಲಿ ದುಡಿತಾನೆ. ತಿಂಗಳಿಗೆ ಹದಿನೈದು ರೂಪಾಯಿ ಬರುತವೆ. ಕಾಯ್ಲೆ ಆಗಿ ಆಸ್ಪತ್ರೆಲಿ ಮಲಗಿದ್ದರಿಂದ ಎರಡು ತಿಂಗಳ ಸಂಬಳಾನೂ ಇಲ್ಲ."

"ಹದಿನೈದು ರೂಪಾಯಿ. ನಾಲ್ಕು ಒಡಲುಗಳು!" ಎಂದು ತರುಣ ಮನಸ್ಸಿನಲ್ಲಿಯೇ ಹೇಳಿಕೊಂಡ. ಅವನ ಕೈ ಶರ್ಟಿನ ಜೇಬಿಗೆ ಸರಿದಿತು. ಅವನು ಪಾಕೀಟಿನಿಂದ ಹತ್ತು ರೂಪಾಯಿಗಳ ಎರಡು ನೋಟುಗಳನ್ನು ಹೊರ ತೆಗೆದ; ಅವುಗಳನ್ನು ಮುದುಕಿಯ ಕೈಮೇಲೆ ಇರಿಸಿದ. ಕೃತಜ್ಞತೆ ಅವಳ ಕಣ್ಣುಗಳಲ್ಲಿ ಉಕ್ಕಿ ಬಂತು. ಎರಡು ಕೈಗಳನ್ನೂ ಚಾಚಿ ಅವಳು ಆ ನೋಟುಗಳನ್ನು ತೆಗೆದುಕೊಂಡಳು. "ಅಜ್ಜೀ, ನಾಲ್ಕು ದಿನ ಈ ಬಡಕಲು ಕೂಸುಗಳು ಹೊಟ್ಟೆ ತುಂಬಾ ಉಣಲಿ" ಎಂದು ಅವನು ಉಸುರಿದ.

"ನಮ್ಮ ಪಾಲಿಗೆ ನೀನು ದೇವರಂತೆ ಬಂದು ಕಾಪಾಡಿದೆ."

"ಆ ಮಾತು ಬೇಡ." ಎಂದ ತರುಣ.

"ನಮಗೆ ಈಸು ಉಪಕಾರ ಗೈದ ನೀನು ಯಾರಣ್ಣ?" ಮುದುಕಿ ಅಪರಿಚಿತನಾದ ಉಪಕಾರಿಯ ಪರಿಚಯವನ್ನು ಅರಿವ ಕುತೂಹಲವನ್ನು ತೋರ್ಪಡಿಸಿದಳು.

"ನಾನು ಯಾರು! ಬೆಂದ ಎದೆಗಳ ನೋಟವನ್ನು ಕಳೆಯಲು ಯತ್ನಿಸುತಿಹ ಒಬ್ಬ ಮನುಷ್ಯ."

"ನಿನ್ನ ಹೆಸರನ್ನಾದರೂ ತಿಳಿಸಬಾರದ?"

"ನನ್ನ ಹೆಸರು ವೇಣು. ಬರುತೇನಜ್ಜಿ."

ವೇಣು ಅಲ್ಲಿ ಹೆಚ್ಚು ಸಮಯ ನಿಲ್ಲಲಿಲ್ಲ. ಅವನ ಕಾಲುಗಳು ಹಾದಿಯನ್ನು ಹಿಡಿದುವು.

## ( ೮ )

ಬಾಳುವೆಯ ಹೆದ್ದಾರಿಯನ್ನು ಹಿಡಿದು ಮಾಸ್ತರರ ಸಂಸಾರದ ತೇರು ಮುಂದೆ ಸಾಗುತಿದ್ದಿತು. ಹಳ್ಳ ತಿಟ್ಟದ ಹಾದಿ ಬಂದಾಗ, ಕಾಣದ ಕೈ ತೇರಿನ ಗಾಲಿಗಳನ್ನು ಹಿಡಿದೆತ್ತಿ ನೆರವಾಗುತಿದ್ದಿತು. ಈ ಹೊರಗಿನ ಸಹಾಯದಿಂದ ಮಾಸ್ತರರ ಹೆಗಲ ಮೇಲಿನ ಹೊರೆ ಬಹು ಹಗುರವೆನಿಸುತಿದ್ದಿತು. ಆದರೆ

ಈ ಕಾಣದ ಕೈ ಆರದು ಎಂಬುದು ಮಾಸ್ತರರಿಗೆ ಬಿಡಿಸಲಾಗದ ಒಂದು ಒಗಟು. ಈ ಸಮಸ್ಯೆಯನ್ನು ಕುರಿತು ಅವರು ಹಲವು ಸಲ ಸೀತಮ್ಮನ ಸಂಗಡ ಚರ್ಚಿಸಿದ್ದರು. ಆದರೆ ಈ ಚರ್ಚೆಗಳು ಕಾಣದ ಕೈಯನ್ನು ಕಂಡು ಹಿಡಿವುದರಲ್ಲಿ ಪರ್ಯಾವಸಾನಗೊಳ್ಳುತ್ತಿರಲಿಲ್ಲ ಈ ನೆರವುಗ್ಗೆ ವೇಣುವಿನದು ಎಂದು ಸೀತಮ್ಮನ ಅನಿಸಿಕೆ. ಆದರೆ ಈ ಅಭಿಪ್ರಾಯವನ್ನು ಮಾಸ್ತರರು ಒಪ್ಪುತ್ತಿರಲಿಲ್ಲ. ವೇಣುವಿನ ಹಣಕಾಸಿನ ಸ್ಥಿತಿಯನ್ನು ಆಲೋಚಿಸದೆ ಗೈದ ಊಹೆ ಇದು. ಆತನಾಗಿದ್ದರೆ, ಅಂದು ಪ್ರಶ್ನಿಸಿದಾಗ ಅವನು ಹೇಳುತ್ತಿದ್ದ ಎಂದು ಮಾಸ್ತರರ ವಾದ. ಆದರೆ ತಮಗೆ ಅಡಚಣೆಗಳು ಒದಗಿದ ಸಂದರ್ಭಗಳಲ್ಲೆಲ್ಲಾ ಈ ನೆರವುಗ್ಗೆ ಮಾಸ್ತರರ ಹೆಗಲ ಮೇಲಿನ ಹೊರೆಯನ್ನು ಇಳಿಸಲು ಸಿದ್ಧವಾಗಿರುತಿತ್ತೆಂಬುದನ್ನು ಅವರಿಬ್ಬರೂ ಅರಿತಿದ್ದರು.

ಅಂದು ನಡುಹೊತ್ತಿನಲ್ಲಿ ಊಟಕ್ಕೋಸುಗ ಶಾಲೆಯಿಂದ ಮಾಸ್ತರರು ಮನೆಗೆ ಬಂದರು ಮಡದಿ ಸೀತಮ್ಮ ತಂಬಿಗೆಯಲ್ಲಿ ನೀರು ತಂದು ಮಾಸ್ತರರ ಮುಂದಿರಿಸಿದಳು.

"ನೋಡು, ಈ ದಿನ ಉಪಕಾರಿ ನಮ್ಮ ಕಡೆಗೆ ಕೈ ಚಾಚಿದ" ಮಾಸ್ತರರು ಜೇಬಿನಿಂದ ಲಕ್ಕೋಟೆಯನ್ನು ತೆಗೆದು ನಲ್ಲೆಯ ಕಡೆಗೆ ಚಾಚಿದರು. ಸೀತಮ್ಮ ಅದನ್ನು ಸ್ವೀಕರಿಸಿ ಒಳಗೆ ಬೆರಳು ಹಾಕಿದಳು. ಹತ್ತು ರೂಪಾಯಿಗಳ ಐದು ನೋಟುಗಳು ಹೊರಬಂದುವು. ಆ ನೋಟುಗಳನ್ನು ಕಾಣಲು ಆಕೆಯ ತುಟಿಗಳ ಮೇಲೆ ಎಳೆನಗೆಯ ತಂಬೆಲರು ಸುಳಿದಿತು. "ಈ ದಿನ ಬಂತೇ ಈ ಹಣ?" ಆಕೆ ಪತಿಯ ಮೊಗವನ್ನು ನೋಡಿದಳು.

"ಅಹುದು. ಇಂದು ಬೆಳಿಗ್ಗೆ ಅದು ದೊರೆತಿತು." ನೀರು ತಂಬಿಗೆಯನ್ನು ತೆಗೆದುಕೊಳ್ಳುತ್ತಾ ಮಾಸ್ತರರಂದರು. "ಸೀತಾ, ಇದೊಂದೂ ನನಗೆ ಅರ್ಥವಾಗುವುದಿಲ್ಲ. ನನಗೆ ಪರಿಚಯವಿಲ್ಲದ ಈ ಮನುಷ್ಯ ಈ ರೀತಿ ಉಪಕಾರ ಮಾಡಿ ತನ್ನ ಹಣವನ್ನೇಕೆ ಕಳಕೊಳ್ಳಬೇಕು?"

"ನಮ್ಮ ಇರವನ್ನು ಕಂಡು ಕನಿಕರಗೊಂಡ ಮನುಷ್ಯ. ಪರರಿಗೆ ನೆರವಾಗಬೇಕೆಂಬ ಉದ್ದೇಶದಿಂದ ಉಪಕಾರ ಮಾಡುತಾನೆ."

"ಪರೋಪಕಾರ, ಇದು ಜಳ್ಳುಮಾತು. ಈ ಕಾಲದಲ್ಲಿ ಸಮುದ್ರದಲ್ಲಿ ಇರುವ ಮೀನುಗಳ ಸ್ಥಿತಿ ನಮ್ಮದು." ಮಾಸ್ತರರು ನುಡಿದರು. "ದಾನಶೂರ

ಕರ್ಣ, ಶಿಬಿ, ಬಲಿ ಇವರ ಕತೆಗಳೆಲ್ಲಾ ಪುರಾಣಗಳಲ್ಲಾದುವು. ಈ ನೆರವು ಗೈ ಚಾಚುವುದರಲ್ಲಿ ಆ ಮನುಷ್ಯನಿಗೆ ಯಾವುದೋ ಒಂದು ಉದ್ದೇಶ ಇರಬೇಕು."

"ಪರೋಪಕಾರವಲ್ಲದೆ ಬೇರೆ ಉದ್ದೇಶವೇನು ?" ಸೀತಮ್ಮ ನಡುವೆ ಬಾಯಿ ಹಾಕಿದಳು.

"ಅದನ್ನು ನಾವು ತಿಳಿಯೆವು." ಮಾಸ್ತರರು ಕಾಲು ತೊಳೆದು ಕೊಂಡು ಬಂದಿದ್ದರು. "ಆದರೂ ಕಾಣದ ಕೈ ಒಂದು ಬಲೆಯನ್ನು ನಮ್ಮ ಸುತ್ತಲೂ ಹರಡುತ್ತಲಿದೆ ಸೀತಾ, ನಾನು ಬಹಳವಾಗಿ ಆಲೋಚಿಸುತಿದೇನೆ. ಈ ಸಹಾಯ ಧನವನ್ನು ಬಿಡುವುದು ಲೇಸು ಈ ರೀತಿ ಪರರು ಚಾಚಿದ ಕೈಗೆ ಆಸೆ ಪಡುವುದು ನಮ್ಮ ಅಭಿಮಾನಕ್ಕೆ ಕುಂದು."

"ನಮಗೆ ಸಹಾಯ ಮಾಡಿ ಎಂದು ಯಾರನ್ನೂ ನಾವು ಬೇಡಲಿಲ್ಲ. ಪರರು ನಮ್ಮ ಕಡೆಗೆ ಕೈಯನ್ನು ಚಾಚಿದಾಗ, ನಾವೇಕೆ ಸಹಾಯವನ್ನು ಪಡೆಯಬಾರದು ?"

"ಸೀತಾ, ನಾನು ಗಂಡಸು. ದುಡಿದು ಸಂಪಾದಿಸಿ ಹೆಂಡತಿ ಮಕ್ಕಳನ್ನು ಸಾಕಿ ಸಲಹಬೇಕಾದುದು ನನ್ನ ಹೊಣೆ. ಅದನ್ನು ಬಿಟ್ಟು ಪರರ ಕೈಯ ರೊಟ್ಟಿ ಚೂರಿಗೆ ಬಾಯಿ ಬಿಡುತಿದೇನೆ." ಮಾಸ್ತರರ ನುಡಿಗಳಲ್ಲಿ ಅವರ ಅಭಿಮಾನಕ್ಕೆ ತಗಲಿದ ನೋವು ಅಡಕವಾಗಿತ್ತು.

"ನೀವು ದುಡಿಯುತಲಿಲ್ಲವೇ ? ಸಂಪಾದಿಸುತಲಿಲ್ಲವೇ ?" ಸೀತಮ್ಮ ಮಾಸ್ತರರ ಮೊಗವನ್ನು ನೋಡಿದಳು.

"ನಿಜ. ಗಾಣದ ಎತ್ತಿನಂತೆ ದುಡಿಯುತಿದೇನೆ. ಆದರೆ ಈ ದುಡಿತ ದಿಂದ ನಮ್ಮ ಕೊರತೆಗಳು ನೀಗಿದುವೇ ?"

ಸೀತಮ್ಮ ಮಾತಾಡಲಿಲ್ಲ. ಮಾಸ್ತರರಿಗೆ ಉಣ ಬಡಿಸಲು ಒಳತೆರಳಿ ದಳು. ಮಾಸ್ತರರೂ ಆಕೆಯನ್ನು ಹಿಂಬಾಲಿಸಿದರು.

× × × ×

ಆ ದಿನ ಸಾಯಂಕಾಲ ಸೀತಮ್ಮ ಮಕ್ಕಳ ಹರಿದ ಅಂಗಿಗಳನ್ನು ತೆಗೆದು ಹೊಲಿಗೆ ಹಾಕುತ್ತಾ ಕುಳಿತಿದ್ದಳು. ಆಕೆಯ ಬೆರಳುಗಳು ನೂಲು ಪೋಣಿಸಿದ ಸೂಜಿಯನ್ನು ಹಿಡಿದಿದ್ದುವು; ಹರಿದ ಅಂಗಿಗೆ ಹೊಲಿಗೆಯನ್ನು ಹಾಕುತಿದ್ದುವು.

ಮಾಸ್ತರರು ಮನೆಯಲ್ಲಿರಲಿಲ್ಲ. ಮನೆಗೆ ಅಗತ್ಯವೆನಿಸಿದ ಸಾಮಾನುಗಳನ್ನು ತರಲೋಸುಗ ಅವರು ಪೇಟೆಗೆ ತೆರಳಿದ್ದರು. ಹುಡುಗರಿಬ್ಬರೂ ಬೀದಿಯಲ್ಲಿ ಆಡುವುದರಲ್ಲಿ ಮಗ್ನರಾಗಿದ್ದರು. ಮನೆಯಲ್ಲಿ ಬೇರಿನ್ನಾವ ಕಜ್ಜವೂ ಸೀತಮ್ಮನನ್ನು ಕಾಯುತ್ತಾ ಕುಳಿತಿರಲಿಲ್ಲ. ಆದುದರಿಂದ ಆಕೆ ಹೊಲಿಗೆ ಹಾಕಲು ಕುಳಿತಿದ್ದಳು.

ಸೀತಮ್ಮನ ಚಿತ್ತ ಆ ದಿನ ಪತಿಯೊಡನೆ ನಡೆದ ಸಂಭಾಷಣೆಯನ್ನು ಮೆಲುಕು ಹಾಕುತಿದ್ದಿತು. ತಮ್ಮ ಬಡತನದ ಸಂಸಾರವನ್ನು ಆಕೆ ನೆನೆದಳು. ಯುದ್ಧ ಕಾಲದಲ್ಲಿ ತಾವು ಸತಿಪತಿಯರಿಬ್ಬರೂ ಒಪ್ಪತ್ತುಂಡು ಕಳೆದ ದಿನಗಳು ಆಕೆಯ ಕಣ್ಣು ಮುಂದೆ ಬಂದು ನಿಂದುವು. ಬಿರುಗಾಳಿಗೆ ಸಿಲುಕಿ ಆ ಸಂಸಾರ ನೌಕೆ ಒಡೆದು ನುಚ್ಚು ನೂರಾಗುವುದರಲ್ಲಿತ್ತು. ಆಗ ದೈವಕ್ಕೆ ಕರುಣೆದೋರಿ ಕಾಣದ ಕೈಯನ್ನು ತಮ್ಮ ನೆರವಿಗೆ ಕಳುಹಿಸಿತು; ತಮ್ಮ ಸಂಕಟಗಳೆಂಬ ಕಸವನ್ನು ಅದು ಉಡುಗಿತು.

ಆದರೆ ಆ ಕೈ ಯಾರದು! ತಮಗೆ ಸಹಾಯವನ್ನು ನೀಡುತಿಹ ಆ ಅರಿಯದ ವ್ಯಕ್ತಿ ಯಾರು. ಈ ಪ್ರಶ್ನೆಗಳು ಸೀತಮ್ಮನ ಚಿತ್ತದಲ್ಲಿ ಸುಳಿದುವು. ಆತ ತಮ್ಮ ಇರವಿನ ಬಗ್ಗೆ ಏಕೆ ಕನಿಕರವನ್ನು ತೋರಿಸಬೇಕು? ಆತ ನೆರೆ ಮನೆಯ ವೇಣುವಾಗಿರಬಹುದೇ? ಆದರೆ ಆತನೇನೂ ಸಿರಿವಂತನಲ್ಲ. ಏಜೆಂಟು ಕೆಲಸವನ್ನು ಮಾಡಿ ದಿನ ಕಳೆಯುವವನಾತ. ಇನಿತು ಹಣವನ್ನು ಪ್ರತಿ ತಿಂಗಳೂ ಕಳುಹಲು ಆತನಿಗೆ ಶಕ್ಯವೇ? ಆತನದಲ್ಲದಿದ್ದರೆ ಬೇರಿನ್ನಾರ ಗೈಮೆ ಇದು?

ಹೀಗೆ ಹತ್ತಾರು ಆಲೋಚನೆಯ ತರಂಗಗಳು ಅವಳ ಚಿತ್ತದಲ್ಲಿ ಏಳುತಿದ್ದವು

"ಅಮ್ಮಾ ಮಾವ ಬಂದ, ಮಾವ" ಹುಡುಗ ರಾಮುವಿನ ಕೊರಳುಲಿ ಆಲೋಚನೆಯ ಬಾಂದಳದಲ್ಲಿ ರೆಕ್ಕೆಗಳನ್ನು ಅಗಲ್ಚಿ ಹಾರುತಿದ್ದ ಜೀವವನ್ನು ಇಳೆಗೆ ಎಳತಂದಿತು ಜಗಲಿಯ ಕಡೆಗೆ ಆಕೆಯ ನೋಟ ಹೊರಳಿತು. ಜಗಲಿಯಲ್ಲಿ ವೇಣು ನಿಂತಿದ್ದ. ಅವನ ಕೈಯನ್ನು ಹಿಡಿದು ರಾಮು ಜಗ್ಗುತಿದ್ದ.

"ಮಾವ, ನೀನು ಪೇಟೆಯಿಂದ ನಮಗೇನು ತಿಂಡಿಗಳನ್ನು ತಂದಿದ್ದಿ?" ರಾಮು ವೇಣುವಿನ ಕೈಹಿಡಿದೆಳೆಯುತ್ತಾ ಪ್ರಶ್ನಿಸಿದ. "ಎರಡು ಮೂರು

ದಿನಗಳಿಂದ ನಿನ್ನನ್ನು ಕಾಣುವುದೇ ಇಲ್ಲ. ಬೆಳಕು ಹರಿವ ಮುನ್ನ ಹೊರಟು ಹೋಗುತ್ತೀ ಇರುಳಾದ ಮೇಲೆ ಮನೆಗೆ ಬರುತ್ತೀ.''

''ಕೈ ತುಂಬಾ ಕೆಲಸಗಳು ಬಿಡುವು ದೊರೆವುದೇ ಇಲ್ಲ ಮಗು.''

"ಆದಿರಲಿ ನಮಗೇನು ತಂದಿದ್ದೀ." ದಾಮು ದಿಟ್ಟತನದಿಂದ ಮಾವನ ಜೇಬಿಗೆ ಕೈಹಾಕಲು ಹವಣಿಸಿದ.

"ದಾಮು, ಮಾವನನ್ನು ಹಾಗೆಲ್ಲ ಪೀಡಿಸಬಾರದಪ್ಪ" ಸೀತಮ್ಮ ಹುಡುಗನಿಗೆ ಬುದ್ಧಿ ಹೇಳಿದಳು.

ಸೀತಮ್ಮ ಎದ್ದು ಹೋಗಿ ಒಂದು ಚಾಪೆಯನ್ನು ತಂದು ಹಾಕಿದಳು. ವೇಣು ಚಾಪೆಯ ಮೇಲೆ ಕುಳಿತ. ಅವನ ಕೈ ಕೋಟಿನ ಜೇಬುಗಳೊಳಗೆ ತೆರಳಿದುವು. ಅಲ್ಲಿಂದ ಎರಡು ಪೊಟ್ಟಣಗಳನ್ನು ಆವನು ಹೊರತೆಗೆದ. ದಾಮು ಮಾವನ ಈ ಎಸಕವನ್ನು ಎವೆ ಮುಚ್ಚದೆ ನಿಟ್ಟಿಸುತಿದ್ದ. "ಏನು ಮಾವ ಅದು ?''

"ನೀನು ಯಾವುದಕ್ಕೋಸುಗ ಹಾರೈಸುತಿದ್ದಿಯೋ ಅದೇ ಇದು." ಎಂದು ಹೇಳಿದ ವೇಣು. ಎರಡು ಪೊಟ್ಟಣಗಳನ್ನು ತೆಗೆದು ಅವನು ಬಾಲಕನ ಕೈ ಮೇಲಿರಿಸಿದ.

ಹುಡುಗ ಪೊಟ್ಟಣಗಳನ್ನು ಬಿಚ್ಚಿನೋಡಿದ. ಒಂದರಲ್ಲಿ ದ್ರಾಕ್ಷೆ ಮತ್ತು ಅಂಜೂರದ ಹಣ್ಣುಗಳಿದ್ದುವು. ಇನ್ನೊಂದರಲ್ಲಿ ಬಿಸ್ಕೇಟುಗಳಿದ್ದುವು. ತಿನಸುಗಳನ್ನು ಕಾಣಲು ಹುಡುಗನ ಕಣ್ಣುಗಳು ಅರಳಿದ ಮಲ್ಲಿಗೆಯಲರುಗಳಾದುವು.

"ನೀನೊಬ್ಬನೇ ತಿನುವುದು ಬೇಡ. ರಾಮುಗೂ ಕೊಡು." ಎಂದಳು ತಾಯಿ. "ಕೊಡುವೆನಮ್ಮ" ಹುಡುಗ ಉಸುರಿದ. "ಅಣ್ಣನಿಗೆ ಕೊಡದೆ ಎಂದಾದರೂ ನಾನೊಬ್ಬನೆಯೇ ತಿಂದಿರುವೆನೇ ?"

ದಾಮು ಪೊಟ್ಟಣಗಳೆರಡನ್ನೂ ಕೈಯಲ್ಲಿ ಹಿಡಿದುಕೊಂಡು ಅಣ್ಣನ ಹತ್ತಿರಕ್ಕೆ ಓಡಿದ.

"ಏನಕ್ಕ, ತುಂಬಾ ಆಲೋಚನೆಯಲ್ಲಿರುವ ಹಾಗೆ ಕಾಣುತ್ತದೆ." ವೇಣು ತುಟಿಗಳನ್ನು ಬಿಚ್ಚಿದ. "ಇಲ್ಲಿ ನನ್ನ ಕೆಲಸಗಳೆಲ್ಲಾ ಮುಗಿದುವು. ಇನ್ನು ಎರಡು ದಿನಗಳಲ್ಲಿ ಊರನ್ನು ಬಿಡುವೆನು."

''ನೀವಿಲ್ಲದಿದ್ದರೆ ನಮಗೆಲ್ಲ ಬಹು ಬೇಸರವೆನಿಸುವುದು. ನಿಮ್ಮನ್ನು

ಕಂಡರೆ ಹುಡುಗರು ಮಾವ, ಮಾವ ಎಂದು ಕುಣಿದಾಡುತಾರೆ. ನೀವು ಅಗಲಿದರೆ ಅವರು ಕರಕರೆ ಪಡದಿರರು. ನಿಮಗೆ ಕಾಫಿಯಾಯಿತೇ ? "

" ಇಲ್ಲಕ್ಕ. ನಾನು ಹೋಟೆಲಿಗೆ ಹೋಗಿ ಕಾಫಿ ಕುಡಿದು ಬರಬೇಕು. "

" ಹೋಟೆಲಿಗೆ ಹೋಗುವುದೇಕೆ ? ಇಲ್ಲಿಯೇ ಕುಡಿಯಿರಿ. "

" ಅಕ್ಕ. ನನ್ನಿಂದ ಯಾವಾಗಲೂ ನಿಮಗೆ ತೊಂದರೆ. " ಎಂಬ ಉದ್ಗಾರ ಹೊರಟಿತು ವೇಣುವಿನ ಕೊರಳಿಂದ.

ಸೀತಮ್ಮ ವೇಣುವಿನ ನುಡಿಯನ್ನು ಕಿವಿಗೆ ಹಾಕಿಕೊಳ್ಳದೆ ಒಳಮನೆಗೆ ತೆರಳಿದಳು. ಮರಳಿ ಬಂದಾಗ ಆಕೆಯ ಕೈಗಳಲ್ಲಿ ಕಾಫಿ ಲೋಟ, ಒಂದು ತಟ್ಟೆಯಲ್ಲಿ ದೋಸೆ ಚಟ್ನಿಗಳಿದ್ದುವು. ಅವುಗಳನ್ನು ಆಕೆ ವೇಣುವಿನ ಮುಂದೆ ಇರಿಸಿದಳು. ವೇಣು ಕಾಫಿಯನ್ನು ಕುಡಿದು ತನ್ನ ತೃಷೆಯನ್ನು ಇಲ್ಲವಾಗಿಸ ತೊಡಗಿದ. ನಾಲಗೆ ದೋಸೆ ಚಟ್ನಿಗಳ ಸವಿ ನೋಡಿತು.

" ನಿಮ್ಮೊಡನೆ ಒಂದು ಪ್ರಸ್ತಾಪವನ್ನು ಎತ್ತಬೇಕೆಂದಿದ್ದೇನೆ. " ತನ್ನ ಬಗೆಯನ್ನು ಕಲಕುತಿದ್ದ ವಿಷಯವನ್ನು ವೇಣುವಿನೊಡನೆ ಉಸುರಲು ಮುನ್ನುಡಿ ಹಾಕಿದಳು.

"ಅಕ್ಕ, ಯಾವ ಸಂಗತಿಯನ್ನು ಬೇಕಾದರೂ ನನ್ನೊಡನೆ ಸಂಕೋಚ ವಿಲ್ಲದೆ ಮಾತಾಡಬಹುದು. "

" ನೋಡಿ, ನಮ್ಮ ಸಂಸಾರದ ಇರವನ್ನು ನೀವೇ ಬಲ್ಲಿರಿ. " ಸೀತಮ್ಮ ನುಡಿದಳು. " ಅವರಿಗೆ ಮಾಸ್ತರಿಕೆಯಿಂದ ಬರುವ ತಿಂಗಳಿಗೆ ಮೂವತ್ತು ರೂಪಾಯಿ. ಈ ಸಂಪಾದನೆಯಿಂದ ಮನೆ ಬಾಡಿಗೆ, ಉರುವಲು, ನಾಲ್ಕು ಜೀವಗಳ ಹೊಟ್ಟೆ ಪಾಡು, ಇವೆಲ್ಲಾ ಕಳೆಯಬೇಕು. ಈ ದಿನಗಳಲ್ಲಿ ಹೇಗೆ ಸಾಧ್ಯ ? ಸಾಲ ಹನುಮಂತನ ಬಾಲದಂತೆ ಬೆಳೆಯತೊಡಗಿತು. "

" ತುಂಬಾ ಕಷ್ಟದ ದಿನಗಳಿವು ಅಕ್ಕ. ಉದ್ಯೋಗಮಾಡಿ ಜೀವಿಸುವವರ ಬಾಳು ಒಂದು ಮಹಾಯಜ್ಞವಾಗಿದೆ. " ಕನಿಕರ ತುಂಬಿದ ಸ್ವರ ವೇಣುವಿನ ಕೊರಳಿಂದ ಹೊರಟಿತು.

" ಅದಲ್ಲ ನೋಡಿ. " ಸೀತಮ್ಮನ ನುಡಿಗಳು ಮುಂದುವರಿದುವು. " ಇಂದೋ ನಾಳೆಯೋ ಎಂದು ನಮ್ಮ ಸಂಸಾರದ ದೋಣಿ ಬಿರುಗಾಳಿಗೆ ಸಿಲುಕಿ

ಮುಳುಗಿ ಹೋಗುವುದರಲ್ಲಿತ್ತು. ಆದರೆ ಕಾಣದ ಕೈ ಒಂದು ನಮ್ಮನ್ನು ಕಾಪಾಡಿತು."

"ಕಾಣದ ಕೈ!" ವಿಸ್ಮಯದ ಕಣಗಳು ವೇಣುವಿನ ಕಣ್ಣುಗಳಲ್ಲಿ ತೇಲಿದುವು.

"ಅಹುದು. ಆ ವ್ಯಕ್ತಿ ಯಾರೆಂಬುದು ನಮಗೆ ತಿಳಿಯದು. ಹಿಂದೊಂದು ಸಲ ಮಾಸ್ತರರು ಈ ಸಂಗತಿಯನ್ನು ನಿಮ್ಮ ಸಂಗಡ ಹೇಳಿದ್ದರು ಆದರೆ ನೀವು ಅಲ್ಲಗಳೆದಿರಿ ಅದನ್ನು. ಆದರೂ ನನ್ನ ಸಂದೇಹ ನಿವಾರಣೆಯಾಗ ಲೊಲ್ಲದು. ಯಾರೋ ಅಪರಿಚಿತ ವ್ಯಕ್ತಿ ಪ್ರತಿ ತಿಂಗಳು ಲಕ್ಕೋಟೆಯ ಮೂಲಕ, ಅರವತ್ತು, ಐವತ್ತು ರೂಪಾಯಿಗಳನ್ನು ನಮಗೆ ಕಳುಹುತಿದಾನೆ. ಆತನು ಯಾರು? ನಮ್ಮ ಬಾಳುವೆಯಲ್ಲಿ ಇಸಿತು ಕನಿಕರವೇಕೆ ಎಂಬ ವಿಚಾರ ನನ್ನ ಮೆದುಳನ್ನು ತಿನ್ನುತಿದೆ. ನಮ್ಮ ಬಾಳುವೆಯಲ್ಲಿ ತುಸ ಮರುಕ ವನ್ನು ಬೀರಿದವರೆಂದರೆ ನೀವೇ ಸರಿ. ಎಷ್ಟೋ ಸಲ ನನ್ನ ಜೀವ ನುಡಿದಿವೆ ಈ ಗೈಮೆ ನಿಮ್ಮದೆಂದು. ನನ್ನಿಂದ ಮುಚ್ಚುಮರೆ ಮಾಡಬೇಡಿ. ನೆರವುಗೈ ಚಾಚಿದವರು ನೀವೇ ಆಗಿದ್ದರೆ ಅದನ್ನು ತಿಳಿಸಿ."

ವೇಣು ತಕ್ಷಣವೇ ಮಾರು ಕೊಡಲಿಲ್ಲ. ಸೀತಮ್ಮನ ಮೊಗವನ್ನೇ ಒಂದು ಚಣ ದಿಟ್ಟಿಸಿ ನೋಡಿ ಅನಂತರ ನುಡಿದ. "ಇಲ್ಲಕ್ಕ, ನಿಮ್ಮ ಬಾಳುವೆ ಯಲ್ಲಿ ತುಸ ಸ್ನೇಹ ಸಹಾನುಭೂತಿಗಳನ್ನು ತೋರಿಸಿದೇನೆಂಬುದು ನಿಜ. ಆದರೆ ಈ ನೆರವು ಗೈಯನ್ನು ಚಾಚಿದವನು ನಾನಲ್ಲ ನಾನೊಬ್ಬ ಟ್ರಾವಲಿಂಗು ಏಜೆಂಟ. ತಿಂಗಳಿಗೆ ಐವತ್ತು ಅರುವತ್ತು ರೂಪಾಯಿಗಳನ್ನು ದಾನಮಾಡುವ ಚೈತನ್ಯ ನನಗೆಲ್ಲಿದೆ? ಯಾರೋ ಸಿರಿವಂತರು ನಿಮ್ಮ ಬಡತನದ ಬಾಳುವೆ ಯನ್ನು ನೋಡಿ ಕನಿಕರಗೊಂಡಿದಾರೆ."

ಈ ಸಂಭಾಷಣೆ ಮುಗಿದಾಗ, ವೇಣುವಿನ ಫಲಾಹಾರವೂ ಮುಗಿದಿತ್ತು.

## ( ೯ )

ದಿನಗಳು ಮೂರು ನಾಲ್ಕು ಉರುಳಿದುವು. ವೇಣು ಮಾಸ್ತರರ ಮನೆಯ ಕಡೆಗೆ ಸುಳಿದಿರಲಿಲ್ಲ. ಅವನು ತನ್ನ ವ್ಯವಹಾರದ ಸಲುವಾಗಿ ಬೇರೊಂದು ಊರಿಗೆ ತೆರಳಿರಬಹುದೆಂದು ಅವರು ಊಹಿಸಿದರು. ಎಳೆಯರು

ಆಗಾಗ ತಾಯಿಯನ್ನು ಪ್ರಶ್ನಿಸುತಿದ್ದರು. “ ಅಮ್ಮಾ, ಪಕ್ಕದ ಮನೆ ಮಾವ ಯಾವಾಗ ಬರುತಾನೆ. ನೋಡು ಆತ ಇಲ್ಲದುದರಿಂದ ನಮಗೆ ತುಂಬಾ ಬೇಸರ. ಅಣ್ಣ ನಮ್ಮನ್ನು ಒಂದು ದಿನವಾದರೂ ಪೇಟೆಗೆ ಕರೆದುಕೊಂಡು ಹೋಗುವುದಿಲ್ಲ; ಸಿನೇಮಾ ತೋರಿಸಲು ಒಯ್ಯುವುದಿಲ್ಲ. ಆದರೆ ಮಾವ ಹಾಗಲ್ಲ. ಪೇಟೆಗೆ ಕರೆದುಕೊಂಡು ಹೋಗಿ ತಿಂಡಿ ತೆಗೆದುಕೊಂಡು ಹೋಗುತಾನೆ. ಸಿನೇಮಾ ತೋರಿಸಲು ಒಯ್ಯುತಾನೆ. ’

“ ಮೂರು ನಾಲ್ಕು ದಿನಗಳಲ್ಲಿಯೇ ಮಾವ ಬರಬಹುದು. ” ಸೀತಮ್ಮ ಒಂದು ಬಾಳೆಯ ಹಣ್ಣನ್ನು ಎರಡು ತುಂಡು ಮಾಡಿ ಮಕ್ಕಳ ಕೈಗಿತ್ತಳು. “ ಹೊರಗೆ ಹೋಗಿ ಆಟವಾಡಿ. ”

ಎಳೆಯರು ಕೈಗಳಿಗೆ ಸಿಕ್ಕಿದ ಬಾಳೆಯ ಹಣ್ಣನ್ನು ಬಾಯೊಳಗೆ ತುರುಕುತ್ತಾ ಬೀದಿಯ ಕಡೆಗೆ ಓಡಿದರು. ಕೈಗಳಿಗೆ ದೊರೆತ ಕಡ್ಡಿಗಳನ್ನೂ ಎಲೆಗಳನ್ನೂ ಹಕ್ಕಿಮನೆ ಕಟ್ಟುವ ಆಟವನ್ನು ಹೂಡಿದರು.

ಬೀದಿಯಲ್ಲಿ ಪ್ರತ್ಯಕ್ಷನಾದ ಪೋಲಿಸು ಸಿಪಾಯಿಯ ಕೆಂಪು ಕುಲಾವಿ ಬಾಲಕರ ಕಣ್ಣುಗಳನ್ನು ಸೆಳೆದಿತು.

“ ನೋಡೋ ಪೋಲಿಸು ನಮ್ಮ ಮನೆಯ ಕಡೆಗೆ ಬರುತಿದಾನೆ. ” ಕಿರಿಯ ದಾಮು ಉಸುರಿದ.

“ ನಮ್ಮ ಮನೆಗಲ್ಲ ಕಣೋ. ಬೇರೆಗೆಲ್ಲೋ ಹೋಗುತಾನೆ. ” ಎಂದ ರಾಮು.

ಅನಿತರಲ್ಲಿ ಪೋಲಿಸು ಸಿಪಾಯಿ ಮಾಸ್ತರರ ಮನೆಯ ಮುಂದೆ ಬಂದಿದ್ದ. ಅವನ ಕಣ್ಣುಗಳು ಬಾಲಕರ ಮೊಗದತ್ತ ಹರಿದವು ಅವನು ಹುಡುಗರನ್ನು ಪ್ರಶ್ನಿಸಿದ. “ ಮಾಸ್ತರ ಶ್ಯಾಮಸುಂದರರಾಯರ ಮನೆ ಯಾವುದು ? ”

“ ಇದೇ ಮನೆ. ” ಬೆರಗುಗಣ್ಣುಗಳಿಂದ ಅವನನ್ನು ನೋಡುತಿದ್ದ ಹುಡುಗರು ಉತ್ತರಿಸಿದರು.

“ ಅವರನ್ನೊಮ್ಮೆ ಬರಹೇಳಿ. ” ಎಂದ ಪೋಲಿಸು ಸಿಪಾಯಿ.

“ ಅಣ್ಣಾ, ಪೋಲಿಸು ನಿನ್ನನ್ನು ಕರೀತಾನೆ. ” ಎಂದು ಕೂಗುತ್ತಾ ಹಿರಿಯ ಹುಡುಗ ರಾಮು ಮನೆಯೊಳಗೆ ಓಡಿದ.

ಮಾಸ್ತರರು ಸ್ನಾನ ಮುಗಿಸಿ ಶಾಲೆಗೆ ಹೊರಡಲು ಅನುವಾಗುತಿದ್ದರು. ಅವರು ಸೊಂಟಕ್ಕೆ ಪಂಚೆಯನ್ನು ಸುತ್ತಿಕೊಳ್ಳುತಿದ್ದರು. ಆಗ ರಾಮುವಿನ ಕೂಗು ಅವರ ಕಿವಿಯನ್ನು ತಲುಪಿತು. " ಏನು ರಾಮು ? " ಎಂದು ಅವರು ಪಂಚೆಯ ನೆರಿಗೆಯನ್ನು ಸರಿಪಡಿಸುತ್ತಾ ಹುಡುಗನನ್ನು ಪ್ರಶ್ನಿಸಿದರು.

" ಪೋಲಿಸು ಬಂದಿದಾನೆ. ನಿನ್ನ ಕಾಣಬೇಕಂತೆ. " ಎಂದು ಉಸುರಿದ ಹುಡುಗ.

ತಮ್ಮ ಮನೆಗೆ ಪೋಲಿಸು ಸಿಪಾಯಿ ಬಂದುದು ಮಾಸ್ತರರಿಗೆ ಸೋಜಿಗ ವೆನಿಸಿತು. ಅವರು ಶರ್ಟಿನ ಗುಂಡಿಗಳನ್ನು ಹಾಕಿಕೊಳ್ಳುತ್ತಾ ಹೊರಗೆ ಬಂದರು. ಜಗಲಿಯ ಮೇಲೆ ಪೋಲೀಸು ಸಿಪಾಯಿ ನಿಂತಿದ್ದ. ಮಾಸ್ತರರೇ ಅವನನ್ನು ಮೊದಲು ಮಾತಾಡಿಸಿದರು. " ಇದೇನು ಅಪರೂಪವಾಗಿ ಇತ್ತ ಕಡೆ ದಯಮಾಡಿಸಿದಿರಿ ? "

" ಇನ್ಸ್‌ಪೆಕ್ಟರರ ಆಜ್ಞೆಯಾಗಿದೆ " ಪೋಲಿಸು ಸಿಪಾಯಿ ಉಸುರಿದ. " ನೀವು ಈಗಲೇ ಆಸ್ಪತ್ರೆಗೆ ಬರಬೇಕು. "

" ಏಕೆ ? " ವಿಸ್ಮಯದ ಕಣಗಳು ಮಾಸ್ತರರ ಕಣ್ಣುಗಳಲ್ಲಿ ಸುಳಿದುವು.

" ನೋಡಿ. ನಿನ್ನೆ ದಿನ ಕುಪ್ಪಣ್ಣನೆಂಬ ಭಾರೀ ಕೇಡಿ ಸಿಕ್ಕಿ ಬಿದ್ದಿದಾನೆ. ಮೂರ್ವಾಡಿ ಲಕ್ಷ್ಮಣ ಚಂದರ ಮನೆ ನುಗ್ಗಿದ್ದ. ಅವನು ಮಹಡಿಯನ್ನೇರಿ ದಾಗ, ಕಳ್ಳ ನುಗ್ಗಿದ ಸುಳಿವು ಶೇಟರಿಗಾಯಿತಂತೆ. ಅವರು ಸದ್ದಿಲ್ಲದೆ ನಮಗೆ ಫೋನು ಮಾಡಿದರು. ನಾವು ಹೋಗಿ ಮನೆಯೊಳಗೆ ನುಗ್ಗಿದೆವು. ಏಣಿಯ ಮೆಟ್ಟಲುಗಳಲ್ಲಿ ಅವನನ್ನು ತಡೆದೆವು. ಕಳ್ಳನಿಗೆ ಪಾರಾಗಲು ಬೇರೆ ಉಪಾಯ ವಿಲ್ಲವಾಯಿತು. ಮಹಡಿಯ ಜಗಲಿಯಿಂದ ಇಪ್ಪತ್ತು ಅಡಿ ಕೆಳಗಿರುವ ಬೀದಿಗೆ ನೆಗೆದು ಬಿಟ್ಟ ಆಸಾಮಿ.

" ಕಳ್ಳನಿಗೆ ಅಪಾಯವೇನಾದರೂ ಆಯಿತೆ ? " ಮಾಸ್ತರರ ಕೊರಳಿಂದ ಹೊರಟ ಪ್ರಶ್ನೆಯಲ್ಲಿ ಕನಿಕರದ ಕಂಪು ಅಡಕವಾಗಿತ್ತು.

"ಇಪ್ಪತ್ತು ಅಡಿ ಮೇಲಿನಿಂದ ನೆಗೆದ ಮನುಷ್ಯ ಉಳಿಯುತಾನೆಯೇ ? ಒಂದು ಕಾಲು ಮುರಿದು ಹೋಗಿದೆ. ಎರಡು ಪಕ್ಕೆಲುಬುಗಳು ಹುಡಿಯಾಗಿವೆ. " ಪೋಲಿಸು ಸಿಪಾಯಿ ಹೇಳಿದ. " ಅವನು ಬದುಕುವುದು ಪ್ರಯಾಸ. ಸಾಯುವ ಮುನ್ನ ನಿಮ್ಮನ್ನೊಮ್ಮೆ ನೋಡಬೇಕೆಂತೆ. "

" ಆದರೆ ಕೇಡಿಗರ ಸಹವಾಸ ನನಗಿಲ್ಲವಯ್ಯ. ಕಳ್ಳ ಮಾಲುಗಳನ್ನು ಮಾರುವ ವ್ಯಾಪಾರಿಯೂ ನಾನಲ್ಲ." ಮಾಸ್ತರರಂದರು.

" ಏನೋ, ನಿಮ್ಮ ಪರಿಚಯವಿರುವ ಮನುಷ್ಯನಾಗಿರಬಹುದು. ಕೊನೆ ಗಾಲದಲ್ಲಿ ನಿಮ್ಮೊಡನೆ ನಾಲ್ಕು ಮಾತುಗಳನ್ನಾಡಲು ಜೀವ ಆಸೆ ಪಡುತಿರ ಬಹುದು. ನಿಮ್ಮನ್ನು ಕರೆದು ತರಲು ಇನ್ಸ್‌ಪೆಕ್ಟರರು ಹೇಳಿದರು."

" ಆಗಲಿ ಬಂದೆ." ಮಾಸ್ತರರು ಮನೆಯೊಳಗೆ ಹೋಗಿ ಕೋಟನ್ನು ತೊಟ್ಟು, ತಲೆಯ ಮೇಲೆ ರುಮಾಲನ್ನಿಟ್ಟುಕೊಂಡು ಹೊರ ಬಂದರು.

× × × ×

ಆಸ್ಪತ್ರೆಯಲ್ಲಿ ಅವಘಡಕ್ಕೆ ತುತ್ತಾದವರಿದ್ದ ಕೋಣೆಯೊಳಗೆ ಮಾಸ್ತ ರರು ಪ್ರವೇಶಿಸಿದರು. ಒಂದು ಮೂಲೆಯಲ್ಲಿ ಮಂಚವೊಂದನ್ನು ಎರಡು ಮೂರು ಮಂದಿ ಪೋಲೀಸು ಸಿಪಾಯಿಗಳು ಸುತ್ತುಗಟ್ಟಿದ್ದರು. ಪಕ್ಕದಲ್ಲಿಯೇ ಇನ್ಸ್‌ಪೆಕ್ಟರರೂ ನಿಂತಿದ್ದರು. ಮಾಸ್ತರರ ಮೊಗ ಕಾಣಲು ಅವರು ನುಡಿದರು. " ಇತ್ತ ಬನ್ನಿ. ಈ ಮನುಷ್ಯನ ಪರಿಚಯ ನಿಮಗಿದೆಯೇ ? "

ಮಂಚದೆಡೆಗೆ ಮಾಸ್ತರರ ಕಾಲುಗಳು ಸರಿದುವು. ರೋಗಿಯ ಮೊಗ ದತ್ತ ಅವರ ಕಣ್ಣುಗಳು ಹೊರಳಿದುವು. ಮೈಮೇಲೆ ವಸ್ತ್ರವನ್ನು ಹೊದೆ ಸಿದ್ದರು. ಕಾಲೊಂದಕ್ಕೆ ದಬ್ಬೆಗಳನ್ನು ಕಟ್ಟಿದ್ದರು. ಆ ಮುಖವನ್ನು ಕಾಣಲು, ಮಾಸ್ತರರಿಗೆ ಉಂಟಾದ ಆಚ್ಚರಿಯನ್ನು ವಿವರಿಸಲು ಅಸದಳ. ಮಂಚದ ಮೇಲೆ ಮಲಗಿದ್ದ ಕೇಡಿಗ ಬೇರಿನ್ನಾರೂ ಅಲ್ಲ. ಅವರ ಪರಿಚಿತನಾತ. ಪಕ್ಕದ ಮನೆಯ ವೇಣುವೇ ಆತನಾಗಿದ್ದ ! ಆತನು ಕದಿಯಲೋಸುಗ ಮನೆ ನುಗ್ಗಿ ಕಾಲು ಮುರಿದುಕೊಂಡನೆಂದು ಬೇರಿನ್ನಾರಾದರೂ ಮಾಸ್ತರರಿಗೆ ಹೇಳಿದ್ದರೆ, ಅವರು ನಂಬುತಿರಲಿಲ್ಲ. ಅವರ ಕಣ್ಣುಗಳು ವೇಣುವಿನ ಮೊಗವನ್ನೇ ನೋಡಿದುವು. ಇರುಳಕವಿದ ಬಾಂದಳದಲ್ಲಿ ತಾರೆಗಳು ಮಿನುಗುವಂತೆ, ಆ ಮೊಗದಲ್ಲಿ ಗುರುತಿಸಿದುವು. ಆದರೆ ಕೊರಳಿಂದ ಮಾತು ಹೊರಡಲಿಲ್ಲ. ಕಣ್ಣುಗಳಿಂದ ಕಂಬನಿಯ ಹೊನಲು ಮಾತ್ರ ಹರಿಯುತಿದ್ದಿತು.

" ಈತನು ನಿಮ್ಮ ಪರಿಚಯದವನೇ ? " ಮಾಸ್ತರರ ಪಕ್ಕದಲ್ಲಿ ನಿಂತಿದ್ದ ಇನ್ಸ್‌ಪೆಕ್ಟರರು ಮರಳಿ ಪ್ರಶ್ನಿಸಿದರು.

" ಈತನು ಕಳ್ಳನೇ ! "

"ಅಹುದು ಸ್ವಾಮೀ ಹೆಸರಾಂತ ಕೇಡಿಗ. ಮೂರು ತಿಂಗಳುಗಳಿಂದ ಈನಗರದಲ್ಲಿ ಎಡೆಬಿಡದೆ ನಡೆಯುತ್ತಿರುವ ಕಳ್ಳತನ, ಸುಲಿಗೆಗಳಿಗೆ ಈತನೇ ಹೊಣೆ. ನಾವು ಕಣ್ಣುಗಳಿಗೆ ಅಂಜನ ಹಾಕಿಕೊಂಡು ಈ ಕುಪ್ಪಣ್ಣನನ್ನು ಅರಸುತ್ತಿದ್ದೆವು. ನಮ್ಮ ಪೂರ್ವ ಪುಣ್ಯದಿಂದ ನಿನ್ನೆ ಸಿಕ್ಕಿಬಿದ್ದ."

ಮಾಸ್ತರರು ವೇಣುವಿನ ಮೊಗದತ್ತ ದೃಷ್ಟಿಯನ್ನು ಚೆಲ್ಲಿದರು. ವೇಣು ಕೈಯನ್ನು ಅಲುಗಿಸಿದ. ತುಟಿಗಳು ಅಲ್ಲಾಡಿದುವು. ಮಂದಸ್ವರ ಅವನ ಕೊರಳಿಂದ ಹೊರಟಿತು. "ಅಂಜಬೇಡಿ. ನನ್ನ ಮಾಹಿತಿಯನ್ನು ಇನ್ಸ್‌ಪೆಕ್ಟರರಿಗೆ ತಿಳಿಸಿ."

"ಈತ ನಮ್ಮ ಪಕ್ಕದ ಮನೆಯಲ್ಲಿಯೇ ಇದ್ದ." ಮಾಸ್ತರರು ಉಸುರಿದರು.

"ಆದರೆ ಕಳ್ಳನೆಂಬುದನ್ನು ನಾವು ಅರಿಯೆವು. ಹೆಸರು ವೇಣು ಗೋಪಾಲನೆಂದು."

"ಎಷ್ಟು ತಿಂಗಳಿನಿಂದ ನಿಮ್ಮ ಪಕ್ಕದ ಮನೆಯನ್ನು ಹಿಡಿದಿದ್ದ?" ಇನ್ಸ್‌ಪೆಕ್ಟರರು ನಡುವೆ ಬಾಯಿ ಹಾಕಿದರು.

"ಮೂರು ತಿಂಗಳಾದುವು." ವೇಣು ಬಂದು ಪಕ್ಕದ ಮನೆಯನ್ನು ಬಾಡಿಗೆಗೆ ಹಿಡಿದ ದಿನವನ್ನು ಮಾಸ್ತರರು ನೆನಪಿಗೆ ತಂದುಕೊಂಡರು.

"ಅಹುದು ಮೂರು ತಿಂಗಳ ಹಿಂದೆ ಇವನು ಈ ನಗರದಲ್ಲಿ ಕಾಲಿರಿಸಿರ ಬೇಕು. ಅಂದಿನಿಂದಲೇ ನಗರದಲ್ಲಿ ಕಳ್ಳತನ ಸುಲಿಗೆಗಳಿಗೆ ಆರಂಭ. ಈತನ ಕಸುಬು ಮೊದಲಾದುವುಗಳ ಬಗ್ಗೆ ಸಂಶಯ ಬರಲಿಲ್ಲವೇ?"

"ಇಲ್ಲ, ವೇಣು ತಾನೊಬ್ಬ ಟ್ರಾವಲಿಂಗು ಏಜೆಂಟು ಎಂದು ಹೇಳುತಿದ್ದ." ಮಾಸ್ತರರಂದರು. "ಒಳ್ಳೆ ಸಭ್ಯನಂತೆ ನಡೆದುಕೊಳ್ಳುತಿದ್ದ. ಕಳ್ಳ ನೆಂದು ನಾವು ಊಹಿಸುವ ಬಗೆ ಹೇಗೆ?"

"ಅಹುದು. ಬಹು ಘಾಟಿ. ಹಿಂದೆ ಒಂದೆರಡು ಸಲ ಜೇಲಿಗೆ ಹೋಗಿ ದ್ದಾನೆ. ಕೊನೆಗಾದರೂ ನಮ್ಮ ಕೈಗೆ ಸಿಕ್ಕಿಬಿದ್ದನಲ್ಲ." ಹಿರಿಯ ಕಾರ್ಯ ವೊಂದನ್ನು ಎಸಗಿದ ಹೆಮ್ಮೆ ಇನ್ಸ್‌ಪೆಕ್ಟರರ ನುಡಿಗಳಲ್ಲಿ ತುಳುಕುತಿದ್ದಿತು. "ಆದರೆ ಉಪ್ಪರಿಗೆಯಿಂದ ನೆಗೆದುದರಿಂದ ಆದ ಜಖುಮಿನಿಂದ ಆತ ಉಳಿಯ ಲಾರ. ಸೆರೆಮನೆಗೆ ಕಳುಹಲಾಗಲಿಲ್ಲವಲ್ಲ ಎಂಬುದೇ ನಮ್ಮ ವ್ಯಸನ."

ಮಾಸ್ತರರು ಮಾತಾಡಲಿಲ್ಲ. ಅವರ ಚಿತ್ತದಲ್ಲಿ ಹಲವು ಆಲೋಚನೆಗಳು ಸುಳಿಯುತಿದ್ದುವು. ಕೊನೆಗೆ "ಈತ ಬದುಕಲಾರನೇ?" ಎಂದು ಅವರು ಪ್ರಶ್ನಿಸಿದರು.

"ಇಲ್ಲ. ಬದ:ಕಲಾರ." ತಲೆಯನ್ನು ಅಲುಗಿಸುತ್ತಾ ಇನ್ಸ್ಪೆಕ್ಟರರು ಸುಡಿದರು. "ಇನ್ನು ಕೆಲವು ತಾಸುಗಳಲ್ಲಿಯೇ ಅವನ ಬಾಳು ಕೊನೆಗೊಳ್ಳುವುದು ಎಂದು ಡಾಕ್ಟರರು ಹೇಳಿದಾರೆ."

ಪೇಣುವಿನ ಕಣ್ಣುಗಳು ಮಾಸ್ತರರ ಮೋರೆಯ ಕಡೆಗೆ ಹೊರಳಿದುವು. ಅವನು ಬೆರಳುಗಳನ್ನು ಅಲುಗಿಸಿ ಅವರನ್ನು ಸನಿಹಕ್ಕೆ ಕರೆದ. ಇನ್ಸ್ಪೆಕ್ಟರರು ಅದನ್ನು ಕಂಡು ಹೇಳಿದರು. "ನೋಡಿ, ಕುಪ್ಪಣ್ಣ ನಿಮ್ಮನ್ನು ಕರೆಯುತಿದಾನೆ. ನಿಮ್ಮೊಡನೆ ಏನೋ ಹೇಳಲು ತವಕಿಸುತಿದಾನೆ. ಹೋಗಿ ಅವನ ನುಡಿಗಳಿಗೆ ಕಿವಿಗೊಡಿ.

ಮಾಸ್ತರರು ಮಂಚದ ಹತ್ತಿರಕ್ಕೆ ಸರಿದರು. ವೇಣು ಅವರ ಕೈಯನ್ನು ಹಿಡಿದುಕೊಂಡ. ಅವನ ಕಣ್ಣುಗಳು ಕಂಬನಿಗರೆಯುತಿದ್ದುವು ಬಹು ಪ್ರಯಾಸದಿಂದ ನಾಲಗೆ ಹೊರಳುತಿದ್ದಿತು. ಬಹುಕಷ್ಟದಿಂದ ಅವನು ಮಾತಾಡಿದ.

"ಮಾಸ್ತರ, ನಾನು ಪಾಪಿ, ನನ್ನನ್ನು ಮನ್ನಿಸಿ. ನಿಮ್ಮ ಸ್ನೇಹ ವಿಶ್ವಾಸಗಳಿಗೆ ನಾನು ಯೋಗ್ಯನಲ್ಲ. ಅಕ್ಕನೂ ನೀವೂ ಮೂರು ತಿಂಗಳು ಕಾಲ ಸ್ನೇಹದ ನೀರೆರೆದು ನನ್ನ ಎದೆಯನ್ನು ತಣಿಸಿದಿರಿ. ಆ ಹಸುಳೆಗಳ ಮೊಗಗಳಲ್ಲಿ ಅರಳುತಿದ್ದ ನಗೆ ಹೂಗಳು ನನ್ನ ಮನದಳಲನ್ನು ಇಲ್ಲವಾಗಿಸುತಿದ್ದುವು."

ಮಾಸ್ತರರ ಕೊರಳಿಂದ ನುಡಿ ಹೊರಡಲಿಲ್ಲ. ಅವರ ಕಣ್ಣುಗಳಲ್ಲಿಯೂ ನೀರ ಹನಿಗಳು ತುಳುಕಿದುವು. ಕೇಡಿಗನ ಹೃದಯದಲ್ಲಿಯೂ ಮಿದುವಾದ ಒಂದು ಭಾಗವಿದೆಯೆಂಬುದನ್ನು ಅವರೀಗ ಕಣ್ಣಾರೆ ಕಂಡರು

"ಮಾಸ್ತರ, ನಾನಿನ್ನು ಬದುಕುವುದಿಲ್ಲ. ಬದುಕಲು ಅಪೇಕ್ಷೆಯೂ ಇಲ್ಲ. ಪಾಪದಿಂದ ನನ್ನ ಕೈಗಳು ಹೊಲಸಾಗಿವೆ. ಆದರೆ ಈ ಕೈಗಳೇ ಕೆಲವು ಒಳ್ಳೆಯ ಕೆಲಸಗಳನ್ನೂ ಎಸಗಿವೆ. ಅವೇ ನನ್ನ ಪಾಲಿಗೆ ದೊರೆತ ಪಂಚಾಮ್ಯ್ರತ.

ಈ ಬಡಪಾಯಿಯನ್ನು ಆಗಾಗ ನೆನೆಯುತ್ತಿರಿ. ಆದರೆ ಅಕ್ಕನಿಗೆ ಮಾತ್ರ ಈ ಕೊನೆಯನ್ನು ತಿಳಿಸಬೇಡಿ. ತಮ್ಮನ ಮೇಲೆ ಅವರಿಗೆ ಅಪಾರ ವಿಶ್ವಾಸವಿತ್ತು. ತುಂಬಾ ಮಮತೆಯನ್ನಿಟ್ಟಿದ್ದರು. ತಮ್ಮನೊಬ್ಬ ಕೇಡಿಗನೆಂದು ಅವರಿಗೆ ಅರಿವಾದರೆ, ಅವರು ನೊಂದುಕೊಳ್ಳಬಹುದು. ಕೊನೆಯತನಕ ಈ ತಮ್ಮನ ಬಗ್ಗೆ ಅವರಿಗಿರುವ ಭಾವನೆಗಳು ಸವಿಯಾಗಿಯೇ ಉಳಿಯಲಿ! "

" ಆಗಲಿ. ನಿಮ್ಮ ಇಚ್ಛೆಯಂತೆ ನಡೆವೆನು. " ವೇಣುವಿಗೆ ಮಾಸ್ತರರು ಮಾತುಗೊಟ್ಟರು. ಇನ್ನೊಂದು ಪ್ರಶ್ನೆ ಬಂದು ಅವರ ಕೊರಳಲ್ಲಿ ನಿಂತಿತು. ಅದನ್ನು ಉಸುರುವುದು ಲೇಸೇ ಎಂದು ಅವರು ತುಸ ಆಲೋಚಿಸಿದರು. ಅನಂತರ ಅವರು ನುಡಿದರು. " ನನಗೊಂದು ಸಂಶಯವಿದೆ ಕೇಳಲೇ ?

" ಅಗತ್ಯವಾಗಿ ಕೇಳಿ ಮಾಸ್ತರ. " ಎಂದ ಯಾತನೆ ಪಡುತಿದ್ದ ವೇಣು.

" ಪ್ರತಿ ತಿಂಗಳು ಅಪರಿಚಿತ ವ್ಯಕ್ತಿಯೊಬ್ಬರು ನನಗೆ ಧನಸಹಾಯ ಮಾಡುತಿದ್ದರು. ಅವರಾರೆಂಬುದು ನನಗೆ ತಿಳಿಯದು. ಆ ಎಸಕ ನಿಮ್ಮದು ಎಂದು ಮನೆಯಾಕೆಯ ಊಹೆ. "

ವೇಣು ನುಡಿಯಲಿಲ್ಲ. ಕಣ್ಣುಗಳಲ್ಲಿ ಬೆಳಕು ಮಿನುಗಿತು. ಎಳೆ ನಗೆಯು ಹೂ ಬಿಸಿಲು ಮೊಗದ ಮೇಲೆ ಕಳೆಯಾಡಿತು. ಸಂತಸದ ಕದಿರುಗಳು ಮೊಗದಿಂದ ಹೊಮ್ಮಿದುವು.

" ಆ ಗೈಮೆಯನ್ನು ಎಸಗಿದವರು ನೀವೇನು ? " ಮಾಸ್ತರರು ಮರಳಿ ಪ್ರಶ್ನಿಸಿದರು.

" ಹೂಂ– ನಾನು ! ಕೇಡಿಗನಾದ ನಾನು ! " ಎಂಬ ನುಡಿಗಳು ಮಾಸ್ತರರ ಕಿವಿಗಳಲ್ಲಿ ಮಾರುಲಿಗೊಂಡುವು.

# ದಿ ಯುನಾಯಿಟೆಡ್ ಕರ್ನಾಟಕ ಇನ್ಸುರೆನ್ಸ ಕಂಪನಿ ಲಿಮಿಟೆಡ್

## ಹೆಡ್‌ಆಫೀಸ:- ಧಾರವಾಡ

(ಸ್ಥಾಪನೆ ೧೯೨೯)

೧೯೩೮ನೆಯ ವಿಮಾ ಕಾಯದೆಯ ಮೇರೆಗೆ ರಜಿಸ್ಟರ ಆಗಿದ್ದು ಈ ಮೇರೆಗೆ ಸರಕಾರದ ಆಧಾರಪತ್ರ ಮುಂತಾದವುಗಳಲ್ಲಿ ರೂಪಾಯಿ ೨೭,೬,೪೩೬ ಗಳನ್ನು ಪಾಲಿಸಿದಾರರ ಭದ್ರತೆಗಾಗಿ ಇಟ್ಟಿದೆ. ಕಂಪನಿಯ ಜೀವವಿಮಾ ನಿಧಿಯು ರೂಪಾಯಿ ೩,೫೦,೭೪೩ ಗಳಷ್ಟು ಇರುವದರಿಂದ ಪಾಲಿಸಿದಾರರ ಹಿತಸಂರಕ್ಷಣೆ ಪೂರ್ಣವಾಗಿದೆ. ಕರ್ನಾಟಕದ ಬಂಡವಾಳ, ಕನ್ನಡಿಗರ ಆಡಳಿತ, ಕನ್ನಡ ನಾಡಿನ ಆರ್ಥಿಕ ಉನ್ನತಿಯನ್ನೇ ಕೋರುವ ಈ ಉತ್ತಮ ವಿಮಾ ಕಂಪನಿಯಲ್ಲಿ ಎಲ್ಲರೂ ಪಾಲಿಸಿ-ಸಾಲುಗಳನ್ನು ಪಡೆಯಬೇಕು.

ಕರ್ನಾಟಕದ ಎಲ್ಲ ಜಿಲ್ಹೆಗಳಿಂದಲೂ ಏಜಂಟರಾಗಬಯಸುವವರು ಈ ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

| | |
|---|---|
| **ಎಂ. ಗೋವರ್ಧನರಾವ** | **ಎ. ಎಸ್. ಶಿಣೈ** |
| ಮ್ಯಾನೇಜರ | ಮ್ಯಾನೇಜಿಂಗ ಡೈರೆಕ್ಟರ |

**ಸಂಘಟನಾ ಕಚೇರಿಗಳು :** ಹೈದರಾಬಾದ, ಮಂಗಳೂರು

**ಶಾಖಾ ಕಾರ್ಯಾಲಯಗಳು :** ಮುಂಬಯಿ, ಬೆಂಗಳೂರು ನಗರ, ಉಡುಪಿ, ಅಲ್ಲೆಪ್ಪಿ (ಕೋಚೀನ)